# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ, ಸಂಚಿಕೆ ೪೭ - ಜನವರಿ ೨೦೨೪



ಶಿಶಿರಬಿಂದು

## 75ನೇ ಗಣರಾಜ್ಯೋತ್ಸವದ ಶುಭಾಶಯಗಳು

KARNATAKA CULTURAL ORGANIZATION BRINDAVANA (KCOB) NJ, USA

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ



KARNATAKA CULTURAL ORGANIZATION BRINDAVANA (KCOB) NJ, USA

# ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ

# ಪರಿವಿಡಿ


ಸಂಪಾದಕೀಯ - ಅಯೋಧ್ಯೆಯಲ್ಲಿ ಶ್ರೀ ರಾಮನ ಹೆಜ್ಜೆ................೩

ಅಧ್ಯಕ್ಷರ ಅಪೂರ್ವ ಅಂಕಣ..................................೫

ಸುಧಾರಣೆ.................................................................೭

ಬರಹಗಳು...........................................................೯

ಪ್ರವಾಸ ಕಥನ...........................................................೩೪

ಕವನಗಳು...........................................................೪೨

ಚಿತ್ರಕಲೆ................................................................೪೬

ಚಿಣ್ಣರ ಮುತ್ತುಗಳು............................................೪೯

ಕ್ಯಾಮೆರಾ ಕಣ್ಣು..........................................................೫೭

# <u>*ಸಂಪಾದಕೀಯ*</u>

## ಅಯೋಧ್ಯೆಯಲ್ಲಿ ಶ್ರೀ ರಾಮನ ಹೆಜ್ಜೆ

ರೋಚಕ ಇತಿಹಾಸದ ಭೂಮಿಯಲ್ಲಿ ಭವ್ಯ ಮಂದಿರದ ಕನಸು ಸಾಕಾರ. ಅಯೋಧ್ಯೆಯಲ್ಲಿ ರಾಮನ ಪ್ರತಿಷ್ಠಾಪನೆಗೆ ದಿನಗಣನೆ ಶುರುವಾಗಿದೆ. ದಶಕಗಳ ನಿರೀಕ್ಷೆ ಕೈಗೂಡಲು ಮುಹೂರ್ತ ನಿಗದಿಯಾಗಿದೆ. ದೀಪಾವಳಿ ಕಳೆದು ಬರುವ ಸಂಕ್ರಾಂತಿಯೇ ಶುಭ ದಿನ. ಭವ್ಯ ಮಂದಿರದಲ್ಲಿ ರಾಮ ಪ್ರಜ್ವಲಿಸಿದ್ದಾನೆ. ಕೊನೆ ಹಂತದ ಶಿಲ್ಪಿಗಳ ಕೈ ಚಳಕ, ಕಟ್ಟಡಗಳಿಗೆ ಸುಣ್ಣ ಬಣ್ಣ ಬಳಿದು ಶೃಂಗರಿಸುವ ತರಾತುರಿ,ಗಡಿಬಿಡಿಯಿಂದ ಓಡಾಡುವ ವಸ್ತು ತಜ್ಞರು, ಇದರ ನಡುವೆ ಶ್ರೀ ರಾಮನ ಗೆಜ್ಜೆ ಸಪ್ಪಳ, ಇದೆಲ್ಲವನ್ನು ಕಣ್ಣುತುಂಬಿ ಕೊಳ್ಳುತ್ತಿರುವ ಪ್ರವಾಸಿಗರು. ಕಣ್ಣು ಹಾಯಿಸಿದ ಕಡೆಯೆಲ್ಲ ದೇವಲೋಕದ ದೃಶ್ಯ.

ಹೌದು ಕೋಟ್ಯಂತರ ಭಾರತೀಯರು ತಲೆಮಾರುಗಳಿಂದ ಎದುರು ನೋಡುತ್ತಿರುವ ರಾಮ ಜನ್ಮ ಭೂಮಿಯಲ್ಲಿ ರಾಮನ ಪ್ರತಿಷ್ಠಾಪನೆಯ ಪುಣ್ಯ ಸಮಯ ಬಂದೇ ಬಿಟ್ಟಿದೆ. ರಘುನಂದ, ಸೀತಾಪತಿ, ಸರ್ವಧರ್ಮ ಸಹಿಷ್ಣು ವ್ಯಕ್ತಿತ್ವದ ಆಧರ್ಶ ಪುರುಷ ಶ್ರೀ ರಾಮನನ್ನು ಭವ್ಯ ಮಂದಿರದಲ್ಲಿ ಪ್ರಾಣ ಪ್ರತಿಷ್ಠೆ ಮಾಡಲು ಮುಹೂರ್ತ ನಿಗದಿಯಾಗಿದೆ. ನೂರಾರು ವರ್ಷಗಳ ನಂತರ ಗತ ವೈಭವ ತುಂಬಿಕೊಳ್ಳುತ್ತಿರುವ ಅಯೋಧ್ಯೆ ಇತಿಹಾಸ ಇನ್ನು ರೋಚಕ. ಅರಣ್ಯದಿಂದ ಸುತ್ತುವರಿದ ಅಯೋಧ್ಯೆಯನ್ನು ವಿಕ್ರಮಾದಿತ್ಯನು ಶೋಧನೆಯ ಬಳಿಕ ಅದು ರಾಮ ಜನ್ಮ ಭೂಮಿ ಎಂಬುದನ್ನು ಖಚಿತಪಡಿಸಿಕೊಳ್ಳುತಾನೆ. ಋಷಿಮುನಿಗಳಿಂದ ಸ್ಥಳದ ಮಹಿಮೆಯನ್ನು ತಿಳಿದು ಭವ್ಯವಾದ ಮಂದಿರ ಮತ್ತು ಸುತ್ತಲಿನ ಪ್ರದೇಶವನ್ನು ಅಭಿವೃದ್ಧಿ ಮಾಡಿದನು. ಉತ್ತರದ ಅಯೋಧ್ಯೆಯಿಂದ ದಕ್ಷಿಣದ ಕನ್ಯಾಕುಮಾರಿ ದಾಟಿ ಲಂಕೆ ವರೆಗೆ ಕುರುಹುಗಳಿಂದಲೇ ಸಾಕ್ಷೀಕರಿಸುವ ಶ್ರೀ ರಾಮನ ಬದುಕು ಭಾರತೀಯರೊಂದಿಗೆ ಬೆಸೆದಿದೆ.

೨೦೨೪ ಜನವರಿ ೨೪ ರಂದು ಶ್ರೀ ರಾಮನ ಪ್ರಾಣ ಪ್ರತಿಷ್ಠೆ ಸಮಾರಂಭಕ್ಕೆ ಎಲ್ಲ ತಯಾರಿ ನಡೆದಿದೆ. ರಾಮ ಮಂದಿರದ ಗರ್ಭಗುಡಿಯಲ್ಲಿ ಎರಡು ಮೂರ್ತಿಗಳು ಪ್ರತಿಷ್ಠಾಪನೆ ಆಗಲಿದೆ. ಅದರಲ್ಲಿ ಸಣ್ಣ ಮೂರ್ತಿಯನ್ನು ಮೈಸೂರಿನ ಶಿಲ್ಪಿಯೇ ತಯಾರಿಸುತ್ತಿದ್ದಾರೆ ಎಂಬುದು ಹೆಮ್ಮೆಯ ವಿಷಯ. ಎತ್ತರದ ಮುಖ್ಯ ಮೂರ್ತಿಯನ್ನು ಮೂರು ರಾಜ್ಯಗಳ ಕಲಾವಿದರು ತಯಾರಿಸುತ್ತಿದ್ದಾರೆ.

ಮಂದಿರದ ಮುಖ್ಯ ವಿಶೇಷಗಳು

ಆವರಣ ವಿಸ್ತಿರ್ಣ - ೨.೭ ಎಕರೆ

ಮಂದಿರ ವಿಸ್ತೀರ್ಣ -೫೭,೪೦೦ ಅಡಿ

ಮಂದಿರದ ಎತ್ತರ - ೧೬೧ ಅಡಿ

ಮಹಡಿ --೦೩

ಮಂದಿರದ ದ್ವಾರ- ೧೨

ಸಂಪಾದಕ ವರ್ಗದ ಪರವಾಗಿ,

ಧನ್ಯವಾದಗಳೊಂದಿಗೆ,

**ಸಂಪಾದಕ ವರ್ಗ:**



**ಉಷಾ ಗಣಪತಿ**



**ಕೆ.ರಾಘವೇಂದ್ರ**



**ಪವಿತ್ರಾ ರಾಜೀವ್**



**ಚಂದ್ರ**



**ಗಾಯತ್ರಿ**



**ವಿನಯ್**

KARNATAKA CULTURAL ORGANIZATION BRINDAVANA (KCOB) NJ, USA
ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ
ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ

# ಅಧ್ಯಕ್ಷರ ಅಪೂರ್ವ ಅಂಕಣ

ಬೃಂದಾವನ ಬಂಧು ಬಾಂಧವರೆಲ್ಲರಿಗೂ ನಮಸ್ಕಾರ.

ನೋಡ ನೋಡುತ್ತಾ, ಬೃಂದಾವನದಲ್ಲಿ ನಮ್ಮ ಅಪೂರ್ವ ತಂಡಕ್ಕೆ ಒಂದು ವರ್ಷ ಆಯಿತು. ಈ ವರ್ಷ ಬೃಂದಾವನ ವಾಣಿಯ ಜೊತೆಗೆ ಅಪೂರ್ವ ತಂಡವು ಪ್ರಾರಂಭಿಸಿದ ಅಪೂರ್ವ ಪುಸ್ತಕ ಚಾವಡಿಯಲ್ಲಿ, ಶ್ರೀ ಭಾಸ್ಕರ್ ತೈಲಗೇರಿ ಹಾಗೂ ಶ್ರೀ ನರಸಿಂಹ ಮೂರ್ತಿಯವರ ಮುಂದಾಳ್ವಿಕೆಯಲ್ಲಿ, ಪ್ರತಿ ತಿಂಗಳು ಒಂದು ಪುಸ್ತಕದ ವಿಮರ್ಶೆ ನಡೆದುಕೊಂಡು ಬಂದಿದೆ. ಹೆಚ್ಚು ಓದಬಹುದು, ಕಡಿಮೆ ಓದಬಹುದು. ಒಟ್ಟಿನಲ್ಲಿ, ಭಾಗವಹಿಸುವ ಓದುಗರು, ಆಯ್ದ ಪುಸ್ತಕದ ಬಗ್ಗೆ, ತಮ್ಮ ಅಭಿಪ್ರಾಯವನ್ನು ಹಂಚಿಕೊಳ್ಳುವುದು, ನಮ್ಮ ಬೃಂದಾವನಿಗರಿಗೆ ಉತ್ತಮ ಅವಕಾಶ ಎಂದು ವ್ಯಕ್ತಪಡಿಸಿದ್ದಾರೆ. ಇತ್ತೀಚಿಗೆ ಶ್ರೀ ತ. ರಾ. ಸು. ರವರ "ಹಂಸಗೀತೆ" ಹಾಗೂ ಕೋಟ ಶಿವರಾಮ ಕಾರಂತರ "ಮೂಕಜ್ಜಿಯ ಕನಸುಗಳು" ಪುಸ್ತಕದ ಬಗ್ಗೆ ವಿಮರ್ಶೆ ಮಾಡಲಾಯಿತು.

ಕಳೆದ ಬೃಂದಾವನ ವಾಣಿ ಸಂಚಿಕೆಯ ನವರಾತ್ರಿಯಿಂದ ಈ ಸಂಚಿಕೆಯ ಕ್ರಿಸ್ಮಸ್ ಹಬ್ಬದ ಮಧ್ಯೆ, ಬೃಂದಾವನದಲ್ಲಿ ಎಷ್ಟೆಲ್ಲ ನಡೆದು ಹೋಯ್ತು. ಹೌದು, ನಮ್ಮ ಬೃಂದಾವನ ಬಳಗವು ಬಹುತೇಕ busy ಬಂಧು ಬಾಂಧವರ ಬಳಗ.

ದೀಪಾವಳಿಯ ಜೊತೆಗೆ ೫ಕೆ ಓಟದಲ್ಲಿ ಓಡುತ್ತಾ, ಓಡಿಸುತ್ತಾ, ಆರೋಗ್ಯಕರ ವಾತಾವರಣ ಬೆಳೆಸುವ ಪ್ರಯತ್ನ ಮುಂದುವರೆಯುತ್ತಿದೆ.
ನಮ್ಮವರು ನವೆಂಬರ್ ೫ರೆಂದು, ನಾರ್ಥ್ ಬ್ರನ್ಸ್ವಿಕ್ ಕಮ್ಯುನಿಟಿ ಪಾರ್ಕ್ ನಲ್ಲಿ, ಕರ್ನಾಟಕ ರಾಜ್ಯೋತ್ಸವವನ್ನು ಆಚರಣೆಯೊಂದಿಗೆ, ನಮ್ಮ ಕನ್ನಡದ ಧ್ವಜ ಲಾಂಛನದೊಂದಿಗೆ, ೫ಕೆ ಓಟವನ್ನು ಪ್ರಾರಂಭಿಸಿದರು. ಜೊತೆಗೆ, "Be the Match " ಸಂಸ್ಥೆಯಿಂದ ಕ್ಯಾನ್ಸರ್ ಚಿಕಿತ್ಸೆಗಾಗಿ ಸೆಲ್ ದಾನ ನೋಂದಾವಣಿ ಯೋಜನೆಯಲ್ಲಿ ಬೃಂದಾವನಿಗರು ಭಾಗವಹಿಸಿದರೆ, ತದನಂತರ ನವೋದಯ ಕನ್ನಡ ಕೂಟದ ದೀಪಾವಳಿ ಕಾರ್ಯಕ್ರಮದಲ್ಲೂ DKMS ಸಂಸ್ಥೆಯವರ ಜೊತೆ ಮುಂದುವರೆಸಲಾಯಿತು. ಇದಕ್ಕೇ ನಾವು ಒಂದು "ಕ-mmunity" ಅನ್ನುವುದು.

ಈ "ಕ-mmunity" ಯು, ನಮ್ಮ ಕನ್ನಡದ ಕ ಹಾಗೂ ಅಡಗಿರುವ " i "ಗೆ, ಬೃಂದಾವನ communityಯಲ್ಲಿ ನಮ್ಮೆಲ್ಲರಿಗೂ ಸಿಕ್ಕಿರುವ "immunity". ನಾವೆಲ್ಲರೂ ನಮ್ಮವರಿಗಾಗಿ ಸಹಾಯಹಸ್ತ ಚಾಚುತ್ತೇವೆ ಅನ್ನುವ ಸಮಾಧಾನ ಇದೆ.
ಹೀಗೆಯೇ ಬೃಂದಾವನಿಗರು ಚಾಚಿರುವ ಸಹಾಯ ಹಸ್ತಗಳಿಂದ, Home Front ನವರಿಗಾಗಿ ಹೊಸ ವರ್ಷದಲ್ಲಿ, ಹೊಸ ಭರವಸೆಯನ್ನು ಮೂಡಿಸುವ ಅಭಿಲಾಷೆಯನ್ನು ಹೊಂದಿದ್ದೇವೆ.

ಇತ್ತ, ನಮ್ಮ ಬೃಂದಾವನದ ಬೆನ್ನೆಲುಬಾಗಿರುವ ಸ್ಫೂರ್ತಿದಾಯಕ ಯುವ ಬೃಂದಾವನಿಗರು, ವರ್ಷಪರ್ಯಂತ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾ, ಸ್ವಯಂ ಪ್ರೇರಿತ ಸಮಾಜ ಸೇವೆಯ ಜೊತೆ, ವಿವಿಧ ಕ್ಷೇತ್ರಗಳ ಬಗ್ಗೆಯೂ, ಇನ್ನೂ ಹೆಚ್ಚಿನ ಆಸಕ್ತಿ ಬೆಳೆಸುತ್ತಾ ಇದ್ದಾರೆ. ೫K ಓಟದಲ್ಲಿ Bone Marrow Match ಬಗ್ಗೆ ಮಾಹಿತಿ ಪಡೆದರೆ, ಇತ್ತೀಚಿಗೆ, meal bag ವಿತರಣೆಯ ಪ್ರಯುಕ್ತ ನ್ಯೂ ಯಾರ್ಕ್ ನಲ್ಲಿ ಭೇಟಿಯಾದಾಗ, ಜೊತೆ ಜೊತೆಗೆ, ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಯುವ ಬೃಂದಾವನಿಗರು, ವಿವಿಧ ಉದ್ಯೋಗಾವಕಾಶಗಳ ಬಗ್ಗೆ ಮಾರ್ಗದರ್ಶನ ನೀಡಿದರು.

ನಿಮಗೆ ಈಗಾಗಲೇ ತಿಳಿದಿರುವಂತೆ, ಈ ವರ್ಷ ಕಾರಣಾಂತರಗಳಿಂದ, ಬೃಂದಾವನದ ಮಕ್ಕಳೋತ್ಸವದ ಸ್ಪರ್ಧೆಗಳು, ವಾರ್ಷಿಕೋತ್ಸವ ಸಮಾರಂಭ, ಸರ್ವಸದಸ್ಯರ ಸಭೆ ಎಲ್ಲವನ್ನೂ ಬೇರೆ ಬೇರೆ ಹಂತಗಳಲ್ಲಿ ನಡೆಸುತ್ತಿದ್ದೇವೆ. ಸಾಮಾನ್ಯವಾಗಿ, ಬೃಂದಾವನ ವಾರ್ಷಿಕೋತ್ಸವ/ ಮಕ್ಕಳೋತ್ಸವ ಸಮಾರಂಭದ ಜೊತೆ ನಡೆಸಿಕೊಂಡು ಬಂದಿದ್ದ, ಬೃಂದಾವನದ ಸರ್ವ ಸದಸ್ಯರ ಸಭೆಯನ್ನು, ನೆರೆದಿದ್ದ ಸ್ಥಳೀಯ ಅಪೂರ್ವ ಕಾರ್ಯಕಾರಿ ಸಮಿತಿಯ ಜೊತೆ, ಸದಸ್ಯರು zoom ನಲ್ಲಿ ಭಾಗವಹಿಸುವ ಅವಕಾಶ ಕಲ್ಪಿಸಲಾಯಿತು.

ಹಾಗೆಯೇ, ಬೃಂದಾವನ ಸ್ಪರ್ಧೆಯ ಪ್ರಯುಕ್ತ, ಪ್ರತ್ಯೇಕವಾಗಿ, ಗುರುವಾಯೂರಪ್ಪನ್ ದೇವಸ್ಥಾನದ ಸರಸ್ವತಿ ಮಂದಿರದಲ್ಲಿ, ವೇದಿಕೆಯ ಹೆಸರಿಗೆ ತಕ್ಕಂತೆ, "ಕನ್ನಡ ಭಾವಗೀತೆ ಹಾಡು" ಹಾಗೂ " ಕನ್ನಡ ಸಂಭಾಷಣೆ" ಸ್ಪರ್ಧೆಗಳನ್ನು ಆಯೋಜಿಸಲಾಯಿತು.
ಇನ್ನು, ಬೃಂದಾವನ ವಾರ್ಷಿಕೋತ್ಸವ/ ಮಕ್ಕಳೋತ್ಸವದ ಆಚರಣೆಯ ತಯಾರಿ ಬಿರುಸಿನಿಂದ ನಡೆಯುತ್ತಿದೆ. ಈ ಕಾರ್ಯಕ್ರಮಕ್ಕೆ ನಿಮ್ಮೆಲ್ಲರಿಗೂ ಹಾರ್ದಿಕ ಸ್ವಾಗತ.

ಬೃಂದಾವನದಲ್ಲಿ ಹೊಸ ವರುಷದ ಹೊಸ ಬೆಳಕು ಮೂಡುತಿದೆ. ಮುಂಬರುವ ಜನವರಿ ೧೪ ರಂದು ಮಕರ ಸಂಕ್ರಮಣದ ಹೊಸಜ್ಯೋತಿಯನ್ನು ಬೆಳಗಿಸಿ, ಬೃಂದಾವನದಲ್ಲಿ, ಮುಂದಿನ ವರ್ಷ ನಡೆಯುವ ೨೦ನೆಯ ವಾರ್ಷಿಕೋತ್ಸವದ ತಯಾರಿ ನಡೆಸೋಣ. ನಿಮ್ಮೆಲ್ಲರ ಸಹಕಾರ, ಶುಭ ಹಾರೈಕೆ, ನಿಮ್ಮೀ ಬೃಂದಾವನದ ಅಪೂರ್ವ ಯೋಜನೆಗಳಿಗೆ ಸ್ಫೂರ್ತಿ ನೀಡುತ್ತಾ ಇರಲಿ ಎಂಬ ಆಶಿಸುತ್ತೇವೆ.

ಹಾಗೆಯೇ ಈ ಸಲದ "ಬೃಂದಾವನ ವಾಣಿಯ" ಸಂಚಿಕೆಯನ್ನು, ಓದಿ ಆಸ್ವಾದಿಸಲು ನಿಮ್ಮೆಲ್ಲರನ್ನೂ ಸ್ವಾಗತಿಸುತ್ತ, ನಮ್ಮೀ ಬೃಂದಾವನದಲ್ಲಿ ನಿಮ್ಮೀ ಸುಮಧುರ, ಸ್ನೇಹ ಸಮ್ಮಿಲನ ಹೀಗೆಯೇ ಮುಂದುವರೆಯಲಿ ಎಂದು ಆಶಿಸುತ್ತಾ, ಸಂಕ್ರಾಂತಿಯಂದು ನಡೆಯುತ್ತಿರುವ ಬೃಂದಾವನ ವಾರ್ಷಿಕೋತ್ಸವ/ಮಕ್ಕಳೋತ್ಸವಕ್ಕೆ ನಿಮ್ಮೆಲ್ಲರನ್ನು ಬರಮಾಡುತ್ತಾ,



**ಅರ್ಚನಾ ಆಚಾರ್ಯ,**
**ಅಪೂರ್ವ ತಂಡ, ಬೃಂದಾವನ, ನ್ಯೂ ಜೆರ್ಸಿ.**



# ಸುಧಾರಣೆ

**ಶ್ರೀ ಯೋಗೀಂದ್ರ ಭಟ್ ಉಳಿ.** *ಶ್ರೀ ಕೃಷ್ಣವೃಂದಾವನ, ನ್ಯೂಜೆರ್ಸಿ.*

ಬದಲಾವಣೆಯೆನ್ನುವುದು ನಮ್ಮ ಬದುಕಿನ ಸಹಜ ಧರ್ಮ. ಹುಟ್ಟಿನಿಂದ ಸಾಯುವ ತನಕ ಒಂದೇ ರೀತಿ ಇರುವವರು ಯಾರೂ ಇಲ್ಲ. ಕಾಲಕಳೆದಂತೆ ರೂಪ ಮತ್ತು ನಮ್ಮ ದೇಹದ ಸಾಮರ್ಥ್ಯದಲ್ಲಿ ಗಂಭೀರ ವ್ಯತ್ಯಾಸಗಳಾಗುತ್ತವೆ. ಇಂದು ಮಕ್ಕಳಾಗಿದ್ದವರು ನೋಡುನೋಡುತ್ತಿದ್ದಂತೆ ಯುವಕರಾಗಿ ಬಿಡುತ್ತಾರೆ. ಮೊನ್ನೆ ಮೊನ್ನೆಯ ತನಕ ಚಿಗುರು ಮೀಸೆಯನ್ನು ತಿರುವಿಕೊಂಡು, ಮುಂಗುರುಳನ್ನು ಸರಿಸಿಕೊಂಡು ಬಿಗುಮಾನದಿಂದ ತಿರುಗಾಡುತ್ತಿದ್ದವರು ಇಂದು ಮುದುಕರಾಗಿಬಿಟ್ಟಿದ್ದಾರೆ.

ಯುವಕರನ್ನು ಮಕ್ಕಳಾಟಿಕೆ ಬಿಡುವುದಿಲ್ಲ. ವಯಸ್ಸಾದವರಿಗೆ ಯವ್ವನದ ಕನವರಿಕೆ ಮುಗಿಯುವುದಲ್ಲ. ಒಟ್ಟಿನಲ್ಲಿ ಸಹಜವಾಗಿ ಸಂಭವಿಸುವ ಬದಲಾವಣೆಯನ್ನು ಸುಲಭದಲ್ಲಿ ಯಾರೂ ಒಪ್ಪಿಕೊಳ್ಳುವುದಿಲ್ಲ. ಚಿರ ಯುವಕ, ಯುವತಿಯರಂತೆ ಕಾಣಲು ಮುಖಕ್ಕೆ ಬಣ್ಣ ಬಳಿದು ಕೊಳ್ಳುತ್ತಾರೆ. ವಯಸ್ಸನ್ನು ಇರುವುದಕ್ಕಿಂತ ಕಡಿಮೆಮಾಡಿ ಹೇಳುತ್ತಾರೆ. ನೆರೆದ ಗಡ್ಡ ಮತ್ತು ಅಳಿದುಳಿದ ತಲೆಯ ಕೂದಲಿಗೆ ಕಪ್ಪು ಬಣ್ಣ ಹಚ್ಚಿ ತಮಗೆ ವಯಸ್ಸಾಗಿರುವುದನ್ನು ಮರೆಮಾಚಲು ಯತ್ನಿಸುತ್ತಾರೆ.



ನಾವೆಷ್ಟು ಪ್ರಯತ್ನಿಸಿದರೂ ಕಾಲ ನಿಲ್ಲುವುದಿಲ್ಲ. ನಮಗವನ ಸಂಕೋಲೆಯಿಂದ ಕಳಚಿಕೊಳ್ಳುವುದೂ ಸಾಧ್ಯವಿಲ್ಲ. ಕಾಲ ನಮ್ಮನ್ನು ಸೆಳೆದುಕೊಂಡು ಸಾಗುತ್ತಲೇ ಇರುತ್ತಾನೆ. ಕಾಲಕಾಲದಲ್ಲಿ ಸಂಭವಿಸುವ ಸಹಜ ವ್ಯತ್ಯಾಸಗಳನ್ನು ನಾವು ಸಹಿಸಿಕೊಳ್ಳಲೇಬೇಕು. ಕಾಲನ ತಾಳಕ್ಕೆ ತಕ್ಕಂತೆ ನಾವು ಕುಣಿಯಲೇ ಬೇಕು.

ಬದುಕಿನಲ್ಲಾಗುವ ಬದಲಾವಣೆಗಳನ್ನು ಒತ್ತಾಯ ಪೂರ್ವಕವಾಗಿ ಒಪ್ಪಿಕೊಳ್ಳುವುದು ಅನಿವಾರ್ಯತೆ. ಅದಕ್ಕಿಂತ ಮೊದಲೇ ನಾವು ಸನ್ನದ್ಧರಾಗಿ ನಮ್ಮ ಜೀವನಕ್ರಮವನ್ನು ಸುಧಾರಿಸಿಕೊಳ್ಳುವುದು ಬುದ್ಧಿವಂತಿಕೆ. ಚಿಕ್ಕವರಿದ್ದಾಗ ಮಕ್ಕಳಿಗೆ ನಾವು ಬುದ್ಧಿ ಹೇಳಲೇಬೇಕು. ಮುಂದೆ ಬೆಳೆದಂತೆ ಅವರ ಪ್ರಬುದ್ಧತೆಯನ್ನು ನಾವು ಒಪ್ಪಿಕೊಳ್ಳಬೇಕು. ಆ ಕಾಲಕ್ಕೆ ನಮ್ಮ ಅನೇಕ ಅನುಭವಗಳು ಅಪ್ರಸ್ತುತವೆಂಬ ಸತ್ಯವನ್ನು ಅರ್ಥಮಾಡಿಕೊಳ್ಳಬೇಕು. ಇಲ್ಲವಾದರೆ ಬೆಳೆದು ನಿಂತ ಮಕ್ಕಳನ್ನು ತಿದ್ದಲು ಹೋಗಿ ನಾವೇ ಬುದ್ಧಿಕಲಿಯುವ ಸಂದರ್ಭ ಬಂದರೂ ಬರಬಹುದು.

ಬದುಕಿನುದ್ದಕ್ಕೂ ನಾವು ನಮ್ಮ ಸಾಂಸಾರಿಕ ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳಲು ಪ್ರಯತ್ನಿಸುತ್ತಲೇ ಇರುತ್ತೇವೆ. ನಾವು ಅನುಭವಿಸಿದ ಕಷ್ಟ ನಮ್ಮ ಮಕ್ಕಳಿಗೆ ಬರಬಾರದು. ನಮಗಿಂತಲೂ ಉತ್ತಮ ಜೀವನವನ್ನು ಅವರು ಅನುಭವಿಸಬೇಕು. ಸಮಾಜಿಕವಾಗಿ ನಮ್ಮ ಮನೆತನ ಮತ್ತಷ್ಟು ಗೌರವದಿಂದ ಗುರುತಿಸಿಕೊಳ್ಳಬೇಕು. ಹೀಗೆ ಹತ್ತಾರು ಧ್ಯೇಯಗಳನ್ನಿಟ್ಟುಕೊಂಡು ಸುಧಾರಿತ ಜೀವನಕ್ಕಾಗಿ ಅವಿರತವಾಗಿ ಯತ್ನಿಸುತ್ತೇವೆ. ಮಕ್ಕಳ ಮೇಲೂ ಒತ್ತಡ ಹೇರುತ್ತೇವೆ.

ಆದರೆ ಅದೆಲ್ಲದಕ್ಕಿಂತಲೂ ಮುಖ್ಯವಾಗಿ ಮತ್ತು ನಿರಂತರವಾಗಿ ಸುಧಾರಿಸಬೇಕಾದದ್ದು ನಮ್ಮ ಮನಃಸ್ಥಿತಿ. ಸುಧಾರಣೆಯೆನ್ನುವುದು ಕೇವಲ ಭೌತಿಕ ಸಂಪತ್ತು ಮತ್ತು ಸ್ಪರ್ಧಾತ್ಮಕ ಬದುಕಿಗಷ್ಟೇ ಸೀಮಿತವಾಗಬಾರದು. ನಾವು ಸುಧಾರಿತರು, ಆಧುನಿಕ ಮನಃಸ್ಥಿತಿಯವರು ಎಂದು ತೋರಿಸಿಕೊಳ್ಳುವ ನೆಪದಲ್ಲಿ ನಮ್ಮ ಶ್ರೀಮಂತ ಸಂಸ್ಕೃತಿ, ಪರಂಪರೆಯನ್ನು ಕಡೆಗಣಿಸುವುದು ಮೂರ್ಖತನ. ಚೆನ್ನಾಗಿ ಓದಿ ಸಂಪಾದಿಸುವ ಮಕ್ಕಳು ಸಂಸ್ಕಾರಹೀನರಾಗಿ ಪ್ರಾಣಿಗಳಂತೆ ಬದುಕುವುದನ್ನು ಕಂಡು ಕೊರಗುವ ಹೆತ್ತವರು ಅದೆಷ್ಟೋ ಮಂದಿ ಇದ್ದಾರೆ. ಅವರನ್ನು ನೋಡಿಯಾದರೂ ಕಲಿಯಬೇಕು.

ಸುಧಾರಣೆಯೆಂದರೆ ಕೇವಲ ಆಧುನಿಕತೆಯನ್ನು ಹೊತ್ತು ತಿರುಗುವುದಲ್ಲ. ಮಕ್ಕಳ ಮೇಲಿನ ವ್ಯಾಮೋಹದಿಂದ ಅವರು ಮಾಡಿದ್ದೆಲ್ಲವನ್ನೂ ಈಗಿನ ಕಾಲಕ್ಕೆ ಸರಿಯೆಂದು ಒಪ್ಪಿಕೊಳ್ಳುವುದೂ ಅಲ್ಲ. ಆಧುನಿಕತೆಯೆನ್ನುವುದು ಪರಂಪರಾಗತ ನಂಬಿಕೆಯನ್ನು, ನಮ್ಮ ಧರ್ಮದ ಮತ್ತು ಸಂಸ್ಕೃತಿಯ ಚೌಕಟ್ಟನ್ನೆಂದಿಗೂ ಮೀರಬಾರದು. ಈ ನಿಟ್ಟಿನಲ್ಲಿ ದಾರಿತಪ್ಪಿದ ಮಕ್ಕಳನ್ನೆಂದಿಗೂ ಸಮರ್ಥಿಸಿಕೊಳ್ಳಬಾರದು.

ಇದ್ದಕ್ಕಿದ್ದಂತೆ ಯಾವುದನ್ನೂ ಬದಲಾಯಿಸಲು ಬರುವುದಿಲ್ಲ. ಸೊಟ್ಟಗೆ ಬೆಳೆದುನಿಂತ ಗಟ್ಟಿ ಮರವನ್ನು ಬಗ್ಗಿಸುವುದು ಸಾಧ್ಯವಿಲ್ಲ. ಚಿಕ್ಕ ಗಿಡವಾಗಿರುವಾಗಿಂದಲೇ ಸರಿಯಾದ ಆಧಾರ ಕೊಟ್ಟು ಗಮನಿಸುತ್ತಿದ್ದರೆ ಹಲಸಿನ ಮರವೂ ನೆಟ್ಟಗೆ ಬೆಳೆಯುತ್ತದೆ. ನಮ್ಮ ಮಕ್ಕಳು ನಮ್ಮನ್ನು ನೋಡಿ ಕಲಿಯುತ್ತಾರೆ. ಕಪಟತೆ ಬಿಟ್ಟು ಸಾಂಸ್ಕೃತಿಕ ಚೌಕಟ್ಟಿನ ಗಟ್ಟಿ ನೆಲೆಯಲ್ಲಿ ನಾವು ನೆಟ್ಟಗೆ ಆಧಾರವಾಗಿ ನಿಂತರೆ ನಮ್ಮ ಮಕ್ಕಳೆಂದಿಗೂ ದಾರಿ ತಪ್ಪುವುದಿಲ್ಲ.

.

# ಬರಹಗಳು



# ರಾಮ ಲಲ್ಲಾನ ನಿಕಟ ಸ್ನೇಹಿತ



**ವಿನಯ್ ಕುಮಾರ್ ಜಾನಕಿರಾಮ್**, ಮೈಸೂರು

ಹಳೆಯ ಒಂದು ಕಥೆ ನೆನಪಿಗೆ ಬರುತ್ತಿದೆ.

ಯಾರೋ ಒಬ್ಬ ಸಜ್ಜನರು, ಒಬ್ಬ ದೊಡ್ಡ ಗುರುಗಳ ಜೊತೆತೀರ್ಥಯಾತ್ರೆಗೆ ಹೋದರಂತೆ. ಪ್ರತಿ ಹಂತದಲ್ಲೂ 'ಗುರುಗಳಿಂದ ಅಪ್ಪಣೆಆಗಬೇಕು' ಅಂತಿದ್ರಂತೆ. ಗುರುಗಳಿಂದ ಏನೂ ಉತ್ತರಬರುತ್ತಿರಲಿಲ್ಲ.ಆಂಧ್ರದ ಯಾವುದೋ ಹಳ್ಳಿ ಯಲ್ಲಿ ಗುರುಗಳು ತಂಗಿದ್ದಾರೆ.ಹಳ್ಳಿಯವರು ಬೆಟ್ಟದ ಮೇಲಿರುವ ದೇವರ ಬಗ್ಗೆ ಹೇಳಿದ್ದಾರೆ. ಗುರುಗಳುನೋಡಿ, ಎಂತಹ ದುಃಸ್ಥಿತಿ, ಇಲ್ಲಿ ಪೂಜೆ ಮಾಡುವುದಕ್ಕೂ ಜನರಿಲ್ಲಅಂದುಕೊಂಡು, ಅವರ ಜೊತೆ ಬಂದಿದ್ದ ಸಜ್ಜನರನ್ನು ಕರೆದು, 'ಬೆಟ್ಟದಕೆಳಗಿನ ಪುಷ್ಕರಣಿ ಯಲ್ಲಿ ಜಲಧಾರೆ ಇದೆ. ಮಡಿಯಲ್ಲಿ ತಂದು ಅಭಿಷೇಕಮಾಡಿ, ದಿನವೂ ದೇವರಿಗೆ ಪೂಜೆ ಆಗ್ಲಿ ' ಅಂದು, ತಮ್ಮ ಜೊತೆಯಲ್ಲಿತಂದಿದ್ದ ಗ್ರಂಥಗಳನ್ನು ಆ ಸಜ್ಜನರಲ್ಲೇ ಉಳಿಸಿ, ಅವರು ತಮ್ಮ ಮುಂದಿನಪ್ರಯಾಣ ಬೆಳಸಿದರಂತೆ. ಈತ ಚಾಚು ತಪ್ಪದೆ ಬೆಳಗಿನ ಜಾವದಲ್ಲಿ ಎದ್ದುಪುಷ್ಕರಣಿಯಿಂದ ಜಲ ತಂದು, ಪೂಜೆ ಮಾಡುವರು. ಯಾರಾದರೊಬ್ಬರುಹಳ್ಳಿಯಿಂದ ಬಂದು ಏನಾದರೊಂದು ಭಿಕ್ಷೆ ಕೊಟ್ಟು ಹೋಗುವರು.ಸಜ್ಜನರು ಬಿಡುವಿನ ವೇಳೆಯಲ್ಲಿ ಗ್ರಂಥಗಳನ್ನು ಓದುವರು. ಹೀಗೆ ಕೆಲವುವರ್ಷ ನಡೆಯಿತು.



ಒಮ್ಮೆ ಆಂಧ್ರದ ರಾಜರಿಗೂ, ಪಕ್ಕದ ಕನ್ನಡ ನಾಡಿನ ರಾಜರಿಗೂ ಏನೋಮನಃಸ್ತಾಪವಾಗಿ, ಆಂಧ್ರದ ರಾಜರು, ಪಕ್ಕದ ಕನ್ನಡ ನಾಡಿನ ರಾಜರಮೇಲೆ ಯುದ್ಧ ಸಾರಿದರು. ಆಂಧ್ರದ ಸೈನ್ಯ ಈ ಸಜ್ಜನರು ಇದ್ದ ಹಳ್ಳಿಯಸಮೀಪ ಬೀಡುಬಿಟ್ಟಿದೆ. ಇನ್ನೇನು ಯುದ್ಧ ಪ್ರಾರಂಭವಾಗ ಬೇಕು, ಪಕ್ಕದಕನ್ನಡನಾಡಿನ ರಾಜರಿಂದ ಒಂದು ಪತ್ರ ಬಂದಿದೆ, ಮೋಡಿ ಅಕ್ಷರ, ಕೂಡಿಸಿಕೊಂಡು ಕನ್ನಡದಲ್ಲಿ ಬರೆದಿದ್ದಾರೆ. ಮಹಾರಾಜರಿಂದ ಯಾರಾದ್ರೂ ಓದಿಹೇಳಿ ಅನ್ನುವ ಅಪ್ಪಣೆ ಆಗಿದೆ. ಇಂತಹ ಕುಗ್ರಾಮದಲ್ಲಿ ಯಾರುಸಿಗುತ್ತಾರೆ. ಸಹಜವಾಗಿ ದೂತರು ಹಳ್ಳಿಯವರನ್ನು ಕೇಳಿದ್ದಾರೆ.ಹಳ್ಳಿಯವರು ದೂತರನ್ನು, ಈ ಸಜ್ಜನರ ಹತ್ತಿರ ಕರೆದುಕೊಂಡುಬಂದಿದ್ದಾರೆ. ಅವರು ಓದಿ ಹೇಳಿದ್ದಾರೆ. ಪತ್ರದ ಸಾರಾಂಶ 'ಯುದ್ಧ ಬೇಡ,ನಮಗೆ ಯಾರೋ ನಿಮ್ಮ ಬಗ್ಗೆ ಇಲ್ಲ ಸಲ್ಲದ ಸುದ್ದಿ ಹೇಳಿದ್ದರು, ಅದನ್ನುಪುನಃ ಪರಿಶೀಲಿಸಿ ನೋಡಲಾಗಿ ಅದು ತಪ್ಪೆಂದು ಅರಿವಾಯ್ತು, ನಡೆದಅಚಾತುರ್ಯಕ್ಕೆ ಕ್ಷಮೆ ಇರಲಿ' ಮಹಾರಾಜರಿಗೆ ಬಹಳ ಸಂತೋಷವಾಯ್ತು, ಈ ಸಜ್ಜನರನ್ನು ಕರೆಸಿ, ತಮ್ಮ ಜೊತೆ ಬರಬೇಕೆಂದು, ತಮ್ಮಲ್ಲಿಕೆಲಸ ಮಾಡಿಕೊಂಡು ಇರಬೇಕೆಂದು ಕೇಳಿಕೊಂಡರಂತೆ, ಸಜ್ಜನರು ತಮ್ಮಗುರುಗಳ ಅಪ್ಪಣೆ ಪಡೆದು, ಅವರ ಆಸ್ಥಾನದಲ್ಲಿ ಮಹಾರಾಜರಸಲಹೆಗಾರ ನಾಗಿ ಬಹಳಷ್ಟು ಕಾಲ ಕೆಲಸ ಮಾಡಿದರಂತೆ.

ಈ ಕಥೆಯ ತಾತ್ಪರ್ಯ ಇಷ್ಟೇ, ಒಪ್ಪಿಸಿದ ಕೆಲಸವನ್ನು ಆ ಸಜ್ಜನರುಮಾಡಿಕೊಂಡಿದ್ದರು, ಪ್ರತಿಫಲ ಬಯಸದೆ! ಇದು ನಿಜವಾದ ಸೇವೆ. ಅಯೊಧ್ಯೇಯಲ್ಲಿ ರಾಮ ಮಂದಿರಕ್ಕೆ ಶಿಲಾನ್ಯಾಸ ಆಗಸ್ಟ್ 5 2020 ರಂದುನೆರವೇರಿತು, ಜನವರಿ 22ರಂದು ಶ್ರೀ ರಾಮ ಮಂದಿರದ ಪ್ರತಿಷ್ಠಾಪನೆ ಆಗಲಿದೆ. ಈ ಸುಸಂಧರ್ಭದಲ್ಲಿ 'ರಾಮ ಲಲ್ಲಾನ ನಿಕಟ ಸ್ನೇಹಿತ' ಎಂದು ಗೌರವದಿಂದ ಕರೆದ ಇವರನ್ನು ನೆನೆಯೋಣ.

ಸಾಮಾನ್ಯವಾಗಿ, ರಾಷ್ಟ್ರೀಯ ಸ್ವಯಂ ಸೇವಕ ಸಂಘದಲ್ಲಿ ಹಾಗು ವಿಶ್ವಹಿಂದೂ ಪರಿಷದ್ ನಲ್ಲಿ, ವ್ಯಕ್ತಿ ಪರಿಚಯ ಕಡಿಮೆ, ಅವರ ಕೈಂಕರ್ಯದಿಂದ, ಅವರೆಲ್ಲರಿಗೂ ಪರಿಚಿತರಾಗಿರುತ್ತಾರೆ. ಆದರೆ ಹೊರ ಜಗತ್ತಿಗೆಅವರು ಅಪರಿಚಿತರೇ!!





# ಪತಞ್ಜಲಿ ಯೋಗ ಸೂತ್ರ

ಅನನ್ತ ಅಮ್ಬುಗ

ಓಂ

ಪತಞ್ಜಲಿ ಯೋಗ ಸೂತ್ರ: ಸಮಾಧಿ ಪಾದ ಸೂತ್ರ ೧೭

ಅಪ್ಪೋ ದೀಪೋ ಭವ - ನಿನಗೆ ನೀನೇ ಬೆಳಕಾಗು -ಭಗವನ್ ಬುದ್ಧ

ಯೋಗೇನ ಚಿತ್ತಸ್ಯ ಪದೇನ ವಚಾಮ್ ಮಲಮ್ ಶರೀರಸ್ಯ ಚ  ವೈದ್ಯಕೇನ ಯೋಪಾಕರೋತ್ತಮ್ ಪ್ರವರಮ್ ಮುನೀನಾಮ್
ಪತಞ್ಜಲಿಂ ಪ್ರಾಞ್ಜಲಿರಾನತೋಸ್ಮಿ

ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂ ಚಲಂ  ಅಭ್ಯಾಸೇನ ತು ಕೌನ್ತೇಯ ವೈರಾಗ್ಯೇಣ ಚ ಗೃಹ್ಯತೇ
ಹೇ ಮಹಾಬಾಹೋ  ಸಂಶಯವೇ ಇಲ್ಲ! ಮನಸ್ಸನ್ನು ನಿಗ್ರಹಿಸುವುದು ಬಹಳ ಕಷ್ಟವಾದುದು, ಆದರೆ, ಅಭಾಸ ಮತ್ತು ವೈರಾಗ್ಯದಿನ್ದ ಅದನ್ನು ಹಿಡಿಯಬಹುದು, ನಿಗ್ರಹಿಸಬಹುದು - ಭಗವಾನ್ ಕೃಷ್ಣ, ಭಗವದ್ಗೀತೆ ಧ್ಯಾನಯೋಗ ಶ್ಲೋಕ ೩೫

ಸತಿಸಮ್ಬೋಗಾಙ್ಗಮ್ ಭವೇತಿ ವಿವೇಕ ನಿಸ್ಸಿತಮ್ ವಿರಾಗ ನಿಸ್ಸಿತಮ್ ನಿರೋಧ ನಿಸ್ಸಿತಮ್ ವಸ್ಸೋಗ್ಗ ಪರಿಣಾಮಿಮ್ - ಬೋಧಿ ಸ್ಥಿತಿಯನ್ನು ತಲುಪಬೇಕಾದರೆ, ಮೋಕ್ಷವನ್ನು ಪಡೆಯಬೇಕಾರದರೆ, ನಿಶ್ಚಯವಾಗಿಯೂ ವಿವೇಕವು ಬೇಕು, ಖಣ್ಡಿತವಾಗಿಯೂ ವೈರಾಗ್ಯವು ಬೇಕು, ನಿಶ್ಚಯವಾಗಿಯೂ ನಿರೋಧವು ಬೇಕು ಮತ್ತು ಇವು ಮೂರೂ ಇದ್ದಾಗ ಅದರ ಪರಿಣಾಮದಿನ್ದ ವಸ್ಸಗ್ಗವು ( ವಿಸರ್ಗ, ನಿರ್ವಾಣ) ಉಣ್ಟಾಗುತ್ತದೆ.  - ಭಗವಾನ್ ಬುದ್ಧ ಸಪ್ತ ಭೋಗಾಙ್ಗ

## ಮುನ್ನುಡಿ

ಭಾರತದ ಬಹುತೇಕ ಎಲ್ಲ ದರ್ಶನಗಳೂ ಮುಖ್ಯವಾಗಿ ಸೈದ್ಧಾನ್ತಿಕವಾಗಿದೆ. ಇವೆಲ್ಲದರಲ್ಲಿಯೂ, ಕೊನೆಗೆ ತಲುಪುವ ತಲುಪಬೇಕಾದ ಸ್ಥಿತಿಯ ಗುಣಲಕ್ಷಣಗಳ ಬೆಗ್ಗ ಚರ್ಚೆಯಾಗುತ್ತದೆಯೇ ಹೊರತು ಆ ಸ್ಥಿತಿಯನ್ನು ತಲುಪುವುದು ಹೇಗೆ ಎಮ್ಬುದರ ಬಗ್ಗ, ಅದರ ಪ್ರಕ್ರಿಯೆಯ ಬಗ್ಗ, ಆ ಮರ್ಗದ ಬಗ್ಗ ಹೆಚ್ಚು ವಿವರಣೆ ಇರುವುದಿಲ್ಲ. ಇಲ್ಲವೇ ಇಲ್ಲ ಎನ್ದಲ್ಲ ಮತ್ತು ಇಲ್ಲದಿರುವುದರಿನ್ದ ಅವುಗಳು, ಅವುಗಳ ಆನ್ತರಿಕ ತರ್ಕಸೀಮೆಗಣುಗುಣವಾಗಿ ಪೂರ್ಣವಲ್ಲ ಎನ್ದೂ ಅಲ್ಲ!  - ಉದಾಹರಣೆಗೆ ಅದ್ವೈತ ವೇದಾನ್ತದಲ್ಲಿ, ತ್ರೈಙ್ಗಿಕ ಮಾರ್ಗವಾದ ಶ್ರವಣ, ಮನನ, ನಿದಿಧ್ಯಾಸನ, ಆಗಮ ಪ್ರೇರಿತ ದರ್ಶಗಳಲ್ಲಿ ಪೂಜೆ, ಅಭಿಷೇಕ ಮುನ್ತಾದ ಕರ್ಮವಚನಗಳನ್ನು ಒನ್ದು ರೀತಿಯಲ್ಲಿ ಮಾರ್ಗಗಳನ್ನಾಗಿ ನೋಡಬಹುದಾದರೂ ಇವುಗಳು ವಿಸ್ತೃತವಾಗಿರದೇ, ಹನ್ತ-ಹನ್ತವಾಗಿ ಪ್ರಕ್ರಿಯಾರೂಪದಲ್ಲಿರದೇ ವರ್ಣನಾತ್ಮಕವಾಗಿದದೇ ಲೇಸೋಕ್ತ ರೀತಿಯಲ್ಲಿ ಹೇಳಲಾಗಿರುತ್ತದೆ. ಅದ್ವೈತದ ಶ್ರವಣವನ್ನು ತೆಗೆದುಕೊಳ್ಳೋಣ - ಇಲ್ಲಿ, ಶ್ರವಣವನ್ನು ಸರಿಯಾಗಿ ಮಾಡಬೇಕಾದರೆ, ಮನಸ್ಸು ಮತ್ತು ಇನ್ದ್ರಿಯಗಳಿಗಿರಬೇಕಾದ ಏಕಾಗ್ರತೆಯನ್ನು ಹೇಗೆ ಸಾಧಿಸುವುದು ಎಮ್ಬ ಪ್ರಶ್ನೆಗೆ ಅದ್ವೈತದಲ್ಲಿ ಮಾರ್ಗ ವಿಸ್ತಾರವಾಗಿ ಸಿಗುವುದಿಲ್ಲ. ಆಗಮ ದರ್ಶನಗಳು ವಿಹಿತ ಮಾಡುವ ಪೂಜೆ ಜಪಾದಿಗಳಲ್ಲಿಯೂ, ಪೂಜೆ ಮಾಡುವಾಗ ಮಾತನಾಡದೇ ಮನಸ್ಸನ್ನು ಏಕೇನ್ದ್ರಿಯಗೊಳಿಸಿಕೊಳ್ಳುವುದು ಹೇಗೆ ಎಮ್ಬ ಪ್ರಶ್ನೆಗೆ ಆಮೂಲಾಗ್ರ ಉತ್ತರ ಸಿಗುವುದಿಲ್ಲ. ಇದಕ್ಕೆ ಉತ್ತರಗಳಿರುವುದು ಭಾರತದ ಯೋಗಕ್ಕೆ ಸಮ್ಬನ್ಧಪಟ್ಟ ಮೂರು ದರ್ಶನಗಳಲ್ಲಿ ಮಾತ್ರ. ಈ ಮೂರು ದರ್ಶನಗಳಲ್ಲಿ ಮಾರ್ಗವೂ ಇದೆ, ದರ್ಶನವೂ ಇದೇ. ಈ ಕಾರಣದಿನ್ದಲೇ ಇವುಗಳು ಮಾರ್ಗದರ್ಶನಗಳು. ಇವುಗಳಲ್ಲಿನ ದರ್ಶನ ಭಾಗವು ಬೇಡವಾದಲ್ಲಿ ಮಾರ್ಗ ಭಾಗವನ್ನು ಅಳವಡಿಸಿಕೊಳ್ಳಬಹುದು, ಅಳವಡಿಸಿದಲ್ಲಿ ಮಾತ್ರ, ಮತ್ತ್ಯಾವ ದರ್ಶನವನ್ನು ಹಿಡಿದರೂ ಸಾಧನೆ ಊರ್ಜಿತವಾಗಿದ್ದು ಫಲಕಾರಿಯಾಗಿರುತ್ತದೆ.

ಪತಞ್ಜಲಿ ಮಹರ್ಷಿಗಳು, ತಮ್ಮ ಯೋಗ ಮಾರ್ಗದಲ್ಲಿ, ಮನಸ್ಸನ್ನು ಏಕೇನ್ದ್ರಿಯಗೊಳಿಸಿಕೊಣ್ಡು ಸಮಾಧಿ ಸ್ಥಿತಿಯನ್ನು ತಲುಪುವ ಪ್ರಕ್ರಿಯೆಯನ್ನು ಬಹಳ ವಿಸ್ತಾರವಾಗಿ ಬಹುಲವಾಗಿ ಪರಿಮೆಯಗೊಳಿಸಬಹುದಾದನ್ತಹಾ ಸಾಧಕನಿಗೆ ಸುಲಭವಾಗುವ ಹಾಗೆ ಶ್ರೇಣೀಯ ರೂಪದಲ್ಲಿ ನಮಗೆ ಕೊಟ್ಟಿದ್ದಾರೆ. ಅವರು ಸಮಾಧಿ ಮಾರ್ಗವನ್ನು ಎರೆಡು ಶ್ರೇಣೀಯ ಸ್ಥರಗಳಲ್ಲಿ ಸಮ್ಪ್ರಜ್ಞಾತ ಮತ್ತು ಅಸಮ್ಪ್ರಜ್ಞಾತ ಸಮಾಧಿಯೆನ್ದು ವಿಙ್ಗಡಣೆ ಮಾಡಿ ನಮ್ಮ ಮುನ್ದೆ ಇಟ್ಟಿದ್ದಾರೆ. ಈ ಸಞ್ಚಿಕೆಯಲ್ಲಿ ಸಮ್ಪ್ರಜ್ಞಾತ ಸಮಾಧಿಯನ್ನು ಅದರ ವಿಸ್ತಾರದಲ್ಲಿ ನೋಡೋಣ.

**ಅಥ ಸಮಾಧಿ ಪಾದ:**
**ಸೂತ್ರ ೧೭: ವಿತರ್ಕವಿಚಾರಾನನ್ದಾಸ್ಮಿತಾರೂಪಾನುಗಮಾತ್ ಸಮ್ಪ್ರಜ್ಞಾತಃ**
**ಅರ್ಥಗತಿ**

**ವಿತರ್ಕ :** ಉದೂಢವಾದ ಧೀತಾನಿಗಳು, ದ್ರವ್ಯಗಳು ( gross thoughts and objects)
ವಿಚಾರ: ಸೂಕ್ಷ್ಮವಾದ ಧೀತಾನಿಗಳು, ದ್ರವ್ಯಗಳು ( subtle thoughts and objects)
ಆನನ್ದ
ಅಸ್ಮಿತಾ: ಸಹಜಾಕ್ಕರ, ನಾನು ಅನ್ನುವ ಅರಿವು "ನಾನುತ್ವ" ( I'm ness)
ರೂಪ
ಅನುಗಮಾತ್: ಜೊತೆಯಲ್ಲಿ, ಬೆಮ್ಬಲಿತವಾಗಿ ( ವಿತರ್ಕ, ವಿಚಾರ, ಆನನ್ದ,ಅಸ್ಮಿತಾ ಮತ್ತು ರೂಪಗಳ ಜೊತೆಲ್ಲಿ, ಇವುಗಳಿನ್ದ ಬೆಮ್ಬಲಿತವಾಗಿ)
ಸಮ್ಪ್ರಜ್ಞಾತಃ: ಸಮ್ಪ್ರಜ್ಞಾತ ಸಮಾಧಿ ( ಇವುಲಳಿನ್ದ ಬೆಮ್ಬಲಿತವಾಗಿ ಸಿಗುವ/ತಲುಪುವ ಸಮಾಧಿ ಸಮ್ಪ್ರಜ್ಞಾತ ಸಮಾಧಿ)

ವಿವೃತ್ತಿ
ವಿತರ್ಕ, ವಿಚಾರ, ಆನನ್ದ ಮತ್ತು ಅಸ್ಮಿತ -ಈ ನಾಲ್ಕರ ಸಮಭ್ಯಾಹಾರದಿನ್ದ ಆಗುವ ,ತಲುಪುವ ಅಥವಾ ಈ ನಾಲ್ಕು ಶ್ರೇಣಿಕೃತ ಸ್ಥರಗಳಲ್ಲಿ , ಸಮಾಧಿಯು ಒನ್ದು ಸ್ಥರವನ್ನು ದಾಟಿ ಮುನ್ದಿನ ಸ್ಥರಕ್ಕೆ ಹೋಗಿ, ಕೊನೆಗೆ ಅಸ್ಮಿತೆಯಲ್ಲಿ ನೆಲೆಸುವ ಸಮಾಧಿಗೆ ಸಮ್ಪ್ರಜ್ಞಾತ ಸಮಾಧಿ ಎನ್ನು ಹೆಸರು. ಇದು ಪ್ರಜ್ಞೆ ಇರುವ ಸಮಾಧಿ. ಬಾಲಿಶವಾಗಿ ಹೇಳುವುದಾದರೆ, ಈ ಸಮಾಧಿಯಲ್ಲಿರುವವರಿಗೆ ಅವರ ಮನಸ್ಸಿನಲ್ಲಿ "ನಾನು ಸಮಾಧಿಯಲ್ಲಿದ್ದೇನೆ" ಎಮ್ಬ ಅರಿವಿರುತ್ತದೆ. ಸಮ್ಪ್ರಜ್ಞಾತ ಸಮಾಧಿ, ಪ್ರಜ್ಞೆ ಇರುವ ಸಮಾಧಿ ಇರುವುದಾದರೆ, ಅಸಮ್ಪ್ರಜ್ಞಾತ ಸಮಾಧಿಯೂ ಇರಬೇಕು! ಹಾಗೂ "ನಾನು ಸಮಾಧಿಯಲ್ಲಿದ್ದೇನೆ" ಎಮ್ಬ ಅರಿವಿರುವುದರಿನ್ದ ಚಿತ್ತದ ವೃತ್ತಿಯು ಇನ್ನೂ ಇರುವುದರಿನ್ದ ( ಅರಿವೂ ಒನ್ದು ವೃತ್ತಿಯೇ!) ಸಮ್ಪ್ರಜ್ಞಾತ ಸಮಾಧಿಯು ಅಸಮ್ಪ್ರಜ್ಞಾತ ಸಮಾಧಿಗಿನ್ತ ಅಧಸ್ತನವಾದುದು; ಆದರೂ ಇದು ಅಸಮ್ಪ್ರಜ್ಞಾತ ಸಮಾಧಿಗೆ ಪಜಾಕ್ಕರವಿದ್ದನ್ತೆ. ಅಸಮ್ಪ್ರಜ್ಞಾತ ಸಮಾಧಿಗೆ ಸಮ್ಪ್ರಜ್ಞಾತ ಸಮಾಧಿಯು ದೇಶೀಯವಾಗಿ ಸಂಸಕ್ತವಾಗಿರುವನ್ತಹುದು

ಸಮ್ಪ್ರಜ್ಞಾತ ಸಮಾಧಿಯನ್ನು ಉಪಸ್ಕೃತವಾಗಿ ಪರಿಗ್ರಹಿಸುವ ಮೊದಲು ಅದಕ್ಕೆ ಔತ್ಪತ್ತಿಕವಾಗಿ ಸಾಜಖ್ಯ ದರ್ಶನದ ಮುಖ್ಯವಾದ ಎರೆಡು ಅದೃಷ್ಟಾರ್ಥವಿಷಯಗಳನ್ನು ನೋಡಬೇಕಾಗುತ್ತದೆ.
(೧) ಪುರುಷ-ಪ್ರಕೃತಿ ತತ್ವ, ಅದರಲ್ಲೂ ಪ್ರಕೃತಿ ತತ್ವ
ಸಾಜಖ್ಯದಲ್ಲಿ ನಮಗೆ ಗೊತ್ತಿರುವನ್ತೆ, ಎರೆಡು ತತ್ವಗಳಿವೆ. ಒನ್ದು, ಸಚೇತವಾದ ಪುರುಷ ತತ್ವ ಮತ್ತೊನ್ದು ನಿಶ್ಚೇತವಾದ ಪ್ರಕೃತಿ ತತ್ವ. ಪ್ರಕೃತಿ ತತ್ವವನ್ನು ಎರೆಡು ವರ್ಗಗಳಾಗಿ ವಿಜಗಡಿಸಬಹುದು - ಒನ್ದು ಪ್ರಕೃತಿ ಅಥವಾ ಆದ್ಯ ಪ್ರಕೃತಿ ಮತ್ತೊನ್ದು, ಈ ಆದ್ಯ ಪ್ರಕೃತಿಯ ೨೩ ಅವಸ್ಥೆಗಳು - ಒಟ್ಟು ೨೪. ಈ ೨೪ ( ಪ್ರಕೃತಿ ಮತ್ತದರ ೨೩ ಉದ್ವಿಕಾಸಗಳು - the primordial matter ಪ್ರಕೃತಿ , and its 23 evolutions = 24) ಪ್ರಕೃತಿಯ ಅವಸ್ಥೆಗಳನ್ನು ಚತುರ್ವಯವಾಗಿ ಹೀಗೆ ಭಾಗ ಅಥವಾ ವರ್ಗ ಮಾಡಬಹುದು –

ಮೊದಲನೆಯ ವರ್ಗ –
ಈ ವರ್ಗದಲ್ಲಿ ಆ ೨೪ ಪ್ರಕೃತಿ ತತ್ವಗಳಲ್ಲಿ ಬಹು ಹೆಚ್ಚು ಉದೂಢತೆ ಇರುವ ಮತ್ತು ಬಹು ಭಿನ್ನವಾದ ಪ್ರಕೃತಿ ತತ್ವಗಳು ಇರುತ್ತವೆ. ಈ ವರ್ಗವನ್ನು ಸಾಜಖ್ಯದಲ್ಲಿ "ವಿಶೇಷ" ಎನ್ದು ಕರೆಯುತ್ತಾರೆ ಮತ್ತು ಈ ವರ್ಗದಲ್ಲಿ ೧೬ ಪ್ರಕೃತಿ ತತ್ವಗಳನ್ನು ಕಾಣಬಹುದು - ಉದೂಢತೆಯನ್ನು( gross aspect) ಬಾಲಿಶವಾಗಿ ಹೇಳಬೇಕಾದರೆ, ಈ ವರ್ಗದಲ್ಲಿರುವ ಪ್ರಕೃತಿ ತತ್ವಗಳು ಪ್ರಕೃತಿ ಧಾತುಗಳು ಸ್ಪರ್ಷ-ಗನ್ಧಾನುಭವಗಳಿಗೆ ಸಮ್ಬನ್ಧಪಟ್ಟದ್ದಾಗಿರುತ್ತದೆ. "ವಿಶೇಷ" ದಲ್ಲಿರುವ ೧೬ ಪ್ರಕೃತಿ ತತ್ವಗಳನ್ನು ನಾಲ್ಕು ಭಾಗಗಳಾಗಿ ಈ ರೀತಿ ವಿಜಗಡಿಸಲಾಗುತ್ತದೆ – (೫+೫+೫+೧ = ೧೬)

(೧) ಐದು ಉದೂಢ ಭೂತಗಳಾದ ಪೃಥ್ವಿ, ಜಲ, ಅಗ್ನಿ, ವಾಯು ಮತ್ತು ಆಕಾಶ ( ಪಜ್ಚಭೂತಗಳು),
(೨) ಐದು ಕರ್ಮೇನ್ದ್ರಿಯಗಳು - ಪಾಣಿ (ಹಿಡಿಯುವ ತತ್ವ), ಪಾದ (ಚಲನೆಯ ತತ್ವ), ಜಿಹ್ವ ( ವಾಕ್ ತತ್ವ) ಪಾಯು (ಉತ್ಸರ್ಗ ತತ್ವ) ಮತ್ತು ಉಪಸ್ಥ (ಸೃಷ್ಟಿ ತತ್ವ),
(೩) ಐದು ಜ್ಞಾನೇನ್ದ್ರಿಯಗಳು - ಅಕ್ಷಿ (ದೃಷ್ಟಿ ತತ್ವ), ನಾಸಿಕ (ಗ್ರಹಣ ತತ್ವ), ಕರ್ಣ (ಶ್ರೋತ್ರ ತತ್ವ), ಜಿಹ್ವ (ಸ್ವಾದ ತತ್ವ) ಮತ್ತು ಸನೀಡ(ಸ್ಪರ್ಷ ತತ್ವ).

(೪) ಮನಸ್ಸು (ಇಲ್ಲಿ ಮನಸ್ಸನ್ನು ಸನ್ನಿಕೃಷ್ಟವಾದ ಮನಸ್ಸಾಗಿರುತ್ತದೆ - ಮೇಲ್ಮನಸ್ಸು) – ಇಲ್ಲಿ ಎರೆಡು ವಿಷಯಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಮೊದಲನೆಯ ವಿಷಯ, ಈ ವಿಙ್ಗಡಣೆಯ ಪ್ರಾರಮ್ಭ ಮತ್ತು ಕೊನೆಯನ್ನು ಎಡದಿನ್ದ ಬಲಕ್ಕೆ ನೋಡಿದಾಗ ಮೊದಲನೆಯ ವರ್ಗದಲ್ಲಿ ನಮಗೆ ಸಿಗುವ ಪ್ರಕೃತಿ ತತ್ವಗಳಲ್ಲಿ ಉದೂಢತೆ ಹೆಚ್ಚಾಗಿದ್ದು, ಒನ್ದು ವರ್ಗದಿನ್ದ ಮತ್ತೊನ್ದು ವರ್ಗಕ್ಕೆ ಹೋಗುವಾಗ ಉದೂಢತೆ ಕಮ್ಮಿಯಾಗಿ ಸೂಕ್ಷ್ಮತೆ ಹೆಚ್ಚಾಗಿ, ಕೊನೆಯ ವರ್ಗವಾದ ಮನಸ್ಸಿನ ಮಟ್ಟದಲ್ಲಿ ಸೂಕ್ಷ್ಮತೆ ಪರಾಧ್ಯವಾಗಿರುತ್ತದೆ . ಉದಾಹರಣೆಗೆ, ಪೃಥ್ವಿ ತತ್ವಕ್ಕಿನ್ತ, ಚಲನೆಯ ತತ್ವ ಹೆಚ್ಚು ಸೂಕ್ಷ್ಮ, ಚಲನೆಯ ತತ್ವಕ್ಕಿನ್ತ ದೃಷ್ಟಿ ತತ್ವ ಹೆಚ್ಚು ಸೂಕ್ಷ್ಮ ಮತ್ತು ದೃಷ್ಟಿ ತತ್ವಕ್ಕಿನ್ತ ಮನಸ್ಸು ಅತಿ ಸೂಕ್ಷ್ಮ. ಎರೆಡನೆಯ ವಿಷಯ, ಬಲದಿನ್ದ ಎಡಕ್ಕೆ ನೋಡಿದಾಗ, ಒನ್ದು ತತ್ವವು ಅದರ ಮುನ್ದಕ್ಕೆ ಬರುವ ತತ್ವದ ಸಮುತ್ಪಾದಕ್ಕೆ ಕಾರಣವಾಗಿರುತ್ತದೆ. ಉದಾಹರಣೆಗೆ, ಮನಸ್ಸು ಜ್ಞಾನೇನ್ದ್ರಿಯವಾದ ಸನೀಡ ತತ್ವದ ಸಮುತ್ಪಾದಕ್ಕೆ ಕಾರಣ, ಸನೀಡ ತತ್ವವು ಕರ್ಮೇನ್ದ್ರಿಯವಾದ ಪಾಣಿ ತತ್ವದ ಸಮುತ್ಪಾದಕ್ಕೆ ಕಾರಣ, ಪಾಣಿ ತತ್ವವು ಪೃಥ್ವಿ ತತ್ವದ ಸಮುತ್ಪಾದಕ್ಕೆ ಕಾರಣ. ಈ ಎರೆಡೂ ವಿಷಯಗಳು, ಸಮ್ಪ್ರಜ್ಞಾತ ಸಮಾಧಿಯ ಅವಾಪ್ತತೆಯ( attainment) ಪ್ರಕ್ರಿಯೆಗೆ ನೇರವಾಗಿ ಸಮ್ಬನ್ಧವಿರುವನ್ಥಹಾ ವಿಷಯ. ಈದನ್ನು ವಿಶೇಷತ: ಟಿಪ್ಪಣಿಗೆ ತೆಗೆದು ಕೊಳ್ಳುವುದು ಮುಖ್ಯ - ಸಙ್ಗ್ರಹದಲ್ಲಿ "ವಿಶೇಷ"ಗಳನ್ನು ಗ್ರಹಣಮಾಡುವ ಸಾಧನಗಳೆನ್ದು ನೋಡಬಹುದು (the means of perception, aprehension, cognition etc.)

**ಎರೆಡನೆಯ ವರ್ಗ -**

ಈ ವರ್ಗದಲ್ಲಿನ ಪ್ರಕೃತಿ ತತ್ವಗಳು, ಮೊದಲನೆಯ ವರ್ಗದವಾದ "ವಿಶೇಷ" ದಲ್ಲಿನ ತತ್ವಗಳಿಗಿನ್ತ ಕಮ್ಮಿ ಉದೂಢವಾಗಿದ್ದು ಅದಕ್ಕಿನ್ತ ಹೆಚ್ಚು ಸೂಕ್ಷ್ಮವಾಗಿರುತ್ತದೆ. ಈ ವರ್ಗವನ್ನು ಸಾಙ್ಖ್ಯದಲ್ಲಿ "ಅವಿಶೇಷ" ಎನ್ದು ಕರೆಯುತ್ತಾರೆ. ಅವಿಶೇಷಗಳನ್ನು ಎರೆಡು ಗುಚ್ಛಗಳಲ್ಲಿ ನೋಡಬಹುದು. ಮೊದಲನೆಯದು ಐದು ಕೆಳಕಣ್ಡ ತನ್ಮಾತ್ರಗಳು (ಪಞ್ಚತನ್ಮಾತ್ರ)
(೧) ಶಬ್ದ ತನ್ಮಾತ್ರ - ಶಬ್ದಕ್ಕೆ ಸಮ್ಬನ್ಧ ಪಟ್ಟ ಸೂಕ್ಷ್ಮ ಸ್ವರೂಪದ ಆಕಾಶ ತತ್ವ (೨) ಸ್ಪರ್ಷ ತನ್ಮಾತ್ರ - ಸ್ಪರ್ಷ ಮತ್ತು ಶಬ್ದಕ್ಕೆರೆಡೂ ಸೇರಿದ ಸೂಕ್ಷ್ಮ ಸ್ವರೂಪದ ವಾಯು ತತ್ವ (೩) ರೂಪ ತನ್ಮಾತ್ರ -ದೃಷ್ಟಿ, ಸ್ಪರ್ಷ ಮತ್ತು ಶಬ್ದಕ್ಕೆ ಸೇರಿದ ಸೂಕ್ಷ್ಮ ಸ್ವರೂಪದ ಅಗ್ನಿ ತತ್ವ (೪) ರಸ ತನ್ಮಾತ್ರ - ರುಚಿ, ದೃಷ್ಟಿ, ಸ್ಪರ್ಷ ಮತ್ತು ಶಬ್ದಕ್ಕೆ ಸೇರಿದ ಸೂಕ್ಷ್ಮ ಸ್ವರೂಪದ ಜಲ ತತ್ವ (೫) ಗನ್ಧ ತನ್ಮಾತ್ರ - ಘ್ರಾಣ,ರುಚಿ, ದೃಷ್ಟಿ, ಸ್ಪರ್ಷ ಮತ್ತು ಶಬ್ದಕ್ಕೆ ಸೇರಿದ ಸೂಕ್ಷ್ಮ ಸ್ವರೂಪದ ಪೃಥ್ವಿ ತತ್ವ
ಮತ್ತು ಎರಡನೆಯದು ನಾನು ಹಾಗೆ, ಹೀಗೆ, ಅವರು/ಆ ವಸ್ತು ಹೀಗೆ, ಇವರು/ಈ ವಸ್ತು ಹಾಗೆ ಎನ್ದು ಸಾಯುಜ್ಯ ಮಾಡುವ ಅಸ್ಮಿತ ಅಥವ ಅಹಙ್ಕಾರ ತತ್ವ ( ಇಲ್ಲಿ ಅಹಙ್ಕಾರವನ್ನು ಲೋಕರೂಢಿಯಲ್ಲಿ ನೋಡುವ ಹಾಗೆ ಕೆಟ್ಟದ್ದೆನ್ದು ಅರ್ಥೈಸಬಾರದು).

ಸೂಕ್ಷ್ಮವಾದ "ಅವಿಶೇಷ" ತತ್ವಗಳು ಉದೂಢವಾದ "ವಿಶೇಷ" ತತ್ವಗಳ ಸಮುತ್ಪಾದಕ್ಕೆ ಕಾರಣವಾಗಿರುತ್ತದೆ

ಮೂರನೆಯ ವರ್ಗ -

"ಅವಿಶೇಷ"ಕ್ಕೂ ಕಮ್ಮಿ ಉದೂಢವಾಗಿದ್ದು ಅದಕ್ಕಿನ್ತಲೂ ಹೆಚ್ಚು ಸೂಕ್ಷ್ಮವಾಗಿದ್ದು ಅದ ಕಾರಣ "ಅವಿಶೇಷ"ದ ಸಮುತ್ಪಾದಕ್ಕೆ ಕಾರಣವಾಗಿರುವನ್ಥಹಾ ಈ ಪ್ರಕೃತಿ ತತ್ವವನ್ನು ಮಹತ್, ಲಿಙ್ಗಮಾತ್ರ ಅಥವಾ ಬುಧ್ಧಿ ಎನ್ದು ಕರೆಯುತ್ತಾರೆ. ಸೂಕ್ಷ್ಮವಾದ ಮಹತ್ ತತ್ವವು ಉದೂಢವಾದ "ಅವಿಶೇಷ" ತತ್ವಗಳ ಸಮುತ್ಪಾದಕ್ಕೆ ಕಾರಣವಾಗಿರುತ್ತದೆ. ಆನ್ದರೆ, ಅಸ್ಮಿತ ಅಥವಾ ಅಹಙ್ಕಾರವು ಬುಧ್ಧಿಯಿನ್ದ ಹೊರಹೊಮ್ಮುತ್ತದೆ

ನಾಲ್ಕನೆಯ ವರ್ಗ

ಇದುವೇ ಪ್ರಾರಮ್ಭದಲ್ಲಿ ಹೇಳಿದ ಆದ್ಯ ಪ್ರಕೃತಿ ಅಥವಾ ಮೂಲ ಪ್ರಕೃತಿ, ಇದನ್ನು ಸಾಙ್ಖ್ಯವು "ಅಲಿಙ್ಗ" ಎನ್ನುತ್ತದೆ. ಸಾಮಾನ್ಯವಾಗಿ ಇದನ್ನು ಬರೇ ಪ್ರಕೃತಿ ಎನ್ದು ಕರೆಯಲಾಗುತ್ತದೆ. ಇದು ತನ್ನ ಮೂಲರೂಪದಲ್ಲಿದ್ದಾಗ ತ್ರಿಸಾಮ್ಯ ಸ್ಥಿತಿಯಲ್ಲಿರುತ್ತದೆ. ಆನ್ದರೆ, ಪ್ರಕೃತಿಯ ಸಂವಿಧಾಯೀ ಗುಣಗಳಾದ ಸತ್ವ-ರಜಸ್-ತಮಸ್ಸುಗಳು ಒನ್ದು ಸಮತಾ ( equilibrium)) ಸ್ಥಿತಿಯಲ್ಲಿರುತ್ತದೆ- ಇದಕಾರಣ ಸೃಷ್ಟಿಕ್ರಿಯಾಗುತ್ತಿರುವುದಿಲ್ಲ. ಕಾಲ ಪ್ರಚೋದನೆಯಿನ್ದ ಈ ಸಮತಾ ಸ್ಥಿತಿಯು ಭಿನ್ನಗೊಣ್ಡಾಗ, ಮೇಲೆ ಹೇಳಿದ ಪ್ರಕೃತಿಯ ೨೩ ಅವಸ್ಥೆಗಳು ಹೊರಹೊಮ್ಮಿ, ಅದರಿನ್ದ ಸೃಷ್ಟಿಯ ಕ್ರಿಯೆಯಾಗುತ್ತದೆ. ಈ ಸೃಷ್ಟಿಯ ಮೊದಲ ಸಮುತ್ಪಾದವೇ ಮೇಲೆ ಹೇಳಿದ ಮಹತ್ ಅಥವಾ ಲಿಙ್ಗಮಾತ್ರ. ಭಾಗವತವು ಹೇಗೆ ಮಹತ್ ತತ್ವವು ಮುದಲು ಹೊರಹೊಮ್ಮುತ್ತದೆ ಎಮ್ಬುದನ್ನು ಈ ರೀತಿ ಹೇಳುತ್ತದೆ

ತತೋಭವನ್ ಮಹತ್ತತ್ತ್ವಮವ್ಯಕ್ತಾತ್ಕಾಲಚೋದಿತಾತ್ ವಿಜ್ಞಾನಾತ್ಮಾತ್ಮದೇಹಸ್ಥಂ ವಿಶ್ವಂ ವ್ಯಞ್ಜಂಸ್ತಮೋನುದ:
ಇದರ ತಾತ್ಪರ್ಯ, ಕಾಲಚೋದಿತವಾಗಿ , ಪ್ರಕೃತಿಯ (ಮೂಲ ಪ್ರಕೃತಿಯ) ಒಟ್ಟಾರೆ ಎಲ್ಲ ಸಮುತ್ಪಾದಗಳನೊಳಗೊಣ್ಡಿರುವ, ಎಲ್ಲ ಸಮುತ್ಪಾದಗಳಿಗೆ ನಿಮಿತ್ತ ಸ್ವರೂಪವಾಗಿರುವ ಮಹತ್ ತತ್ವವು (ಪ್ರಕೃತಿಯಿನ್ದ) ಅಭವತಗೊಣ್ಡು, ಅದರಲ್ಲಿ ಪುರುಷನು ತನ್ನ ಬೆಳಕನ್ನು ಚೆಲ್ಲಿದಾಗ ಸೃಷ್ಟಿಯಾಯಿತು.

Impelled by the eternal time, the collective of all evolutes or manifestations of matter called the mahath, became manifested, into which the purusha shed its light, resulting in the process of creation

ಸೂಕ್ಷ್ಮಾತಿಸೂಕ್ಷ್ಮವಾದ ಅಲಿಙ್ಗ, ಆದಿ ಪ್ರಕೃತಿ, ಮೂಲ ಪ್ರಕೃತಿ ಅಥವಾ ಪ್ರಕೃತಿ (ಇವೆಲ್ಲ ಮೊದಲೇ ಹೇಳಿದ ಹಾಗೆ ಪರ್ಯಾಯ ಪದಗಳು) ತತ್ವವು ಇದಕ್ಕಿನ್ತಲೂ ಹೆಚ್ಚು ಉದೂಢವಾದ ಮಹತ್ ತತ್ವದ ಸಮುತ್ಪಾದಕ್ಕೆ ಕಾರಣವಾಗಿರುತ್ತದೆ. ಮಹತ್ ತತ್ವವು ಪ್ರಕೃತಿ ತತ್ವವದ ಎಲ್ಲ ಉತ್ಪಾದಿತ ತತ್ವಗಳ ಸಮಾಹಾರ ( the mahath principle is the sum-total of the evolutes of prakrthi)

ಈ ಸೂತ್ರದ ವಿವೃತ್ತಿಯ ಮೊದಲ ವಾಕ್ಯದಲ್ಲಿ, ವಿತರ್ಕ, ವಿಚಾರ, ಆನನ್ದ ಮತ್ತು ಅಸ್ಮಿತ -ಈ ನಾಲ್ಕರ ಸಮಭ್ಯಾಹಾರದಿನ್ದ ಸಮ್ಪ್ರಜ್ಞಾತ ಸಮಾಧಿಯಾಗುತ್ತದೆನ್ದು ಹೇಳಲಾಗಿತ್ತು. ಇನ್ನೊನ್ದು ರೀತಿಯಲ್ಲಿ ಪುನರುಕ್ತಗೊಳಿಸುತ್ತಾ, "ವಿಶೇಷ", "ಅವಿಶೇಷ" ಮತ್ತು "ಲಿಙ್ಗಮಾತ್ರ" ಗಳು ಸಮ್ಪ್ರಜ್ಞಾತ ಸಮಾಧಿಯ ಆಲಮ್ಬನಗಳಾಗಿರುತ್ತವೆ. ಆನ್ದರೆ ಸಮ್ಪ್ರಜ್ಞಾತ ಸಮಾಧಿಯು ಇವುಗಳನ್ನು ಆಧಾರಿಸಿಕೊಣ್ಡು, ಇವುಗಳ ಮೂಲಕ ಮತ್ತು ಬಹು ಮುಖ್ಯವಾಗಿ ಇವುಗಳನ್ನು ಅತಿವರ್ತಿಸಿ ತಲುಪುವನ್ತಹಾ ಸಮಾಧಿ ಸ್ಥಿತಿ.

(೨) ಸಾಙ್ಖ್ಯ ದರ್ಶನದ ನಿಮಿತ್ತ-ನೈಮಿತ್ತಿಕ(cause-effect) ಸಿದ್ಧಾನ್ತ

ಸಮ್ಪ್ರಜ್ಞಾತ ಸಮಾಧಿಯನ್ನು ಅರ್ಥಮಾಡಿಕೊಳ್ಳಲು ಪುರುಷ-ಪ್ರಕೃತಿ ತತ್ವದಷ್ಟೇ ಮುಖ್ಯವಾದುದು ನಿಮಿತ್ತ-ನೈಮಿತ್ತಿಕ ತತ್ವ. ಪ್ರಕೃತಿಯ ೨೪ ತತ್ವಗಳು ಹೇಗೆ ಒನ್ದಕ್ಕೊನ್ದು ಕಾರಣೀಭೂತವಾಗಿದೆಯೆನ್ದು, ಒನ್ದು ಉದೂಢ ತತ್ವವು ಅದಕ್ಕಿನ್ತ ಕಮ್ಮಿ ಉದೂಢತೆಯುಳ್ಳ ಮತ್ತೊನ್ದು ತತ್ವಕ್ಕೆ ನಿಮಿತ್ತವಾಗಿರುವುದನ್ನು ಈವರೆವಿಗೆ ನೋಡಿದೆವು. ಈಗ ಈ ನಿಮಿತ್ತ ಮತ್ತದರ ನೈಮಿತ್ತವನ್ನು ಸ್ವಲ್ಪ ವಿಸ್ತಾರದಲ್ಲಿ ನೋಡೋಣ - ಮಣ್ಣು ಮತ್ತು ಮಡಿಕೆಯ ಒನ್ದು ಉದಾಹರಣೆಯನ್ನು ತೆಗೆದುಕೊಳ್ಳೋಣ. ಮಣ್ಣು ಮಡಿಕೆಗೆ ಕಾರಣ, ಮಣ್ಣು ನಿಮಿತ್ತ, ಮಡಿಕೆ ನೈಮಿತ್ತ ಅಥವಾ ಪರಿಣಾಮ

ಮಣ್ಣು ಮತ್ತು ಮಡಿಕೆಗಳ ಲಕ್ಷಣಗಳು ಹೀಗಿರುತ್ತವೆ -

(ಅ) ಮಡಿಕೆ ಮಣ್ಣಿಗಿನ್ತ ಉದೂಢ/ಸ್ಪರ್ಶಿಕ( tangible), ಮಣ್ಣು ಮಡಿಕೆಗಿನ್ತ ಸೂಕ್ಷ್ಮ/ಅನಾರಮ್ಭಣ( intangible)

(ಆ) ಮಡಿಕೆಯಲ್ಲಿ ಮಡಿಕೆಯ ಲಕ್ಷಣಗಳ ಜೊತೆಯಲ್ಲಿ ಮಣ್ಣಿನ ಲಕ್ಷಣಗಳೂ ಇವೆ. ಮಣ್ಣಿನಲ್ಲಿ ಅದರ ಲಕ್ಷಣ ಮಾತ್ರವಿದ್ದು ಮಡಿಕೆಯ ಸಾಧ್ಯತೆಗಳು ಸುಪ್ತವಾಗಿ ಮಾತ್ರ ಇರುತ್ತದೆ

(ಇ) ಮಡಿಕೆ ಮಣ್ಣಿಗಿನ್ತ ಇನ್ದ್ರಿಯಗಳಿಗೆ ಹತ್ತಿರವಾಗಿರುತ್ತದೆ. ಈ ಉದಾಹರಣೆಯಲ್ಲಿ ಇದು ಅಷ್ಟು ವ್ಯಕ್ತವಾಗಿಲ್ಲದಿಲ್ಲ. ಆದರೆ, ಇದನ್ನು ಪ್ರಕೃತಿ ತತ್ವಗಳಿಗೆ ಎತ್ತರಿಸಿದರೆ, ಇದನ್ನು ಗಮನಿಸಬಹುದು

(ಈ) ಮಡಿಕೆಯ ಮೇಲೆ ಧ್ಯಾನ ಮಾಡಿದಾಗ, ಮಣ್ಣಿನ ಹೋಲಿಕೆಯಲ್ಲಿ ಮಡಿಕೆಯು ಅನಿತ್ಯವೆನ್ದು ತಿಳಿಯುತ್ತದೆ - ಇವೆರೆಡರ ಮಧ್ಯೆ ಮಡಿಕೆ ನಾಶವಾಗಬಹುದು ಮಣ್ಣಲ್ಲ. ಈ ಕಾರಣದಿನ್ದ ಮನಸ್ಸಿನಲ್ಲಿ ಮಡಿಕೆಯ ಯೋಚನೆಗಳನ್ನು, ವೃತ್ತಿಗಳನ್ನು ನಿರೋಧಿಸಿದಾಗ (ನಿಲ್ಲಿಸಿದಾಗ ಎನ್ದಿಟ್ಟುಕೊಳ್ಳೋಣ) ಮಾತ್ರ, ಮಡಿಕೆಯ ಅನಿತ್ಯತೆಯ ಕಾರಣ ಮಡಿಕೆಯ ಬಗ್ಗೆ ಮರ್ದತೆ( dispassion) ಇದ್ದಾಗ ಮಾತ್ರ. ಮಡಿಕೆ ಎಮ್ಬ ತತ್ವವು ಮಣ್ಣಿನಲ್ಲಿ ಲಯಗೊಣ್ಡಾಗ ಮಾತ್ರ, ಅದು ಮನಸ್ಸಿನಿನ್ದ ಪತಿತವಾದಾಗ ಮಾತ್ರ ಮಣ್ಣನ್ನು ಅರಿಯಲು ಸಾಧ್ಯ -ಈ ಮಣ್ಣನ್ನು, ಅದರ ಮೂಲ ಸ್ವರೂಪನ್ನರಿಯುವುದೇ ಸಮ್ಪ್ರಜ್ಞಾತ ಸಮಾಧಿ.

ಮಣ್ಣು-ಮಡಿಕೆಯ ಈ ಮೇಲ್ಕಣ್ಡ ಲಕ್ಷಣಗಳನ್ನು ತುಲ್ಯರೂಪದಲ್ಲಿ ನೋಡಿ, ಈ ಲಕ್ಷಣಗಳನ್ನು ವೈಶ್ವಿಕ ಮಟ್ಟಕ್ಕೆ ಏರಿಸಿಕೊಣ್ಡು ಪ್ರಕೃತಿಯ ೨೪ ತತ್ವಗಳಿಗೆ ಅನ್ವಯಿಸಿದಾಗ ಕಾಣುವ ವಿಶ್ವಾವ್ಯಾಪಿಯಾದ ಅಂಶಗಳೆನ್ದರೆ

(ಅ) ಪ್ರತಿಯೊನ್ದು ಪರಿಣಾಮವೂ ಅದಕ್ಕೆ (ಆ ಪರಿಣಾಮಕ್ಕೆ) ಕಾರಣವಾದ ಎಲ್ಲ ಕರ್ಮಗತ(successive) ನಿಮಿತ್ತಗಳ ಗುಣಗಳನ್ನು, ಅಂಶಗಳನ್ನು ಹೊನ್ದಿರುತ್ತದೆ - ತುಪ್ಪದಲ್ಲಿ, ಬೆಣ್ಣೆ, ಮೊಸರು ಮತ್ತು ಹಾಲಿನ ಗುಣಗಳೆಲ್ಲವೂ ಸೇರಿದಹಾಗೆ, ತುಪ್ಪದ ಗುಣದ ಜೊತೆಯಲ್ಲಿ

(ಆ) ಪ್ರತಿಯೊನ್ದು ನಿಮಿತ್ತದಲ್ಲಿ ಅದರಿನ್ದ ಮುನ್ದೆ ಆಗುವ ಎಲ್ಲ ಪರಿಣಾಮಗಳ ಸಾಧ್ಯತೆಗಳು ಸುಪ್ತವಾಗಿರುತ್ತವೆ - ಹಾಲಿನಲ್ಲಿ ಮೊಸರು, ಬೆಣ್ಣೆ ಮತ್ತು ತುಪ್ಪದ ಗುಣಗಳು, ಮೊಸರಿನಲ್ಲಿ ಬೆಣ್ಣೆ ಮತ್ತು ತುಪ್ಪದ ಗುಣಗಳು, ಬೆಣ್ಣೆಯಲ್ಲಿ ತುಪ್ಪದ ಗುಣ

ಸಾಙ್ಖ್ಯದರ್ಶನದ ಪುರುಷ-ಪ್ರಕೃತಿ ಮತ್ತು ನಿಮಿತ್ತ-ನೈಮಿತ್ತ/ಪ್ರಯುಕ್ತ-ಪರಿಣಾಮ ತತ್ವಗಳು, ಮತ್ತು ಪರಿಣಾಮದ ಮೇಲೆ ಧ್ಯಾನ ಮಾಡಿ (ಮಡಿಕೆ) ಅದನ್ನು ಆಲಮ್ಬನವಾಗಿ ಬಳಸಿಕೊಣ್ಡರೂ, ಅದರ ಅನಿತ್ಯತೆಯನ್ನು ತಿಳಿದು, ಅದರ ಬಗ್ಗೆ ಮರ್ದನವನ್ನಿಟ್ಟುಕೊಣ್ಡು ಅದರ ಕಾರಣ ತತ್ವವನ್ನು(ಮಣ್ಣು) ಅರಿಯುವುದೇ ಸಮ್ಪ್ರಜ್ಞಾತ ಸಮಾಧಿ ಎನ್ದು ಈವರೆವಿಗೆ ಚರ್ಚಿಸಿದೆವು. ಇದನ್ನು ಪೂರ್ತಿಯಾಗಿ ಪ್ರಕೃತಿಯ ೨೪ ತತ್ವಗಳಿಗೆ ಪೂರ್ಣವಾಗಿ ಫುಲ್ಲಗೊಳಿಸಿದರೆ( expand), ಸಮ್ಪ್ರಜ್ಞಾತ ಸಮಾಧಿಯ ಪರಿಭಾಷೆ( definition)ಮತ್ತು ಪ್ರಕ್ರಿಯೆಗಳೆರೆಡೂ ಹೊರಹೊಮ್ಮುತ್ತದೆ. ತದ್ಯಥಾ, ಸಮ್ಪ್ರಜ್ಞಾತ ಸಮಾಧಿಯು ಪ್ರಕೃತಿ ತತ್ವದ ಸಮ್ಪ್ರಜ್ಞಾತ ಸಮಾಧಿಯ ಪ್ರಕ್ರಿಯೆಯು ಈ ರೀತಿ ಕಾಣುತ್ತದೆ –

ಅತಿ ಉದೂಢ ತತ್ವಗಳಾದ "ವಿಶೇಷ" ಗಳಿನ್ದ ಪ್ರಾರಮ್ಭಗೊಣ್ಡು ( ಅದರಲ್ಲೂ ಎಲ್ಲಕ್ಕಿನ್ತ ಉದೂಢವಾದ ಪೃಥ್ವಿ ತತ್ವದಿನ್ದ ಪ್ರಾರಮ್ಭಗೊಣ್ಡು/ತುಪ್ಪದಿನ್ದ ಪ್ರಾರಮ್ಭಗೊಣ್ಡು) ಪ್ರತಿಯೊನ್ದು ನೈಮಿತ್ತಿಕ/ಪರಿಣಾಮದ ಮೇಲೆ ಧ್ಯಾನವು ಕೇನ್ದ್ರೀಕೃತವಾಗಿ, ಆ ಪರಿಣಾಮದ ಅನಿತ್ಯತೆಯನ್ನು ತಿಳಿದು, ಆದುದರಿನ್ದ ಅದನ್ನು ಮರ್ದಿಸಿ, ಅದರ ನಿಮಿತ್ತವನ್ನು(ಬೆಣ್ಣೆ) ಅರಿತು, ಈ ನಿಮಿತ್ತವೂ ಬೇರುನ್ದರ ನೈಮಿತ್ತವಾದುದರಿನ್ದ ಮುನ್ದಿನ ಹೆಜ್ಜೆಯಲ್ಲಿ ಈ ನೈಮಿತ್ಯದ ಮೇಲೆ (ಬೆಣ್ಣೆಯ ಮೇಲೆ) ಧ್ಯಾನವು ಕೇನ್ದ್ರೀಕೃತವಾಗಿ ಅದರ ನಿಮಿತ್ತವನ್ನು ಅರಿತು(ಮೊಸರು).... ಈ ರೀತಿಯಾಗಿ ಸಮುತ್ಪಾದದ ವಿಪರೀತ ದಿಕ್ಕಿನಲ್ಲಿ ಸಾಗಿ, ಈರುಳ್ಳಿ ಸಿಪ್ಪೆಯನ್ನು ಪದರ ಪದರವಾಗಿ ಬಿಡಿಸಿ, ಒನ್ದೊನ್ದು ಪದರವನ್ನೂ ನೇತಿ-ನೇತಿ ಭಾವದಲ್ಲಿ, ಇದಲ್ಲವೆನ್ದು ಮರ್ದಿಸಿ ಕೊನೆಯದಾಗಿ ಆದಿಪ್ರಕೃತಿಯ ವಿಮಲವಾದ ಸ್ಥಿತಿಯನ್ನು (ಹಾಲು) ಅರಿಯುವುದೇ ಸಮ್ಪ್ರಜ್ಞಾತ ಸಮಾಧಿ - ಗಮನಿಸಬೇಕಾದುದೇನ್ದರೆ, ಇದು ಇನ್ನೂ ಪ್ರಕೃತಿಯ ಮಟ್ಟದಲ್ಲಿರುವುದರಿನ್ದ, ಇದು ಕೊನೆಯ ಕೈವಲ್ಯ ಅಥವಾ ಯೋಗದ ಸ್ಥಿತಿಯಲ್ಲ! ಅದು ಅಸಮ್ಪ್ರಜ್ಞಾತ ಸಮಾಧಿಯಾಗುತ್ತದೆ

ಈ ಸೂತ್ರವೇ ಹೇಳುತ್ತಿರುವನ್ತೆ ಸಮ್ಪ್ರಜ್ಞಾತ ಸಮಾಧಿಯಲ್ಲಿ ಒನ್ದಾದ ಮೇಲೆ ಮತ್ತೊನ್ದು ಬರುವನ್ಥಹಾ ನಾಲ್ಕು ರೇಖೀಯ( linear) ಸ್ಥರಗಳಿವೆ - ವಿತರ್ಕವಿಚಾರಾನನ್ದಾಸ್ಮಿತಾರೂಪಾನುಗಮಾತ್ ಸಮ್ಪ್ರಜ್ಞಾತಃ

ಹಾಲು - > ಮೊಸರು- > ಬೆಣ್ಣೆ- > ತುಪ್ಪ

ತುಪ್ಪ - > ಬೆಣ್ಣೆ- > ಮೊಸರು- > ಹಾಲು

ಈ ಮೇಲಿನ ಉಪಮೆಯನ್ನಿಟ್ಟುಕೊಣ್ಡು, ಹೇಗೆ ಸೂಕ್ಷ್ಮವಾದ ಹಾಲಿನಿನ್ದ ಉದೂಢವಾದ ತುಪ್ಪವಾಗುತ್ತದೆಯೋ, ಆಗಲು ರೇಖೀಯವಾದ ಮೊಸರು, ಬೆಣ್ಣೆಗಳ ಮೂಲಕ ಹಾದು ಹೋಗಬೇಕೋ, ತುಪ್ಪದ ಮೂಲ ಸ್ವರೂಪವನ್ನರಿಯಲು ವಿರುದ್ಧ ದಿಕ್ಕಿನಲ್ಲಿ ಹೋಗಿ ತುಪ್ಪ, ಬೆಣ್ಣೆ ಮತ್ತು ಮೊಸರನ್ನು ಅರಿಯಬೇಕಾಗುತ್ತದೋ ಹಾಗೆಯೇ ಸಮ್ಪ್ರಜ್ಞಾತ ಸಮಾಧಿಯಾಗಬೇಕಾದರೆ, ಪ್ರಕೃತಿಯ ಅತಿ ಉದೂಢ ತತ್ವದಿನ್ದ ಪ್ರಾರಮ್ಭ ಮಾಡಿ, ಮೂಲ ಪ್ರಕೃತಿ ಸ್ವರೂಪವನ್ನು ಅರಿಯಬೇಕು.

ಸಾಙ್ಖ್ಯ ದರ್ಶನದ ಮುಖ್ಯವಾದ ಕೆಲವು ಅದೃಷ್ಟಾರ್ಥ ವಿಷಯಗಳನ್ನು ಸಙಕ್ಷಿಪ್ತವಾಗಿ ನೋಡಿದಮೇಲೆ ಸಮ್ಪ್ರಜ್ಞಾತ ಸಮಾಧಿಯನ್ನು ಅದರ ವಿಸ್ತಾರದಲ್ಲಿ ಈ ಕೆಳಗಿನ ಚಿತ್ರೋಪಮವನ್ನು ಮನಸ್ಸಿನಲ್ಲಿಟ್ಟುಕೊಣ್ಡು ನೋಡೋಣ

ಪುರುಷ + ಪ್ರಕೃತಿ(ಅಲಿಙ್ಗ) - > ಲಿಙ್ಗಮಾತ್ರ/ಮಹತ್ - > ಅವಿಶೇಷ- > ವಿಶೇಷ

ವಿಶೇಷ- > ಅವಿಶೇಷ- > ಲಿಙ್ಗಮಾತ್ರ/ಮಹತ್- > ಪ್ರಕೃತಿ (ಅಲಿಙ್ಗ) = ಸಮ್ಪ್ರಜ್ಞಾತ ಸಮಾಧಿ

ಈ ಸೂತ್ರವೇ ಹೇಳುತ್ತಿರುವನ್ತೆ ಸಮ್ಪ್ರಜ್ಞಾತ ಸಮಾಧಿಯಲ್ಲಿ ಒನ್ದಾದ ಮೇಲೆ ಮತ್ತೊನ್ದು ಬರುವನ್ಥಹಾ ನಾಲ್ಕು ರೇಖೀಯ( linear) ಸ್ಥರಗಳಿವೆ - ವಿತರ್ಕವಿಚಾರಾನನ್ದಾಸ್ಮಿತಾರೂಪಾನುಗಮಾತ್ ಸಮ್ಪ್ರಜ್ಞಾತಃ

(ಅ) ವಿತರ್ಕ ಸಮಾಧಿ

(ಆ) ವಿಚಾರ ಸಮಾಧಿ

(ಇ) ಆನನ್ದ ಸಮಾಧಿ ಅಥವಾ ಸಾನನ್ದ ಸಮಾಧಿ

(ಈ) ಅಸ್ಮಿತ ಸಮಾಧಿ ಅಥವಾ ಸಾಸ್ಮಿತ ಸಮಾಧಿ

ಗುಣಗಳ ಬಗ್ಗೆ, ಅನ್ದರೆ ಸತ್ವ-ರಜಸ್-ತಮಸ್ಸ್ ಗುಣಗಳ ಬಗ್ಗೆ ನಮ್ಮೆಲ್ಲರಿಗೂ ಸರ್ವೇಸಾಮಾನ್ಯವಾಗಿ ತಿಳಿದಿದೆ. ಗುಣಗಳ ವಿಚಾರ ಮೂಲತಹ ಸಾಙ್ಖ್ಯದರ್ಶನದ ವಿಚಾರ. ಸಾಙ್ಖ್ಯದ ಅಭಿಪ್ರಾಯದಲ್ಲಿ ಪ್ರಕೃತಿಯು ಸತ್ವ-ರಜಸ್-ತಮಸ್ಸ್ ಗಳೆಮ್ಬ ಮೂರು ಗುಣಗಳಿನ್ದ ಮಾಡಲ್ಪಟ್ಟಿದೆ (ಪುರುಷನಿಗೆ ಗುಣಗಳಿಲ್ಲ), ಮತ್ತು ಈ ಮೂರು ಗುಣಗಳಲ್ಲಿನ ಸಮತಾ ಸ್ಥಿತಿ ಭಿನ್ನವಾದಾಗ ಸೃಷ್ಟಿಯ ಕ್ರಿಯೆಯಾಗುತ್ತದೆ. ತಮಸ್ಸ್ ತತ್ವವು ಮುಖ್ಯವಾಗಿ ಚಲನೆಯನ್ನು ವಿರೋಧಿಸುವ ಗುಣವಾಗಿರುತ್ತದೆ (inertia), ರಜಸ್ ಗುಣವು ಚಲನಾತ್ಮಕ ಗುಣವಾಗಿದ್ದು, ಸತ್ವ ಗುಣವು ಆನನ್ದ ಮತ್ತು ವಿಭ್ರಾಜತೆಯ (ಬೆಳಕಿನ) ಗುಣವಾಗಿರುತ್ತದೆ. ವಿತರ್ಕ ಸಮಾಧಿಯು ತಮಸ್ಸಿನ ಗುಣಗಳಿಗೆ ಸಮ್ಬನ್ಧ ಪಟ್ಟ ಸಮಾಧಿ, ವಿಚಾರ ಸಮಾಧಿಯು ರಜಸ್ ಗುಣಕ್ಕೆ ಸಮ್ಬನ್ಧ ಪಟ್ಟದ್ದಾದರೆ, ಆನನ್ದ ಮತ್ತು ಅಸ್ಮಿತ ಸಮಾಧಿಗಳು ಸತ್ವ ಗುಣಕ್ಕೆ ಸಮ್ಬನ್ಧ ಪಟ್ಟಿರುತ್ತದೆ

ಈ ಬೇರೆಬೇರೆ ರೀತಯ ಸಮಾಧಿಗಳನ್ನು ಒನ್ದೊನ್ದಾಗಿ ಸವಿಸ್ತಾರದಲ್ಲಿ ಪರ್ಯಾಲೋಚನ ಮಾಡೋಣ

(ಅ) ವಿತರ್ಕ ಸಮಾಧಿ (ತುಪ್ಪ)

ಪ್ರಾರಮ್ಭದಲ್ಲಿ, ಈ ಸೂತ್ರದ ಅರ್ಥಗತಿಯಲ್ಲಿ ಉಲ್ಲೇಖಿಸಿದ ಹಾಗೆ ವಿತರ್ಕವೆನ್ದರೆ ಉದೂಢವಾದ ದ್ರವ್ಯಧೀತಾನಿಗಳು( gross objects and thoughts)ನಮ್ಮ ಉದಾರಣೆಯಲ್ಲಿ ತುಪ್ಪ!. ವಿತರ್ಕ ಸಮಾಧಿಯ ಕೇನ್ದ್ರಬಿನ್ದು ಪ್ರಕೃತಿಯ ೨೩ ಅವಸ್ಥೆಗಳ ಮೊದಲನೆಯ ವರ್ಗವಾದ "ವಿಶೇಷ", ಇದರಲ್ಲಿನ ೧೬ ಅತಿ ಉದೂಢವಾದ ೧೬ ಪ್ರಕೃತಿ ತತ್ವಗಳು (ಐದು ಪಞ್ಚಭೂತಗಳು, ಐದು ಕರ್ಮೇನ್ದ್ರಿಯಗಳು, ಐದು ಜ್ಞಾನೇನ್ದ್ರಿಯಗಳು ಮತ್ತು ಮನಸ್ಸು ಅಥವಾ ಮೇಲ್ಮನಸ್ಸು)

ವಿತರ್ಕ ಸಮಾಧಿಯ ಅನ್ತಿಮ ಅಥವಾ ಅನುಮಿಮಾನ( concluding) ಗುರಿ, ೧೬ "ವಿಶೇಷ"ಗಳನ್ನು, ಅವುಗಳ ಸ್ವಭಾವವನ್ನು ಸಮ್ಪೂರ್ಣವಾಗಿ ಅರಿತು, ಅವುಗಳ ವೃತ್ತಿಗಳನ್ನು ನಿರೋಧಿಸುವುದು. ಇದಕ್ಕೆ ಬೇಕಾಗಿರುವುದು ೧೨ನೆಯ ಸೂತ್ರದಲ್ಲಿ ನಾವು ಚರ್ಚಿಸಿದ ಹಾಗೆ ಅಭ್ಯಾಸವೈರಾಗ್ಯಾಭ್ಯಾಂ ತನ್ನಿರೋಧ: ಈ ಸೂತ್ರದ ಅರ್ಥಗತಿಯನ್ನು ಪುನಹ ನೋಡೋಣ -

ಅಭ್ಯಾಸ: ಅಭಿ (ಗಳಿಸುವುದು, ಯಾವುದಾದರೂ ಒಂದು ವಿಷಯವನ್ನು ನಿರ್ಜಯಗೊಳಿಸಿಕೊಳ್ಳುವುದು-mastering something) + ಅಸ್ + ಅ = ಅಸ ( ಹಿಡಿದುಕೊಳ್ಳುವುದು - holding on to) ಅಭ್ಯಾಸ = ವಿಷಯವನ್ನು ನಿರ್ಜಯಗಳಿಸಿಕೊಳ್ಳುವುದು, ಮತ್ತು ಅದನ್ನು , ಆ ವಿಷಯವನ್ನು ( ನಿರ್ಜಯಗಳಿಸಿಕೊಂಡ) ನಮ್ಮಲ್ಲಿಯೇ ಹಿಡಿದಿಟ್ಟುಕೊಳ್ಳುವುದು-making efforts to mastering something and holding on to it, implying repeated and continuous efforts) ವೈರಾಗ್ಯ : ವಿ + ರಾಗ ( ರಾಗ ಇಲ್ಲದಿರುವುದು - absence of attachment - to the results of the efforts). ತನ್/ತತ್: ಅವುಗಳು, ಅಂದರೆ ವೃತ್ತಿಗಳ ನಿರೋಧಹ: ನಿರೃತಿಗೋಳಿಸುವುದು ( dissolution) ಫಲದ ಉನ್ಮಾದವಿಲ್ಲದಿರುವ ನಿರಂತರ ಅಭ್ಯಾಸದಿಂದ ಮನಸ್ಸಿವ ವೃತ್ತಿಗಳನ್ನು ನಿರೃತಿಗೋಳಿಸಬಹುದು

ವಿತರ್ಕ ಸಮಾಧಿಯಲ್ಲಿ "ವಿಶೇಷ"ಗಳ ೧೬ ತತ್ವಗಳ ಮೇಲೆ ನಿರಂತರವಾಗಿ ಧ್ಯಾನ, ಆ ಧ್ಯಾನದ ಕಾರಣದಿಂದ, ಮನಸ್ಸು ಮತ್ತು ಆ ತತ್ವಗಳ ಅನುಭವ/ಗೃಹೀತಿಗಳು ಒಂದಾಗಿ, ಅದರಿಂದ ಆ ತತ್ವಗಳ ಎಲ್ಲ ಗುಣಲಕ್ಷಣಗಳ ಸಮ್ಪೂರ್ಣ ಅರಿವಾಗಿ, ಒಂದು ಗುಣಲಕ್ಷಣವಾದ ಅದರ ಅನಿತ್ಯತೆಯ ಅರಿವೂ ಆಗಿ. ಈ ಅರಿವಿನ ಕಾರಣ, "ವಿಶೇಷ"ಗಳ ಬಗ್ಗೆ ವೈರಾಗ್ಯವಾಗಿ ಅನುಮಿಮಾನದಲ್ಲಿ ಅದರ ವೃತ್ತಿಗಳ ನಿರೋಧವಾಗುತ್ತದೆ. "ವಿಶೇಷ"ಗಳ ೧೬ ತತ್ವಗಳಲ್ಲಿ ಧೀತಾನಿಗಳೂ ಇರುವುದರಿಂದ, ಗುಣಲಕ್ಷಣಗಳು ಎಂದಾಗ, ನಮ್ಮ ಯೋಚನೆಗಳ ಗುಣಲಕ್ಷಣಗಳು, ಯೋಚನೆಗಳು ಭಾಷೆಯ ಮೂಲಕ ಆಗುವುದರಿಂದ ಭಾಷೆ, ಪದಗಳು, ಪದಗಳ ಅರ್ಥಗಳ ಗುಣಲಕ್ಷಣಗಳು, ವ್ಯಾಕರಣ ಮುಂತಾದವುಗಳು, ಪಞ್ಚಭೂತಗಳು, ಕರ್ಮೇನ್ದ್ರಿಯ, ಜ್ಞಾನೇನ್ದ್ರಿಯ ಮತ್ತು ಮನಸ್ಸಿನ ಮೂಲಕ ಪ್ರಪಞ್ಚವನ್ನು ನೋಡನುಭವಿಸಿ ಬೆಳೆಸಿಕೊಳ್ಳುವ ಅಭಿಪ್ರಾಯಗಳೂ ಸೇರಿದೆ - ಒಟ್ಟಾರೆ, ಸೃಷ್ಟಿಯಲ್ಲಿನ ಎಲ್ಲ ಉದೂಢ ತತ್ವಗಳು. - ಇಲ್ಲಿ "ವಿಶೇಷ"ಗಳ ವೈರಾಗ್ಯವಾಗುವ ಪ್ರಕ್ರಿಯೆಯು ೧೫ನೆಯ ಸೂತ್ರವನ್ನು ("ದೃಷ್ಟಾನುಶ್ರವಿಕ ವಿಷಯ ವಿತೃಷ್ಣಸ್ಯ ವಶೀಕಾರಸಞ್ಜಾವೈರಾಗ್ಯಮ್") ಚರ್ಚಿಸುವಾಗ ಆವಲಿ ಮಾಡಿದ ನಾಲ್ಕು ಸ್ತರಗಳಾದ ಯತಮಾನ, ವ್ಯತಿರೆಕ, ಏಕೇನ್ದ್ರಿಯ ಮತ್ತು ವಶೀಕಾರ ಗಳನ್ನು ಹಾದುಹೋಗುತ್ತದೆ - ಇದು ಎಲ್ಲದರ ವೈರಾಗ್ಯಕ್ಕೂ ಅನ್ವಯವಾಗುತ್ತದೆ

ವಿತರ್ಕ ಸಮಾಧಿಯ ಫಲಿತಾಂಶದಲ್ಲಿ, ಒಂದು ಕಡೆ "ವಿಶೇಷ"ಗಳ ಅನಿತ್ಯತೆಯ ಅರಿವಾಗಿ ಅವುಗಳನ್ನು ತ್ಯಜ ಮಾಡಿದ್ದಾದರೆ, ಅದರ ಜೊತೆಯಲ್ಲೇ "ವಿಶೇಷ"ಗಳ ನಿಮಿತ್ತವಾದ ಅವುಗಳಿಗೆ ಕಾರಣವಾದ, ಇನ್ನೂ ಸೂಕ್ಷ್ಮವಾದ ರಜಸ್ ಗುಣಗಳ "ಅವಿಶೇಷ"ಗಳನ್ನು ಅರಿಯಲು ಅದರ ಸಮಾಧಿಯ(ವಿಚಾರ ಸಮಾಧಿ) ದ್ವಾರಕವನ್ನು ತಟ್ಟಲು ಸಾಧಕನು ಮುಂದಾಗುತ್ತಾನೆ
ವಿತರ್ಕ ಸಮಾಧಿಯು ತಮಸ್ಸ್ ಗುಣಗಳಿಗೆ ಸೇರಿದ ಸಮಾಧಿ ಮತ್ತು ಇದನ್ನು ಎರಡು ರೀತಿಯಯಲ್ಲಿ ವಿಙ್ಗಡಿಸಲಾಗಿದೆ - ಸವಿತರ್ಕ ಸಮಾಧಿ ಮತ್ತು ನಿರ್ವಿತರ್ಕ ಸಮಾಧಿ. ಇವೆರೆಡನ್ನು ಮುಂದೆ ನೋಡೋಣ
(ಆ) ವಿಚಾರ ಸಮಾಧಿ (ಮೊಸರು)
ವಿತರ್ಕ ಸಮಾಧಿಯಲ್ಲಿ ೧೬ "ವಿಶೇಷ"ಗಳಲ್ಲಿ ಧೀತಾನಗಳೂ ಇದೆ ಎಂದು ಹೇಳಲಾಗಿತ್ತು ಮತ್ತು ಈ ಸನ್ದರ್ಭದಲ್ಲಿ, ಯೋಚನೆಗಳು, ಯೋಚನೆಗಳ ಗುಣಗಳು ಸೇರಿವೆ, ಅವು ಕೂಡಾ ಉದೂಢವಾದವು ಮತ್ತು ಅದರ ಬಗ್ಗೆ ವಿತರ್ಕ ಸಮಾಧಿಯಲ್ಲಿ ವೈರಾಗ್ಯವಾಗುತ್ತದೆ ಎಂದು ಉಲ್ಲೇಖ ಮಾಡಲಾಗಿತ್ತು. ಹಾಗಾದರೆ, ಯೋಚನೆಗಳು ಅಂದರೆ ವಿಚಾರಗಳಲ್ಲವೇ? ಹೌದು ಎಂದಾದರೆ, ಪ್ರತ್ಯೇಕವಾಗಿ ವಿಚಾರ ಸಮಾಧಿ ಏಕೆ? ಇಲ್ಲಿ ವಿಚಾರ ಎಮ್ಬ ಪದವನ್ನು ಅದರ ಸಮ್ವಾದಿಕ( colloquial)ಅರ್ಥದಲ್ಲಾಗಲಿ ಅಥವಾ ಬರೇ ಒಂದು ಅರ್ಥದಲ್ಲಿ ನೋಡಲಾಗದೇ, ಪದದ ಮೂಲವನ್ನು ಹಿಡಿದು ನೋಡಬೇಕಾಗುತ್ತದೆ. ಸಂಸ್ಕೃತದಲ್ಲಿ "ವಿ" ಉಪಸರ್ಗವನ್ನು ಒಂದು ಪದದ

ಜೊತೆಯಲ್ಲಿ ಬಳಸಿದಾಗ, ಆ ಪದಕ್ಕೆ ಹಲವಾರು ಅರ್ಥಪ್ರಾಪ್ತಿಯಾಗುತ್ತದೆ (ಕೆಲವೊಮ್ಮೆ ಒಂದೇ ಪದಕ್ಕೆ ಎರೆಡು ವ್ಯಪೋಢವಾದ-opposite ಅರ್ಥಗಳೂ ಬರುತ್ತದೆ, ಉದಾಹರಣೆಗೆ ವಿಕೃತ ಎಮ್ಬ ಪದ) ಅಥವಾ ಇರುವ ಅರ್ಥವು ಸಂಪೃಣೋತಿಗೊಳ್ಳುತ್ತದೆ( embellished). ಇದಕ್ಕೆ ಉದಾಹರಣೆ, ಈಗ ಚರ್ಚೆಯಲ್ಲಿರುವ ಪದ "ವಿಚಾರ". ಚರ ಪದಕ್ಕಿರುವ ಹೋಗುವುದು (ಗತಿಶೀಲನೆ) ಎಮ್ಬ ಅರ್ಥವಿದ್ದು, ಚಾರ ಎಮ್ಬ ಪದಕ್ಕೆ ಒಂದು ನಿರ್ದಿಷ್ಟ ಗುರಿಯ ಕಡೆ ಹೋಗುವುದು ಎಂದಾಗಿ ( progressive movement or progression), "ವಿ" ಸೇರಿಸಿದಾಗ, ವಿಶಿಷ್ಟವಾಗಿ ಒಂದು ಗುರಿಯ ಕಡೆ ಹೋಗುವುದೆಂದಾಗುತ್ತದೆ.

ವಿತರ್ಕ ಸಮಾಧಿಯಲ್ಲಿ, ಅತಿ ಉದೂಢವಾದ "ವಿಶೇಷ"ದ ಎಲ್ಲ ೧೬ ತತ್ವಗಳನ್ನು ಅರಿತು, ಅದರ ಬಗ್ಗೆ ವೈರಾಗ್ಯದಿಂದ ಅವುಗಳನ್ನು ತ್ಯಜಿಸಿ, ಅವುಗಳ ನಿಮಿತ್ತಗಳಾದ "ವಿಶೇಷ"ಕ್ಕಿನ್ತಲೂ ಹೆಚ್ಚು ಸೂಕ್ಷ್ಮವಾದ "ಅವಿಶೇಷ" - ಮತ್ತು ಅದರ ೬ ತತ್ವಗಳ - ಐದು ತನ್ಮಾತ್ರಗಳು ಮತ್ತು ಅಸ್ಮಿತ ಅಥವಾ ಅಹಙ್ಕಾರ, ಕಡೆ ಸಾಧಕನು ಗಮನ ಹರಿಸುತ್ತಾನೆ - ಎರೆಡು ಪಾದಗಳಲ್ಲಿ ಗಮನ ಹರಿಸುತ್ತಾನೆ. ಮೊದಲನೆಯ ಪಾದದಲ್ಲಿ, ಐದು ತನ್ಮಾತ್ರಗಳ ಮೇಲೆ ಗಮನ ಕೊಟ್ಟು, ಅವುಗಳ ಸಮಾಧಿಯನ್ನು ಹೊಂದಿ ಅವುಗಳನ್ನು ತ್ಯಜಿಸಿ, ಮುಂದಿನ ಪಾದದಲ್ಲಿ, ಆರನೆಯ "ಅವಿಶೇಷ" ತತ್ವವಾದ ಅಸ್ಮಿತ ಅಥವಾ ಅಹಙ್ಕಾರ ಕಡೆ ತನ್ನ ಗಮನವನ್ನು ಕೊಡುತ್ತಾನೆ.

ಮೊದಲನೆಯ ಪಾದ, ವಿಚಾರ ಸಮಾಧಿ, ಎರಡನೆಯ ಪಾದ ಆನನ್ದ ಅಥವಾ ಸಾನನ್ದ ಸಮಾಧಿ
ವಿಚಾರ ಸಮಾಧಿಯ ಪ್ರಕ್ರಿಯೆಯು ವಿತರ್ಕ ಸಮ್ಮಧಿಯ ಪ್ರಕ್ರಿಯೆಯ ಹಾಗೇ ಇದ್ದು, "ಅವಿಶೇಷ"ಗಳ ೫ ತತ್ವಗಳ ಮೇಲೆ ನಿರನ್ತರವಾಗಿ ಧ್ಯಾನ, ಆ ಧ್ಯಾನದ ಕಾರಣದಿನ್ದ, ಮನಸ್ಸು ಮತ್ತು ಆ ತತ್ವಗಳ ಅನುಭವ/ಗೃಹೀತಿಗಳು( perceptions) ಒನ್ದಾಗಿ, ಅದರಿನ್ದ ಆ ತತ್ವಗಳ ಎಲ್ಲ ಗುಣಲಕ್ಷಣಗಳ ಸಮ್ಪೂರ್ಣ ಅರಿವಾಗಿ, ಒನ್ದು ಗುಣಲಕ್ಷಣವಾದ ಅದರ ಅನಿತ್ಯತೆಯ ಅರಿವೂ ಆಗಿ. ಈ ಅರಿವಿನ ಕಾರಣ, ಈ ಐದು ತತ್ವಗಳ ಬಗ್ಗೆ ವೈರಾಗ್ಯವಾಗಿ ಅನುಮಿಮಾನದಲ್ಲಿ ( in conclusion)ಅದರ ವೃತ್ತಿಗಳ ನಿರೋಧವಾಗುತ್ತದೆ.

ವಿಚಾರ ಸಮಾಧಿಯು ರಜಸ್ ಗುಣಗಳಿಗೆ ಸೇರಿದ ಸಮಾಧಿ ಮತ್ತು ಇದನ್ನು ಎರೆಡು ರೀತಿಯಯಲ್ಲಿ ವಿಙ್ಗಡಿಸಲಾಗಿದೆ - ಸವಿಚಾರ ಸಮಾಧಿ ಮತ್ತು ನಿರ್ವಿಚಾರ ಸಮಾಧಿ. ಇವೆರೆಡನ್ನು ಮುನ್ದೆ ನೋಡೋಣ

(ಇ) ಆನನ್ದ ಸಮಾಧಿ ಅಥವಾ ಸಾನನ್ದ ಸಮಾಧಿ
ಆನನ್ದವು ಅಸ್ಮಿತ ಅಥವಾ ಅಹಙ್ಕಾರಕ್ಕೆ ಸೇರಿದ ವಿಷಯ. ಅದನ್ನು ಯಾವಾಗಲೂ ಅಸ್ಮಿತ/ಅಹಙ್ಕಾರದ ಜೊತೆಯಲ್ಲೇ ಉಲ್ಲೇಖ ಮಾಡುತ್ತೇವೆ - "ನಾನು ಆನನ್ದವಾಗಿದ್ದೇನೆ" , "I am happy" ."ನಾನು", "I am" ಗಳೇ ಸಮ್ಪ್ರದಿಕ ರೂಪದಲ್ಲಿ ಅಸ್ಮಿತ/ಅಹಙ್ಕಾರ. ಈ ಸನ್ದರ್ಭದಲ್ಲಿ, ಅಹಙ್ಕಾರ ಎಮ್ಬ ಪದವನ್ನು ದಿನಬಳಕೆಯಲ್ಲಿ ನೋಡುವ ಹಾಗೆ "ಅವರಿಗೆ ತುಮ್ಬಾ ಅಹಙ್ಕಾರ" ಎನ್ನು ನಕಾರಾತ್ಮಕ ದೃಷ್ಟಿಯಲ್ಲಿ ನೋಡಬಾರದು. ಪ್ರಕೃತಿ ತತ್ವಗಳಲ್ಲಿ ಒನ್ದಾದ ಅಹಙ್ಕಾರವು ಅಭಿಜಾನತೆಗೆ( identification/recognition), ಅನ್ದರೆ, ಅದು, ಇದು, ಅದು ನನ್ನದು, ಅದು ಅವರದು ಇದು ಬೇರೆಯನವರದು ಎನ್ನು ಗುರುತಿಸಲು ಸಮ್ಬನ್ಧಪಟ್ಟ ವಿಷಯ
ಈ ವರೆವಿಗೆ ವಿತರ್ಕಕ ಸಮಾಧಿಯ ಮೂಲಕ, "ವಿಶೇಷ"ಗಳನ್ನು/ತಮಸ್ಸಿನ ಸೀಮೆಯನ್ನು ದಾಟಿ, "ಅವಿಶೇಷ"/ರಜಸ್ಸಿನ ಸೀಮೆಯನ್ನೂ ದಾಟಿದ ಸಾಧಕನು ಸತ್ವದ ಸೀಮೆಯನ್ನು ಪ್ರವೇಶಿಸುತ್ತಾನೆ, ಸತ್ವದ ಚಿಹ್ನವಾದ, ಆನನ್ದದ ಮೇಲೆ ತನ್ನ ಧ್ಯಾನವನ್ನು ಕೇನ್ದ್ರೀಕರಿಸುತ್ತನೆ. ಆನನ್ದದ ಮೇಲೆ ನಿರನ್ತ ಧ್ಯಾನ ಮಾಡಿ, ಆ ಧ್ಯಾನದ ಕಾರಣದಿನ್ದ, ಆನನ್ದದ ಗುಣಲಕ್ಷಣಗಳನ್ನು ಅರಿತು, ಹೇಗೆ ಆನನ್ದದ ಅನುಭವವು ಅದು ಮತ್ತಷ್ಟು ಬೇಕೆಮ್ಬ ಕಾಮನೆಯನ್ನು ಹುಟ್ಟಿಸಿ ನಮ್ಮನ್ನು ಬನ್ಧನಕ್ಕೊಳಪಡಿಸುತ್ತದೆ ಎಮ್ಬುದನ್ನು ಅರಿತು ಆನನ್ದ ಸಮಾಧಿಯ ಮೂಲಕ ಅದನ್ನೂ ತ್ಯಜಿಸುತ್ತಾನೆ ಅದಕಾರಣ ಅದರ ನಿರೋಧವನ್ನು ಸಾಧಿಸುತ್ತಾನೆ
ವಿಚಾರ ಮತ್ತು ಆನನ್ದ ಸಮಾಧಿಯ ಫಲಿತಾಂಶದಲ್ಲಿ, ಒನ್ದು ಕಡೆ "ಅವಿಶೇಷ"ಗಳ ಅನಿತ್ಯತೆಯ ಅರಿವಾಗಿ ಅವುಗಳನ್ನು ತ್ಯಜ ಮಾಡಿದ್ದಾದರೆ, ಅದರ ಜೊತೆಯಲ್ಲೇ "ಅವಿಶೇಷ"ಗಳ ನಿಮಿತ್ತವಾದ ಅವುಗಳಿಗೆ ಕಾರಣವಾದ, ಇನ್ನೂ ಸೂಕ್ಷ್ಮವಾದ "ಮಹತ್"ಗಳನ್ನು ಅರಿಯಲು ಅದರ ಸಮಾಧಿಯ(ಸಾಸ್ಮಿತ ಸಮಾಧಿ) ದ್ವಾರಕವನ್ನು ತಟ್ಟಲು ಸಾಧಕನು ಮುನ್ದಾಗುತ್ತಾನೆ

(ಈ) ಅಸ್ಮಿತ ಸಮಾಧಿ ಅಥವಾ ಸಾಸ್ಮಿತ ಸಮಾಧಿ(ಹಾಲು)
ಈ ಕೆಳಗಿನ ಚಿತ್ರೋಪಮವನ್ನು ಪುನಹ ತೆಗೆದುಕೊಳ್ಳೋಣ
ಪುರುಷ + ಪ್ರಕೃತಿ(ಅಲಿಙ್ಗ) - > ಲಿಙ್ಗಮಾತ್ರ/ಮಹತ್ - > ಅವಿಶೇಷ- > ವಿಶೇಷ
ವಿಶೇಷ- > ಅವಿಶೇಷ- > ಲಿಙ್ಗಮಾತ್ರ/ಮಹತ್- > ಪ್ರಕೃತಿ (ಅಲಿಙ್ಗ) = ಸಮ್ಪ್ರಜ್ಞಾತ ಸಮಾಧಿ

ಒನ್ದೊನ್ದಾಗಿ ರೇಖೀಯವಾಗಿ ಒನ್ದಾದ ಮೇಲೆ ಒನ್ದು ಬರುವ ವಿತರ್ಕ, ವಿಚಾರ ಮತ್ತು ಆನನ್ದ ಸಮಾಧಿಯಗಳನ್ನು ಚರ್ಚಿಸುವಾಗ, ಎರೆಡು ಸಙ್ಗತಿಗಳನ್ನು ನೋಡಿದೆವು. ಮೊದಲನೆಯದು, ಹಾಲು, ಮೊಸರು, ಬೆಣ್ಣೆ ಮತ್ತು ತುಪ್ಪಗಳ ಉದಾಹರಣೆಯನ್ನಿಟ್ಟುಕೊಣ್ಡು ಹೇಗೆ ಒನ್ದಕ್ಕೊನ್ದು ನಿಮಿತ್ತವಾಗುತ್ತವೆ, ಒನ್ದಕ್ಕೊನ್ದು ನೈಮಿತ್ತವಾಗುತ್ತವೆ ಹಾಗೆಯೇ ಮತ್ತೊನ್ದು ಅಂಶವೆನ್ದರೆ, ಪ್ರತಿಯೊನ್ದು ಸಮಾಧಿಯ ಸ್ಥರದಲ್ಲೂ ಆ ಸಮಾಧಿಗೆ ಸಮ್ಬನ್ದಪಟ್ಟ ಪ್ರಕೃತಿ ತತ್ವಗಳನ್ನರಿತು, ಅವುಗಳ ಅನಿತ್ಯತೆಯನ್ನರಿತು, ಅದಕಾರಣ ಅವುಗಳನ್ನು ವಿರಾಗಿಸಿ ಅವುಗಳಿಗಿನ್ತ, ಸೂಕ್ಷ್ಮತೆಯಲ್ಲಿ ಸ್ವಲ್ಪ ಹೆಚ್ಚಾದ ಅವುಗಳ ನಿಮಿತ್ತವಾದ ತತ್ವಗಳನ್ನು ಅರಿಯುವುದು -
ನಮ್ಮ ಉದಾಹರಣೆಯಲ್ಲಿ, ತುಪ್ಪದ ಅನಿತ್ಯತೆಯನ್ನು ಅದರ ನಿಮಿತ್ತವಾದ ಬೆಣ್ಣೆಯನ್ನು ಅರಿಯುವುದು. ಹೀಗೆ ಮುನ್ದುವರೆಸಿ, ನಾವು ಹಾಲಿನ ಬಳಿ ಬನ್ದು ನಿನ್ತಿದ್ದೇವೆ. ತುಪ್ಪ, ಬೆಣ್ಣೆ, ಮೊಸರು ಮತ್ತು ಹಾಲುಗಳಲ್ಲಿ, ಹಾಲು ಎಲ್ಲಕ್ಕಿನ್ತಲೂ ಸೂಕ್ಷ್ಮ ಮತ್ತು ಬಹು ಮುಖ್ಯವಾಗಿ ಹಸುವಿಗೆ, ಹಸುವಿನ ಜೊತೆಯಲ್ಲಿ ನೇರವಾದ ತನೂಕರಣಗೊಳ್ಳದ ತತ್ವವೆನ್ದರೆ ಹಾಲು. ಈ ಹಸು-ಹಾಲಿನ ಉಪಮೆಯನ್ನು ಮೇಲಕ್ಕೆತ್ತರಿಸಿ ಪ್ರಕೃತಿಯ ಮಟ್ಟಕ್ಕೆತ್ತರಿಸಿ ನೋಡಿದಾಗ ಹಸು ಮೂಲ ಪ್ರಕೃತಿಯಾದರೆ ಹಾಲು ಮಹತ್ ಅಥವಾ ಬುಧ್ಧಿ ತತ್ವ.
ಮೂಲಪ್ರಕೃತಿಯ ಜೊತೆಯಲ್ಲಿ ತನೂಕರಣಗೊಳ್ಳದೇ ನೇರವಾದ ಸಙ್ಚಿತವನ್ನಿಟ್ಟುಕೊನ್ಡಿರುವ ತತ್ವವೆನ್ದರೆ ಮಹತ್/ಬುಧ್ಧಿ/ಲಿಙ್ಗಮಾತ್ರ.
ಇಷ್ಟೇ ಅಲ್ಲದೇ ಮೊದಲೇ ಹೇಳಿದಹಾಗೆ ಪುರುಷ-ಪ್ರಕೃತಿಯ ಸಮ್ಮಿಲನವಾದಾಗ, ಹೊರಮೊಮ್ಮುವ ಮೊದಲ ಪ್ರಕೃತಿ ತತ್ವವು ಬುಧ್ಧಿಯಾದುದರಿನ್ದ, ಮಹತ್ ತತ್ವವು ಪ್ರಕೃತಿಗಲ್ಲದೇ ಪುರುಷ ತತ್ವಕ್ಕೂ ಬಹಳ ಹತ್ತಿರವಾಗಿದ್ದು, ಪುರುಷ ಮತ್ತು ಪ್ರಕೃತಿಗೆ ನೇರ ಸಮ್ಪರ್ಕವನ್ನುಟುಮಾಡುವ ತತ್ವವೇ ಮಹತ್/ಬುಧ್ಧಿ/ಲಿಙ್ಗಮಾತ್ರ ತತ್ವ. ಮಗುವು ತಾಯಿ ಹಾಗೂ ತನ್ದೆ ಇಬ್ಬರಿಗೂ ಹತ್ತಿರವಾಗಿರುವನ್ತೆ

ಆನನ್ದ ಸಮಾಧಿಯನ್ನು ಚರ್ಚೆಮಾಡುವಾಗ, "ನಾನು ಆನನ್ದವಾಗಿದ್ದೇನೆ" ಎಮ್ಬುದನ್ನು ಹೇಳಿತ್ತು. ಇದರಲ್ಲಿ "ನಾನು" ಅನ್ನುವುದೇ ಅಸ್ಮಿತ/ಅಹಙ್ಕಾರ ತತ್ವ ಮತ್ತು ಇದರ ಜನಕನೇ, ನಿಮಿತ್ತವೇ ಕಾರಣವೇ ಮಹತ್. ಸಾಸ್ಮಿತ ಸಮಾಧಿಯಲ್ಲಿ ಈ ಮಹತ್ ತತ್ವವನ್ನೂ ದಾಟಿ ಮೂಲ ಸೂಕ್ಷ್ಮಾತಿ ಸೂಕ್ಷ್ಮವಾದ ಪ್ರಕೃತಿಯ ಪೂರ್ಣ ಅರಿವನ್ನು ತಲುಪುಲಾಗುತ್ತದೆ - ಈ ಸ್ಥಿತಿಯೇ ಸಮ್ಪ್ರಜ್ಞಾತ ಸಮಾಧಿ. ಬಹು ಮುಖ್ಯವಾಗಿ ಗಮನಿಸಬೇಕಾದ ವಿಷಯವೆನ್ದರೆ, ಸಮ್ಪ್ರಜ್ಞಾತ ಸಮಾಧಿಯು ಕೊನೆಯ ಸ್ಥರವಲ್ಲ, ಅನ್ತಿಮ ಗುರಿಯಲ್ಲ. ತನ್ನ ಸ್ವಸ್ವರೂಪವನ್ನು ಸಾಧಕನು ಅರಿಯಬೇಕಾದರೆ, ಮೂಲ ಪ್ರಕೃತಿಯನ್ನೂ ದಾಟಿ ಅಸಮ್ಪ್ರಜ್ಞಾತ ಸಮಾಧಿಯಾಗಬೇಕು

ಓಂತತ್ ಸತ್
ತದ್ಯಥಾ, ಈರೀತಿಯಲ್ಲಿ

ಗತೇ ಗತೇ ಪರಾಗತೇ ಪರಾಸಙ್ಗತೇ ಬೋಧಿ ಸ್ವಾಹ - ಹೋದರು! ಹೋದರು! ಪೂರ್ಣತ್ವದ ಕಡೆಗೆ ಹೋದರು! ಸಮ್ಪೂರ್ಣವಾಗಿ ಪೂರ್ಣತ್ವದಕಡೆಕೆ ಹೋದರು! ಜ್ಞಾನೋದಯಕ್ಕೆ ಜಯಕಾರ - ಪ್ರಜ್ಞಾಪರಮಿತ ಹೃದಯ ಸೂತ್ರ





# ನ್ಯೂ ಜೆರ್ಸಿ ಪ್ರಾಣಾ ಕ್ಲಬ್ ಗೊಂದು ಮುನ್ನುಡಿ . . .

**ಅಶೋಕ್ ಕಟ್ಟಿಮನಿ**, *ನ್ಯೂ ಜೆರ್ಸಿ*


ವೈಜ್ಞಾನಿಕ ಪ್ರಾಣಾಯಾಮ ಕಾರ್ಯಾಗಾರ - ಡಾ. ದೇವಕಿ ಮಾಧವರೊಂದಿಗೆ...

ಅಂದು (ಸೆಪ್ಟೆಂಬರ್ 2), ಆಸ್ಟಿನ್ ನಾವಿಕ ಸಮ್ಮೇಳನದ ಎರಡನೇ ದಿನ, ಬೆಳಗಿನ ಜಾವ 6.00 ಗಂಟೆಯ ಸಮಯ. ಸಮ್ಮೇಳನದ ಅಂಗವಾಗಿ ಏರ್ಪಡಿಸಿದ್ದ ಯೋಗ ತರಗತಿಯಲ್ಲಿ ಭಾಗವಹಿಸಿದ್ದವರು ಕೇವಲ 20 ಜನ ಮಧ್ಯ ವಯಸ್ಕರು. ಸಾವಿರಾರು ಜನ ಭಾಗವಹಿಸಿದ್ದ ಆ ಸಮ್ಮೇಳನದಲ್ಲಿ ಅನೇಕರಿಗೆ ಪ್ರಾಣಾಯಾಮ ವಿಶೇಷವಾಗಿ ಕಂಡಿರಲಾರದು !!!!ಮೊದಲ ಬಾರಿ ಅಂದು ನನಗೆ ಡಾ. ದೇವಕಿ ಮಾಧವರ ಪರಿಚಯವಾಯಿತು. ಅವರು ತಮ್ಮ ಬದುಕಿನ ಪ್ರಾಣಾಯಾಮ ಪ್ರಯಾಣದ ಪರಿಚಯ ಮಾಡಿಕೊಂಡರು. ತಮ್ಮ ಸಂಶೋಧನೆ, ಪ್ರಾಣಾಯಾಮದ ವೈಜ್ಞಾನಿಕ ಮಹತ್ವ , ಮಾಡುವ ಸರಿಯಾದ ವಿಧಾನ ಅವರ ತರಗತಿಯ ಸಾರಾಂಶ. ವೈಜ್ಞಾನಿಕ ಪ್ರಾಣಾಯಾಮದ ಸಾವಿರಾರು ಕಾರ್ಯಗಾರಗಳನ್ನು ಸಂಘಟಿಸಿ 40 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿ ಸಮೂಹ ಹೊಂದಿರುವ ಡಾ. ದೇವಕಿ ಮಾಧವರ ಪರಿಶ್ರಮ ಶ್ಲಾಘನೀಯ. ಅವರ ಜೀವನದ ಮುಖ್ಯ ಉದ್ದೇಶ, ಭಾರತದ ಪುರಾತನ ಪ್ರಾಣಾಯಾಮವನ್ನ ವೈಜ್ಞಾನಿಕವಾಗಿ ವಿಶ್ಲೇಷಿಸಿ, ಸಾಧನೆಯ ವಿಧಾನ, ಆರೋಗ್ಯ ಮತ್ತು ಮನಸ್ಸಿನ ಮೇಲೆ ಅದರಿಂದಾಗುವ ವಿಶೇಷ ಪ್ರಯೋಜನಗಳನ್ನ ಎಲ್ಲರಿಗೂ ಪರಿಚಯ ಮಾಡಿ ಕೊಡುವುದು. ಹೆಚ್ಚು ಹೆಚ್ಚು ಜನ ಪ್ರಾಣಾಯಾಮ ಅಭ್ಯಾಸ ಮಾಡುವಂತೆ ಮಾಡುವುದು ಅವರ ಗುರಿ.

ತಂದೆಯವರಿಂದ ಚಿಕ್ಕಂದಿನಿಂದಲೇ ನನಗೆ ಪ್ರಾಣಾಯಾಮದ ಪರಿಚಯವಾಗಿದ್ದರೂ, ತಪ್ಪಾದ ಅಭ್ಯಾಸದಿಂದ ಬಹಳಷ್ಟು ದುಷ್ಪರಿಣಾಮಗಳಾಗಬಹುದು ಎಂದು ನಂಬಿದ್ದ ದಿನಗಳವು. ಎಂಭತ್ತು - ತೊಂಬತ್ತರ ದಶಕಗಳಲ್ಲಿ ಸರಿಯಾಗಿ ಪ್ರಾಣಾಯಾಮ ಕಲಿಸುವ ಗುರುಗಳೂ ಕಡಿಮೆ ಇದ್ದಿರಬಹುದು. ಇಂದಿನಂತೆ ಯಟ್ಯೂಬ್, ಜೂಮ್ ತರಗತಿಗಳಿರಲಿಲ್ಲ. ಮುಂದೆ 90ರ ದಶಕದಲ್ಲಿ ಸಾಕಷ್ಟು ಪ್ರಚಾರಗಳಿಂದ ಪ್ರಾಣಾಯಾಮದ ಪ್ರಯೋಜನ ಬಹಳಷ್ಟು ಜನರಿಗೆ ತಲುಪಿದರೂ, ಅದೊಂದು ಯೋಗಾಭ್ಯಾಸದ ಭಾಗವಾಗಿ ಗುರುತಿಸಿಕೊಂಡಿದ್ದೆ ಹೆಚ್ಚು.



ಹಲವು ದಶಕಗಳಿಂದ ಪ್ರಾಣಾಯಾಮದ ಪರಿಚಯ...ಸೀಮಿತ ಅಭ್ಯಾಸವಿದ್ದರೂ .. ಪ್ರಾಣಾಯಾಮ ಮಾಡುವ ಸರಿಯಾದ ಕ್ರಮ, ಮನಸ್ಸು, ದೇಹ, ಆರೋಗ್ಯದ ಮೇಲೆ ಅದರಿಂದಾಗಬಹುದಾದ ಅಗಾಧ ಪರಿಣಾಮಗಳ ಅರಿವಾಗಿದ್ದು ನಮ್ಮ ಆ ಒಂದು ಗಂಟೆಯ ಡಾ. ದೇವಕಿ ಮಾಧವ ರವರ ತರಗತಿಯಲ್ಲಿ ... ಅಂದೇ ಅವರೊಂದಿಗೆ ಮಾತನಾಡಿ  ನ್ಯೂ ಜೆರ್ಸಿಗೆ ಬನ್ನಿ ಎಂದು ಆಹ್ವಾನಿಸಿದೆ. ಸೆಪ್ಟೆಂಬರ್ 30  ಶನಿವಾರ, ನ್ಯೂ ಜೆರ್ಸಿ ಎಡಿಸನ್ ಶ್ರೀ ಸಾಯಿ ಮಂದಿರದಲ್ಲಿ ಡಾ ದೇವಕಿ ಮಾಧವ್ ನೆಡೆಸಿ ಕೊಟ್ಟ 4 ಗಂಟೆಗಳ ವೈಜ್ಞಾನಿಕ ಪ್ರಾಣಾಯಾಮ ಕಾರ್ಯಾಗಾರ, ಅದರಲ್ಲಿ ಭಾಗವಹಿಸಿದ್ದ 90+ ಸ್ನೇಹಿತರ ಮೇಲೆ ಉಂಟು ಮಾಡಿದ ಅಗಾಧ ಪರಿಣಾಮ ನಂಬಲಸಾಧ್ಯ !!!! .... ಡಾ ದೇವಕಿಯವರಿಗೆ ಮತ್ತು ಶ್ರೀ ಮಾಧವರಿಗೆ ಚಿರ ಋಣಿ .... ಅವರನ್ನು ಕರೆತಂದ ಫಿಲಡೆಲ್ಫಿಯಾದ ವೀಣಾ, ಸ್ಥಳ ನೀಡಿದ  ಎಡಿಸನ್ ಸಾಯಿ ಮಂದಿರದ ಶ್ರೀ ರಘು, ಶ್ರೀ ಮುರಳಿ ಯವರಿಗೆ, ಜೊತೆಗಿದ್ದು ಸಹಕರಿಸಿದ ಸತ್ಯ ಪ್ರಸಾದ್, ರಾಘವೇಂದ್ರ, ಸುನೀಲ್, ಸುಬ್ಬು, ಡಾ ಉಷಾ, ರಘುರಾಮ್, ಸುಹಾಸ್ ಗೆ ಕೃತಜ್ಞತೆಗಳು....ತಮ್ಮೆಲ್ಲ ಕೆಲಸ ಬದಿಗಿಟ್ಟು ಭಾಗವಹಿಸಿದ ಸ್ನೇಹಿತರಿಗೆ ಪ್ರೀತಿ ಪೂರ್ವಕ ವಂದನೆಗಳು. ಈ ಪ್ರಯತ್ನ  ಹೀಗೇ ಮುಂದುವರೆದು. ಪ್ರಾಚೀನ ಭಾರತದ  ಪ್ರಾಣಾಯಾಮದ ಕೊಡುಗೆಯ ಪ್ರಯೋಜನ ಎಲ್ಲರಿಗೂ ಸಿಗುವಂತಾಗಲು ಶ್ರಮಿಸುವ !!!!. ಮುಖ್ಯವಾಗಿ ಇಂದಿನ ಮಕ್ಕಳು, ಯುವ ಪೀಳಿಗೆಗೆ ಪ್ರಾಣಾಯಾಮದ ಮಹತ್ವ ತಲುಪಲಿ. ನಮ್ಮಲ್ಲಿಯೇ ಅಡಗಿರುವ ಅಮೃತ ಭಂಡಾರದ ಕೀಲಿ ನಾವು ತೆಗೆಯಬೇಕಷ್ಟೆ !!!!!




"ಪ್ರಾಣಾಯಾಮ ಎಂದರೇನು*

ಪ್ರಾಣಾಯಾಮ, ಪ್ರಾಚೀನ ಭಾರತದ ಅತ್ಯಮೂಲ್ಯ ಕೊಡುಗೆ. ಪತಂಜಲಿ ಯೋಗ ಶಾಸ್ತ್ರದ ನಾಲ್ಕನೇ ಅಂಗವಾದ ಪ್ರಾಣಾಯಾಮ, ನಿಯಂತ್ರಿತ ಉಸಿರಾಟದ ಮೂಲಕ ದೇಹ, ಮನಸ್ಸು ಆರೋಗ್ಯದ ಮೇಲೆ ಅಗಾಧ ಪರಿಣಾಮ ಬೀರಬಲ್ಲದು. ಇತ್ತೀಚಿಗೆ ಪ್ರಾಣಾಯಾಮ ಮತ್ತು ಧ್ಯಾನದ ವಿಜ್ಞಾನ ಪ್ರಪಂಚದಾದ್ಯಂತ ಚರ್ಚೆ ಯಾಗುತ್ತಿದ್ದರೂ ಸರಿಯಾದ ಜ್ಞಾನ ಎಲ್ಲರಿಗೂ ತಲುಪುವ  ದಿಕ್ಕಿನಲ್ಲಿ ಸಾಕಷ್ಟು ಕೆಲಸವಾಗಬೇಕಿದೆ....

ಪ್ರಾಣ ಇದೆ ಎನ್ನುವುದು ಮನುಷ್ಯನ ಉಸಿರಾಟವನ್ನು ಗಮನಿಸಿದಾಗ. ಉಸಿರು ನಿಂತರೆ ಶವ.  ಅಂದರೆ ಹೆಸರು ಇರುವುದು ಉಸಿರಿಗಷ್ಟೇ. ಉಸಿರು ನಿಂತ ದೇಹವನ್ನು 'ಬಾಡಿ' ಎಂದು ಬಿಡುತ್ತೇವೆ. ಸುಪ್ತ ಪ್ರಜ್ಞೆಯಲ್ಲಿ ಅದಾಗಲೇ ಉಸಿರಿನ ಮತ್ತು ಜೀವದ ಸಂಬಂಧ ನಮಗೆ ದಾಖಲಾಗಿದೆ. ಪ್ರಾಣ ಎಂದರೆ ಆತ್ಮ, ಅಸು ಎಂದು ಋಗ್ವೇದದಲ್ಲಿ ಉಲ್ಲೇಖಗಳಿವೆ.

*ಪೂರಕ, ಕುಂಭಕ ಮತ್ತು ರೇಚಕ* ಎಂಬ ಮೂರು ಹಂತಗಳು. ಪೂರಕ ಎಂದರೆ ಉಸಿರನ್ನು ಒಳಗೆ ಎಳೆದುಕೊಳ್ಳುವುದು, ಕುಂಭಕ ಎಂದರೆ ಉಸಿರನ್ನು ಹಿಡಿದಿಟ್ಟುಕೊಳ್ಳುವ ಮತ್ತು ರೇಚಕ ಎಂದರೆ ಉಸಿರು ಹೊರಹಾಕುವ ಪ್ರಕ್ರಿಯೆಗಳು. *ಶ್ವಾಸಪ್ರಶ್ವಾಸಯೋರ್ಗತಿ ವಿಚ್ಛೇಧಹ ಪ್ರಾಣಾಯಾಮಹ* ಎನ್ನುತ್ತದೆ ಪತಂಜಲಿ ಯೋಗ ಸೂತ್ರ. ಅಂದರೆ ಶ್ವಾಸ ನಿಶ್ವಾಸಗಳ ಗಮನವನ್ನು ಅಡಗಿಸುವವರೆಗೆ ಪ್ರಾಣಾಯಾಮ ಮಾಡಬೇಕು.
ಉಸಿರಿನ ಲಯದ ಮೂಲಕ ಮನಸಿನ ಚಂಚಲತೆಯ ನಿಯಂತ್ರಣ ಮಾಡುವ ಪ್ರಕ್ರಿಯೆ.

ಪ್ರಾಣಾಯಾಮದ ಪ್ರಕಾರಗಳು ಮತ್ತು ಅದರಿಂದಾಗುವ ಉಪಯೋಗಗಳ ಸ್ಥೂಲ ಪರಿಚಯ ಕೆಳಗಿದೆ.

1. ಭಸ್ತ್ರಿಕಾ ಪ್ರಾಣಾಯಾಮ: ಜೀವ ಶಕ್ತಿಯನ್ನು ಹೆಚ್ಚಿಸಿ, ಮನಸ್ಸನ್ನು ಕೇಂದ್ರೀಕರಿಸುತ್ತದೆ. ಶ್ವಾಸ ಕೋಶಕ್ಕೆ ಶಕ್ತಿ ನೀಡುವದರೊಂದಿಗೆ ರಕ್ತ ಪರಿಚಲನೆಯ ಹೆಚ್ಚಳಕ್ಕೆ, ಜೀರ್ಣ ಶಕ್ತಿ ಹೆಚ್ಚಿಸಲು, ಅಸ್ತಮಾದಂತಹ ಸಮಸ್ಯೆಗಳನ್ನು ನಿವಾರಿಸಲು ಸಹಕಾರಿ.

2. ಕಪಾಲಭಾತಿ: ಈ ಪ್ರಾಣಾಯಾಮದಲ್ಲಿ, ನಮ್ಮ ಉಸಿರನ್ನು ಪ್ರಯತ್ನಪೂರಕವಾಗಿ ಹೊರ ಹಾಕುವ ಪ್ರಕ್ರಿಯೆ. ಈ ಪ್ರಾಣಾಯಾಮ ರಕ್ತವನ್ನು ಶುದ್ಧೀಕರಿಸುತ್ತದೆ.  ಜ್ಞಾಪಕ ಶಕ್ತಿ, ಏಕಾಗ್ರತೆಯನ್ನು ಹೆಚ್ಚಿಸುತ್ತದೆ. ಖಿನ್ನತೆ ನಿಯಂತ್ರಿಸಿ ಸಕಾರಾತ್ಮತೆಯನ್ನು ತುಂಬುತ್ತದೆ.

ಶೀತಲೀ ಪ್ರಾಣಾಯಾಮ: ಭಸ್ತ್ರಿಕ ಮತ್ತು ಕಪಾಲ ಭಾತಿ ಗಳ ನಂತರ ಹೆಚ್ಚು ಬಿಸಿ ಭಾಸವಾದರೆ ಸಮತೋಲಗೊಳಿಸಲು ಈ ಪ್ರಾಣಾಯಾಮ ಸಹಕರಿಸುತ್ತದೆ. ಶೀತಲೀ ಪ್ರಾಣಾಯಾಮ ಮನಸ್ಸನ್ನು ಶಾಂತಗೊಳಿಸಿ ರೋಗ ನಿರೋಧಕ ಶಕ್ತಿ ಹೆಚ್ಚಿಸುತ್ತದೆ.

3. ಬಾಹ್ಯ ಕುಂಭಕ : ಇದು ಜಲಂಧರ ಬಂಧ, ಉಡ್ಡಯನ ಬಂಧ, ಮೂಲ ಬಂಧಗಳ ಸಮ್ಮಿಳನ.

ಇದು ಪ್ರಾಸ್ಟೇಟ್, ಡಯಬಿಟಿಸ್ ಸಮಸ್ಯೆ  ನಿವಾರಿಸಿ, ಏಕಾಗ್ರತೆ ಹೆಚ್ಚಿಸುತ್ತದೆ.

4. ಉಜ್ಜಾಯಿ ಪ್ರಾಣಾಯಾಮ: ವಿಜಯಶಾಲಿ ಉಸಿರಿನ ಈ ಪ್ರಾಣಾಯಾಮ, ಉಸಿರಾಟದ ವ್ಯಾಯಾಮದಲ್ಲಿ ಮೂಗಿನ ಉಸಿರು ಗ್ಲಾಟಿಸ್ ಮೂಲಕ ಹಾದು ಹೋಗುವಾಗ ಗಾಳಿಯ ಘರ್ಷಣೆಯಿಂದ ಸಾಗರದ ಅಲೆಗಳ ಧ್ವನಿ ಉತ್ಪತ್ತಿಯಾಗುತ್ತದೆ. ಇದು ಥೈರಾಯಿಡ್ ಸಮಸ್ಯೆ, ಕೊಲೆಸ್ಟ್ರಾಲ್ ನಿಯಂತ್ರಿಸಲು, ಏಕಾಗ್ರತೆಯನ್ನು ಬಲ ಪಡಿಸಲು ಸಹಕಾರಿ.

5. ಅನುಲೋಮ-ವಿಲೋಮ ಪ್ರಾಣಾಯಾಮ: ಈ ಪ್ರಾಣಾಯಾಮದಲ್ಲಿ, ಉಸಿರಾಟದ ಮೇಲೆ ಗಮನವಿರಿಸಿ, ಮೂಗಿನ ಬಲ ಮತ್ತು ಎಡ ಹೊಳ್ಳೆಗಳ ಮೂಲಕ ಪ್ರತ್ಯೇಕವಾಗಿ ಕೈ ಬೆರಳುಗಳಿಂದ ನಿಯಂತ್ರಿಸಿ ಉಸಿರಾಡುವುದು.  ಮನಃಶಾಸ್ತ್ರದ ಪ್ರಕಾರ ಉಸಿರಾಟಕ್ಕೂ ಭಾವನೆಗಳಿಗೂ ಸಂಬಂಧವಿದೆ. ಅನುಲೋಮ ವಿಲೋಮ ಪ್ರಾಣಾಯಾಮ ಮನಸ್ಸನ್ನು ಚೇತೋಹಾರಿಯಾಗಿಡಲು ಒಂದು ಉತ್ತಮ ಸಾಧನ.

6. ಭ್ರಾಮರಿ ಪ್ರಾಣಾಯಾಮ : ಇದೊಂದು ಮೆದುಳಿನ ತರಂಗಗಳ ಚಟುವಟಿಕೆ. ಮೂಗಿನ ಎರಡೂ ಹೊಳ್ಳೆಗಳಿಂದ ಉಸಿರು ಬಿಡುವಾಗ ಜೇನು ನೊಣದಂತಹ ಹಮ್ಮಿಂಗ್ ಶಬ್ದ ಉತ್ಪತ್ತಿಯಾಗುತ್ತದೆ. ಭ್ರಾಮರಿ ಉಸಿರಾಟ ಆನಂದ ಸಂತೋಷಗಳ ಚಾಲನೆಗೆ ಉತ್ತಮ ಸಾಧನ.

7. ಉದ್ಗೀತ ಪ್ರಾಣಾಯಾಮ: ಇದು ಓಂಕಾರ ಪಠಣ. ಓಂಕಾರದ ಉಚ್ಚಾರಣೆಯಲ್ಲಿ ನಾಭಿಯ ಸುತ್ತ, ಎದೆಯಲ್ಲಿ, ತಲೆಯ ಭಾಗದಲ್ಲಿ ಕಂಪನವಾಗುತ್ತದೆ. ಉದ್ಗೀತ ಪ್ರಾಣಾಯಾಮದಿಂದ ಹಲವಾರು ಉಪಯೋಗಗಳಿವೆ. ಜ್ಞಾಪಕ ಶಕ್ತಿ, ಏಕಾಗ್ರತೆ, ರಕ್ತದೊತ್ತಡ ಶಮನ, ಮುಖದ ನೈಸರ್ಗಿಕ ಹೊಳಪಿಗೆ ತುಂಬಾ ಸಹಕಾರಿ.

8. ಪ್ರಣವ ಪ್ರಾಣಾಯಾಮ:. ಎಲ್ಲ ಪ್ರಾಣಾಯಾಮಗಳನ್ನು ಅಭ್ಯಾಸ ಮಾಡಿದ ನಂತರ ಸ್ವಲ್ಪ ಸಮಯದವರೆಗೆ ಉಸಿರಾಟದಲ್ಲಿ ಮನಸ್ಸನ್ನು. ಕೇಂದ್ರೀಕರಿಸಿವುದೇ ಪ್ರಣವ ಪ್ರಾಣಾಯಾಮ. ಇದರಿಂದ ಮನಸ್ಸು ಧ್ಯಾನ, ಏಕಾಗ್ರತೆಗಳ ಮೇಲೆ ಒತ್ತು ನೀಡಿ , ಅಧ್ಯಾತ್ಮ ಬೆಳಣಿಗೆಗಳ ದಿಕ್ಕಿನಲ್ಲಿ ಒಂದು ಹೆಜ್ಜೆ.

ಇಲ್ಲಿ ನಾನು ಉಲ್ಲೇಖಿಸಲು ಪ್ರಯತ್ನಿಸಿರುವುದು  ಪ್ರಾಣಾಯಾಮ ಪ್ರಾಕಾರಗಳ ಒಂದು ಕಿರು ಪರಿಚಯವಷ್ಟೇ. .. ಇದೊಂದು ಅಗಾಧ ಸಂಪನ್ಮೂಲಗಳ ಆಗರ. ಸಾಂಪ್ರದಾಯಿಕವಾಗಿ ಕಲಿತು ಅಭ್ಯಾಸ ಮಾಡಿ. ಸಾಕಷ್ಟು  ಪುಸ್ತಕ, ವಿಡಿಯೋ, ಗುರುಗಳು ಲಭ್ಯವಿವೆ. ದಯವಿಟ್ಟು ಉಪಯೋಗಿಸಿ. ನಮಗಿರುವ ಈ ಅಮೂಲ್ಯ ಆಸ್ತಿ ಹಂಚಿದಂತೆಲ್ಲ ವಿಸ್ತಾರವಾಗುವುದರಲ್ಲಿ ಸಂಶಯವಿಲ್ಲ.

ಡಾ ದೇವಕಿ ಯವರ ಯೂ ಟ್ಯೂಬ್ ಲಿಂಕ್:





# ಮಾನಸ ಗಂಗೋತ್ರಿ - ಉದ್ಭವಿಸಿತು ಹೇಗೆ?!

**ಜೆ.ಬಿ.ರಂಗಸ್ವಾಮಿ , ವಿಶ್ರಾಂತ ಪೊಲೀಸ್ ಅಧಿಕಾರಿ,** *ಮೈಸೂರು*



೧೯೫೬.ಮೈಸೂರು ವಿವಿ ನಿಲಯದ ಸ್ನಾತಕೋತ್ತರ ಕೇಂದ್ರ ತೆರೆಯಲು ನಾನಾ ಪ್ರಸ್ತಾವನೆಗಳು ಹೋಗಿದ್ದವು. ಆವರೆಗಿನ ಎಂಎ, ಎಂಎಸ್ಸಿ ಮುಂತಾದುವಕ್ಕೆಲ್ಲಾ ಮಹಾರಾಜ ಕಾಲೇಜೇ ಆಸರೆ. ನಾನಾ ಜ್ಞಾನಶಾಖೆಗಳನ್ನು ಒಂದೇ ದೊಡ್ಡ ಕ್ಯಾಂಪಸ್ಸಿನಲ್ಲಿ ತರಲು ಕುಲಪತಿ ಶ್ರೀ ಕುವೆಂಪು ( 1956 - 1960) ಚಿಂತನೆ ನಡೆಸಿದ್ದರು. ಆ ಕಾಲದ ಬನಾರಸ್, ಉಸ್ಮಾನಿಯಾದಂತಹುದೇ ದೊಡ್ಡ ಕ್ಯಾಂಪಸ್ ಅದಾಗಬೇಕೆಂಬುದು ಅವರ ಕನಸು. ಕನಸಿನ ಸಾಕಾರಕ್ಕಾಗಿ ಮನೋಜ್ಞ ಹೆಸರೂ ಅದಾಗಲೇ ಅವರ ಮನದಲ್ಲಿ ಮೂಡಿತ್ತು. ಅದುವೇ ಮಾನಸ ಗಂಗೋತ್ರಿ!.

ಸರ್ಕಾರಕ್ಕೆ ಕಳಿಸಿದ್ದ ವಿಸ್ತೃತ ಪ್ರಸ್ತಾವನೆಗೆ ಸರ್ಕಾರ ಮರು ಮಾತಾಡದೆ ಅನುಮೋದನೆ ನೀಡಿತ್ತು.

ವಿಸ್ತಾರವಾದ ಸ್ಥಳಕ್ಕೆ ಅನ್ವೇಷಣೆ ನಡೆಯಿತು. ಮೈಸೂರಿನ ಸುತ್ತ ಮುತ್ತಲಲ್ಲಿ ಒಟ್ಟಿಗೆ ೪೦೦-೫೦೦ ಎಕರೆಯಷ್ಟು ಜಾಗ ಒಟ್ಟಿಗೆ ಸಿಗಲಿಲ್ಲ. ದೂರ ಹೋದರೆ ವಿದ್ಯಾರ್ಥಿಗಳ ನಿತ್ಯದ ಓಡಾಟಕ್ಕೆ ತೊಂದರೆ. ಹತ್ತಿರದಲ್ಲೇ ಹುಡುಕಬೇಕು.

ಸಾಹಿತಿ 'ಚದುರಂಗ'ರು ಕುವೆಂಪು ಅವರ ವಾಕಿಂಗ್ ಮೇಟ್. ಒಂಟಿಕೊಪ್ಪಲಿನಿಂದ ದಿನವೂ ಕುಕ್ಕರಹಳ್ಳಿ ಕರೆಗೆ ವಾಕಿಂಗ್ ಬರುತ್ತಿದ್ದರು. ಇಬ್ಬರಲ್ಲೂ ಸೋದರತ್ವದ ಭಾಂಧವ್ಯ. ಕುಕ್ಕರಹಳ್ಳಿ ಕೆರೆಗೆ ಹೊಂದಿಕೊಂಡಿದ್ದ ವಿಶಾಲ ಜಾಗ ಚದುರಂಗರ ಅಣ್ಣನವರದು. ವಿವಿ ಹೊಸ ಕ್ಯಾಂಪಸ್ಸಿನ ವಿಚಾರ ಹೇಳಿದ ಕುವೆಂಪು ,
“ ನಿಮ್ಮ ಅಣ್ಣಾವರಿಗೆ ಕೇಳಿನೋಡಿ. ಈ ಖಾಲಿ ಪ್ರದೇಶದಲ್ಲಿ ಒಂದು ಐನೂರು ಎಕರೆ ಜಾಗವನ್ನು ಕ್ರಯಕ್ಕೆ ಕೊಡುತ್ತಾರೋ ಹೇಗೆ? "

“ ಕೊಡೋದು ಕಾಣೆ. ಅವರಿಗೇನೋ ಬೇರೆ ಐಡಿಯಾ ಇದ್ದಂತಿದೆ. ಒಮ್ಮೆ ಕೇಳಿ ನೋಡ್ತೀನಿ” ಚದುರಂಗರ ಉತ್ತರ.

“ ಕೇಳಿ ನೋಡಿದರೆ ಆಗೋದಿಲ್ಲ. ನೀವು ಒಪ್ಪಿಸಲೇ ಬೇಕು. ಇದರಿಂದ ಅನೇಕ ತಲೆಮಾರುಗಳ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತೆ. ಮೈಸೂರಿನ ಮುಕುಟಕ್ಕೆ ಇದೊಂದು ಕಿರೀಟವಾಗುತ್ತೆ.”



ಕುವೆಂಪು ಅವರು ಕ್ಯಾಂಪಸ್ಸಿಗೆ ಕೇಳಿದ್ದ ಪ್ರದೇಶ , ಅರಮನೆಗೆ ಸೇರಿದ್ದ ಜಾಗ. ನಾಲ್ವಡಿ ಕೃಷ್ಣರಾಜರ ಸೋದರಿಯೇ ರಾಜಕುಮಾರಿ ಜಯಲಕ್ಷಮ್ಮಣ್ಣಿ. ದಿವಾನ್ ಕಾಂತರಾಜೇ ಅರಸರ ( 1918- 1922. ಮೀಸಲಾತಿ ಪ್ರಸ್ತಾವ ಮಂಡಿಸಿದವರು ; ವಿವಿ ನಿಲಯವನ್ನು ಅಭಿವೃದ್ಧಿ ಪಡಿಸಿದವರು ) ಪತ್ನಿ. ಅವರಿಬ್ಬರ ಒಬ್ಬಳೆ ಮಗಳೇ ರಾಜಕುಮಾರಿ ಲೀಲಾವತಿ. ಕಾನೂನು ಓದಿದ್ದ ಕೆ. ಬಸವರಾಜೇ ಅರಸರಿಗೆ ( ಚದುರಂಗರ ಸ್ವಂತ ಅಣ್ಣ ) ಮದುವೆ ಮಾಡಿದ್ದರು. ಲೀಲಾವತಿಯವರು ಪಾರ್ಶ್ವವಾಯುವಿನಿಂದ ಅಕಾಲ ಮರಣಕ್ಕೀಡಾದರು. ಬಸವರಾಜ ಅರಸರಿಗೆ ಖಾಲಿತನ ಕಾಡತೊಡಗಿತು. ಆ ಅರಮನೆಯನ್ನು ಬಿಟ್ಟು ಬೇರೆಡೆ ವಾಸಿಸುವ ಯೋಚನೆ ಮಾಡಿದರು. ಹಾಗೆಂದು ಪತ್ನಿ ಆಡಿ ಬೆಳೆದ ಅರಮನೆಯನ್ನು ಪಾಳು ಬಿಡಲು ಬಸವರಾಜ ಅರಸರಿಗೆ ಇಷ್ಟವಿರಲಿಲ್ಲ. ಆ ದೊಡ್ಡ ಖಾಲಿಯಿದ್ದ ಅರಮನೆಯನ್ನು ಚೆನ್ನಾಗಿ ಉಸ್ತುವಾರಿ ಮಾಡುವವರಿಗೆ ಕೊಡಬೇಕೆಂಬುದು ಅವರ ಅಭಿಲಾಷೆ . ಮಿಲಿಟರಿಯವರಿಗೆ ಕೊಟ್ಟರೆ ಅರಮನೆ ಮತ್ತು ಅದಕ್ಕೆ ಹೊಂದಿಕೊಂಡಿದ್ದ ೮೦೦ ಎಕರೆ ಪ್ರದೇಶವನ್ನು ನೀಟಾಗಿ ಇಟ್ಟುಕೊಳ್ಳುತ್ತಾರೆಂಬ ನಿರೀಕ್ಷೆ ಅವರದು. ಅದಾಗಲೇ ಮಿಲಿಟರಿ ಮುಖ್ಯಸ್ಥರೊಂದಿಗೆ ಮಾತುಕತೆ ನಡೆಸಿಯಾಗಿತ್ತು. ಅವರ ತಮ್ಮ

ಚದುರಂಗರು ವಿವಿ ಕ್ಯಾಂಪಸ್ಸಿಗೆಂದು ಕೇಳಿದಾಗ ಒಂದೇ ಮಾತಿಗೆ ಕೊಡುವುದಿಲ್ಲವೆಂದು ಬಿಟ್ಟರು. ಪ್ರಿಯ ಪತ್ನಿಗೆ ಸೇರಿದ್ದ ಅರಮನೆ ಮತ್ತು ೮೦೦ ಎಕರೆ ಪ್ರದೇಶವನ್ನು ತುಂಡು ಮಾಡಿಕೊಡಲು ಸುತರಾಂ ಒಪ್ಪಲಿಲ್ಲ.



ಡಾ. ಸುಬ್ರಮಣ್ಯ ರಾಜೆ ಅರಸ್ (ಚಂದುರಂಗರು)

ಆ ವೇಳೆಗೆ ನಾನಾ ಸ್ಥಳಗಳನ್ನು ಹುಡುಕಾಡಿದ್ದ ಕುವೆಂಪು ಅವರಿಗೆ ಅದೇ ಅರಮನೆ ಜಾಗವೇ ಪ್ರಶಸ್ತ ಅನ್ನಿಸಿತ್ತು. ಅಷ್ಟು ಮಟ್ಟಸವಾದ ಮತ್ತು ನಗರಕ್ಕೆ ಹೊಂದಿಕೊಂಡ ಪ್ರಶಸ್ತ ಪ್ರದೇಶ ಮತ್ತೊಂದು ಸಿಗಲು ಸಾಧ್ಯವಿರಲಿಲ್ಲ. ಬಿಟ್ಟರೆ ಕೆಟ್ಟಂತೆ. ಆಗಿನ ಪರೀಕ್ಷಾ ಕುಲಸಚಿವರಾಗಿದ್ದ ದೇಜಗೌರಿಗೆ ಕುಲಪತಿ ಕುವೆಂಪು ಜವಾಬ್ದಾರಿ ವಹಿಸಿದರು.ಅವರ ಅಣತಿಯಂತೆ ಚದುರಂಗರಿಗೆ ದೇಜಗೌ ದಿನವೂ ದುಂಬಾಲು ಬಿದ್ದರು.



**ದೇಜಗೌ**

“ ಏನಾದರೂ ಮಾಡಿ ನಿಮ್ಮಣ್ಣಾವರನ್ನು ಒಪ್ಪಿಸಲೇಬೇಕು. ಅದು ಮೈಸೂರು ಸಂಸ್ಥಾನದ ಜನತೆಗೆ ಶಾಶ್ವತವಾಗಿ ಉಪಯೋಗವಾಗುವ ಕಾರ್ಯಕ್ಕೆ ಉಪಯೋಗವಾಗುತ್ತೆ. ತಮ್ಮ ಪೂರ್ವಿಕರ ಆಸ್ತಿ ಸದ್ವಿನಿಯೋಗವಾಗಿದೆ ಎಂದು ನಿಮ್ಮ ಅತ್ತಿಗೆಯವರ ಆತ್ಮಕ್ಕೂ ಶಾಂತಿ ಸಿಗುತ್ತದೆ. ಹೇಗಾದರೂ ಮಾಡಿ ನಿಮ್ಮ ಅಣ್ಣನವರನ್ನು ಒಪ್ಪಿಸಿ.” ಒತ್ತಡ ಹೇರಿದರು.

ಆದರೆ ಬಸವರಾಜ ಅರಸರ ನಿರ್ಧಾರ ಅಚಲವಾಗಿತ್ತು. ಅಚ್ಚುಕಟ್ಟಾದ ಅನೇಕ ಮಿಲಿಟರಿ ಕ್ಯಾಂಪಸ್ಸುಗಳನ್ನು ಅದಾಗಲೇ ಅವರು ನೋಡಿದ್ದರು. ಅವರಿಗೆ ಕೊಟ್ಟರೆ ಮಾತ್ರ ಜತನವಾಗಿ ನೋಡಿಕೊಳ್ಳಬಲ್ಲರು. ದೇಜಗೌ ಅವರು ಮಿಲಿಟರಿಯವರಿಗಿಂತ ಹೆಚ್ಚು ಹಣ ಕೊಡುತ್ತೇವೆಂದಾಗ ಅದಕ್ಕೂ ಬೇಡವೆಂದರು. ಅಷ್ಟಕ್ಕೂ ಅವರು ಆಸ್ತಿಯನ್ನು ಮಾರಲು ಯೋಚಿಸಿದ್ದು ಹಣಕ್ಕಾಗಿಯಲ್ಲ. ಅದರ ಕೊರತೆಯೇ ಅವರಿಗಿರಲಿಲ್ಲ. ತಮಗೆ ದಿನವೂ ಉಸ್ತುವಾರಿ ಮಾಡಲಾಗದು. ಹಾಗೆಂದು ಪತ್ನಿಯ ಅರಮನೆ ಯಾವ ಕಾರಣಕ್ಕೂ ಪಾಳು ಬೀಳಕೂಡದಲ್ಲ?.

ಒಂದು ದಿನ ಕ್ಯಾಂಪಸ್ಸಿನ ನೀಲನಕ್ಷೆ ಹಿಡಿದು , ಚದುರಂಗರೊಡನೆ ಸರ್ದಾರ್ ಬಸವರಾಜೇ ಅರಸರ ಮನೆಗೆ ಕುವೆಂಪು ಹೋದರು. ಕ್ಯಾಂಪಸ್ ಪೂರ್ಣಗೊಂಡರೆ ಯಾವ ಸ್ವರೂಪ ತಳೆಯುತ್ತದೆ ಎಂಬುದನ್ನು ವಿವರಿಸಿದರು. ತಾವಾಗಲೇ ಚಿಂತಿಸಿದ್ದ ಹೆಸರನ್ನೂ ಹೇಳಿದರು : ಮಾನಸ ಗಂಗೋತ್ರಿ!

ಕೊಟ್ಟರೆ ಆರ್ಮಿ ಯವರಿಗೆ ಮಾತ್ರವೇ ಕೊಡಬೇಕು ಎಂಬುದನ್ನು ಅರಸರು ತೀರ್ಮಾನಿಸಿಯಾಗಿತ್ತು. ಅವರಾದರೆ ಅರಮನೆ ಜಾಗವನ್ನು ಅಚ್ಚುಕಟ್ಟಾಗಿ ಸ್ವಚ್ಛವಾಗಿ ಇಟ್ಟುಕೊಳ್ಳಬಲ್ಲರು. ಹೇಳಿ ಕೇಳಿ ಸರ್ಕಾರಿ ಸಿಬ್ಬಂದಿ!. ಚೆನ್ನಾಗಿರುವುದನ್ನೂ ಕುಲಗೆಡಿಸುವುದರಲ್ಲಿ ನಿಸ್ಸೀಮರು. ತಮ್ಮ ಮೃತ ಮಡದಿ ಆಡಿ ಬೆಳೆದ ಅರಮನೆ ವಿರೂಪಗೊಳ್ಳಬಾರದು ಎಂಬುದು ಅವರ ಕಾಳಜಿ. ಅದೇ ಕಾರಣ ತಿಳಿಸಿ " ಆಗೋದಿಲ್ಲ" ಅಂದೇ ಬಿಟ್ಟರು!.

ಬೇರೆ ದಾರಿ ಕಾಣದ ಕುವೆಂಪು ಅವರು ಚದುರಂಗರಿಗೆ
" ಮುಂದಿನ ಜವಾಬ್ದಾರಿ ನಿಮ್ಮದೇ! . " ಎಂದರು.

ಹಾಳುಬಿದ್ದ ಕಾಡಾಗಿರುವ ಇಡೀ ಪ್ರದೇಶದಲ್ಲಿ ಏನೆಲ್ಲ ಆಧುನಿಕ ಕಟ್ಟಡಗಳು ಬರುತ್ತವೆ; ಎಲ್ಲೆಲ್ಲಿಂದ ವಿದ್ಯೆ ಕಲಿಯಲು ವಿದ್ಯಾರ್ಥಿಗಳು ಬರುತ್ತಾರೆ ; ಲಕ್ಷಾಂತರ - ಅಲ್ಲ – ಕೋಟ್ಯಂತರ ಜನರ ಭವಿಷ್ಯ ಹೇಗೆಲ್ಲಾ ರೂಪುಗೊಳ್ಳುತ್ತದೆ ಎಂಬುದನ್ನು ಚದುರಂಗರು ಅಣ್ಣನಿಗೆ ಮನವರಿಕೆ ಮಾಡಿಸುತ್ತಾ ಹೋದರು. ಲೀಲಾವತಿಯವರ ತಂದೆ ದಿವಾನರಾಗಿದ್ದ ( 1918- 1922 ) ಕಾಂತರಾಜೇ ಅರಸಿನವರೇ ವಿಶ್ವವಿದ್ಯಾನಿಲಯದ ಆರಂಭಿಕ ಅಭಿವೃದ್ಧಿಗಾಗಿ ದುಡಿದಿದ್ದನ್ನು , ಮೀಸಲಾತಿಗಾಗಿ ಶ್ರಮಿಸಿದ್ದನ್ನು ನೆನಪಿಸಿದರು. ಅವರನ್ನು ಜನ ನೆನೆಯುವುದೇ ಈ ಕಾರಣಗಳಿಗಾಗಿ . ಅವರು ಬದುಕಿ ಬಾಳಿದ ಅರಮನೆ ಆಸ್ತಿಯನ್ನು ನೀವಾದರೂ ಅದೇ ವಿದ್ಯಾರ್ಥಿಗಳಿಗಾಗಿ ವಿನಿಯೋಗವಾಗುವಂತೆ ಮಾಡಿ.ನೀವು ಕೊಟ್ಟರೂ ಸಾರ್ಥಕವಾಗುತ್ತೆ." ಎಂದು ಕೇಳಿಕೊಂಡರು.

ತಿಂಗಳೊಪ್ಪತ್ತಿನಲ್ಲಿ ಸರ್ದಾರ್ ಬಸವರಾಜೇ ಅರಸಿನವರ ಮನಸ್ಸು ಬಾಗಿತು. ಸಂಧಾನ ಫಲಿಸಿತು. ಆದರೆ ಇನ್ನೊಂದು ಸಮಸ್ಯೆ ಎದುರಾಯಿತು. ನಾನೂರು ಐನೂರು ಎಕರೆ ಜಾಗ ಖರೀದಿಗೆಂದು ಸರ್ಕಾರ ಮಂಜೂರು ಮಾಡಿದ್ದ ಹಣವೇ ಹನ್ನೆರಡು ಲಕ್ಷವಾಗಿತ್ತು. 800 ಎಕರೆ ಜಮೀನು ಮತ್ತು ಅರಮನೆ ಸೇರಿ ಎಷ್ಟು ಬೆಲೆ ಹೇಳುತ್ತಾರೋ ? ಎಂಬ ಆತಂಕ ಕುಲಪತಿಗಳಿಗೂ ಇತ್ತು. ಆಸ್ತಿಯನ್ನು ಭಾಗ ಮಾಡಿ ಮಾರಲಾಗದು ಎಂಬ ಷರತ್ತು ಬೇರೆ!. ಇನ್ನೊಮ್ಮೆ ಹೊಸ ಪ್ರಸ್ತಾವನೆ ಕಳಿಸಿದರೆ ಸರ್ಕಾರ ಒಪ್ಪುತ್ತದೆಯೋ ಇಲ್ಲವೋ?
ಆದರೆ ಯಾವುದೂ ಗ್ಯಾರಂಟಿ ಇರಲಿಲ್ಲ. ಅರಸರು ಒಪ್ಪಿದ್ದರೂ ಸರ್ಕಾರ ಒಪ್ಪುತ್ತದೆ ಎಂದು ಹೇಳ ಬರುವಂತಿರಲಿಲ್ಲ. ಅದೇ ಸಂದಿಗ್ಧ.

ಅಂತಿಮವಾಗಿ ಅಣ್ಣನನ್ನು ಚದುರಂಗರು ಒಪ್ಪಿಸಿದರು. ಆದರೆ ಅವರು ಹೇಳಿದ ಬೆಲೆಯನ್ನು ಕೇಳಿದ ಕುವೆಂಪು ಮತ್ತು ದೇಜಗೌ ದಂಗಾಗಿ ಹೋದರು.

ಸರ್ದಾರ್ ಬಸವರಾಜೇ ಅರಸಿನವರು ಅರಮನೆ ಮತ್ತು 800 ಎಕರೆ ಪ್ರದೇಶಗಳನ್ನು ಒಟ್ಟು ಸೇರಿಸಿ ಹೇಳಿದ ಒಟ್ಟು ಬೆಲೆ ಅದೇ ಹನ್ನೆರಡು ಲಕ್ಷ ರೂಪಾಯಿ! ಜೊತೆಗೆ ಇನ್ನೊಂದು ಮಹತ್ವದ ಕಾರ್ಯವನ್ನೂ ಮಾಡಿದ್ದರು.
ಪತ್ನಿ ರಾಜಕುಮಾರಿ ಲೀಲಾವತಿಯವರ ಹೆಸರಿನಲ್ಲಿ ಉಪನ್ಯಾಸಗಳನ್ನು ನಡೆಸಲು ಎರಡು ಲಕ್ಷ ರೂಪಾಯಿಗಳ ದತ್ತಿಯನ್ನು ಸ್ಥಾಪಿಸಿ, ಆಸ್ತಿ ಮಾರಿದ ಅದೇ ಹಣದಲ್ಲಿ ಎರಡು ಲಕ್ಷ ರೂಪಾಯಿಗಳ ದೇಣಿಗೆಯನ್ನು ವಿಶ್ವ ವಿದ್ಯಾ ನಿಲಯಕ್ಕೆ ನೀಡಿದರು!
ಅಂದರೆ ಇಡೀ ಆಸ್ತಿಗೆ ಅವರು ಪಡೆದ ಹತ್ತು ಲಕ್ಷ ರೂಪಾಯಿ ಹಣ ಕೂಡ ಟೋಕನ್ ಸ್ವರೂಪದ್ದು. ವಿವಿ ನಿಲಯದ ಇಡೀ ಕ್ಯಾಂಪಸ್ಸನ್ನು ಸುಂದರವಾಗಿ ನಿರ್ಮಿಸುವುದರೊಂದಿಗೆ ಅರಮನೆಯನ್ನೂ ಜತನ ಮಾಡುತ್ತಾರೆಂಬ ಅಭಿಲಾಷೆ ಅವರದಾಗಿತ್ತು.
ಸುಂದರ ಹೆಸರಿನ ಮಾನಸ ಗಂಗೋತ್ರಿ ಮನೋಹರವಾಗಿಯೇ ಮೈದಳೆಯಿತು.

ಕಾಲಚಕ್ರ ಉರುಳಿತು. ಅದು ನಿರ್ಮಾಣವಾಗಲು ಕಾರಣಕರ್ತರಾದ ತಲೆಮಾರು ಅಸ್ತಂಗತವಾಯಿತು. ಅದನ್ನು ಲಾಭಕ್ಕಾಗಿ ಮಾರಿದ್ದಲ್ಲ. ಹತ್ತಾರು ತಲೆಮಾರಿಗೆ ಉಪಯುಕ್ತವಾಗುತ್ತದೆ ಎಂಬ ಒಂದೇ ಕಾರಣಕ್ಕಾಗಿ ಇಡೀ ಪ್ರದೇಶವನ್ನು ಟೋಕನ್ ಬೆಲೆಗೆ ಕೊಟ್ಟದ್ದು. ಬಹುಶಃ ಅರಮನೆ ಕಟ್ಟಡಕ್ಕೇ ಆ ಕಾಲದಲ್ಲಿ 12 ಲಕ್ಷವಿತ್ತೋ ಏನೋ ( 1957 ) . ಉಳಿದ 800 ಎಕರೆ ? ಮಾಲೀಕರ ಔದಾರ್ಯವಾಗಲೀ , ಕೊಡುಗೆ ಹಿಂದಿನ ಕಾಳಜಿಯಾಗಲಿ ಮುಂದಿನ ತಲೆಮಾರಿಗೆ ಏನು ಗೊತ್ತು? ಹತ್ತಿದ ಏಣಿಯನ್ನು ಒದ್ದರೆ ಮುಗಿಯಿತಲ್ಲಾ? ಸರಿಯಾದ ಉಸ್ತುವಾರಿ ಇಲ್ಲದೆ, ಸುಣ್ಣ ಬಣ್ಣ ರಿಪೇರಿಗಳಿಲ್ಲದೆ ' ಜಯಲಕ್ಷ್ಮಿ ಅಮ್ಮಣ್ಣಿಯವರ ಭವ್ಯ ಅರಮನೆ ಪಾಳಾದ ಡಂಜನ್ ( dungeon ) ಆಗಿದೆ.

ಊರು ಉಪಕಾರ ಬಲ್ಲುದೇ ?

ಮಾನಸಗಂಗೋತ್ರಿಯ ಭೂಪ್ರದೇಶ ವಿವಿನಿಲಯಕ್ಕೆ ಸೇರುವಂತೆ ಮಾಡಲು ಶ್ರಮಿಸಿದ್ದ ಸಾಹಿತಿ ಚದುರಂಗ ( ಸುಬ್ರಹ್ಮಣ್ಯ ರಾಜೇ ಅರಸು) ಬರೆದದ್ದು ನಾಲ್ಕು ಕಾದಂಬರಿಗಳು. ಆರೇಳು ಕಥಾಸಂಕಲನಗಳು. ಹತ್ತು ಕಟ್ಟುವೆಡೆ ಒಂದೇ ಮುತ್ತು ಕಟ್ಟಿದರೆ ಸಾಕಂತೆ. ಬರೆದ ಸಂಖ್ಯೆ ಕಡಿಮೆ. ಎಲ್ಲವೂ ಮುತ್ತುಗಳೇ. ಉಯ್ಯಾಲೆ , ಸರ್ವಮಂಗಳಾ , ವೈಶಾಖ ಕಾದಂಬರಿಗಳು ರತ್ನಗಳಲ್ಲದೆ ಮತ್ತೇನು? ಉಯ್ಯಾಲೆ , ಸರ್ವಮಂಗಳಾ ಸಿನಿಮಾಗಳಾದವು. ಎಂ .ಎನ್. ರಾಯ್ ಮತ್ತು ಕಮ್ಯೂನಿಸ್ಟ್ ವಿಚಾರಗಳಿಂದ ಪ್ರಭಾವಿತರಾಗಿದ್ದ ಅವರ ದನಿ ಎಂದೂ ಶೋಷಿತರ ,ಹತಭಾಗ್ಯರ ಪರ. ಜಯಚಾಮರಾಜ ಒಡೆಯರ ಶಾಲಾ ಸಂಗಾತಿ ಮತ್ತು ದೇವರಾಜ ಅರಸರ ಒಡನಾಡಿಯಾಗಿ ಮೈಸೂರಿನ ಸರ್ವತೋಮುಖ ಅಭಿವೃದ್ಧಿಗಾಗಿ ಕನಸು ಕಂಡವರು.ಅವರ ನನಸಾದ ಕನಸು : ಮಾನಸ ಗಂಗೋತ್ರಿಯ ಪ್ರದೇಶ ಮೈಸೂರು ವಿವಿ ನಿಲಯಕ್ಕೆ ದಕ್ಕುವಂತೆ ಮಾಡಿದ್ದು. ಕನಸಾಗಿಯೇ ಉಳಿದದ್ದು ನೆಹರೂ ಲೋಕ.





# ಕರ್ಜನ್ ಕಿವಿಮಾತು

**ಜೆ.ಬಿ.ರಂಗಸ್ವಾಮಿ , ವಿಶ್ರಾಂತ ಪೊಲೀಸ್ ಅಧಿಕಾರಿ,** *ಮೈಸೂರು*

**ನಾಲ್ವಡಿಯವರಿಗೆ ಕರ್ಜನ್ ಕಿವಿಮಾತು:** ಅದು ಬ್ರಿಟಿಷ್ ಜಡ್ಜ್ ಆಸೀನರಾಗಿದ್ದ ಕೋರ್ಟ್. ಅಪರಾಧಿಯಾಗಿ ಗಾಂಧೀಜಿ ಕೋರ್ಟನ್ನು ಪ್ರವೇಶಿಸುತ್ತಾರೆ. ಇಡೀ ಕೋರ್ಟ್ ಗಾಂಧೀಜಿಯನ್ನು ಕಂಡೊಡನೆ ಎದ್ದು ನಿಲ್ಲುತ್ತದೆ. ಜಡ್ಜ್ ಕೂಡಾ ಗಾಂಧೀಜಿಯವರ ವ್ಯಕ್ತಿತ್ವದ ಘನತೆ ಅರಿತಿದ್ದವರೇ. ಅವರೂ ಸಹ ತಾನೊಬ್ಬ ಬ್ರಿಟಿಷ್ , ಜಡ್ಜ್ ಎಂಬುದನ್ನೂ ಮರೆತು ಎದ್ದು ನಿಂತು ಗಾಂಧೀಜಿಗೆ ಗೌರವ ಸೂಚಿಸುತ್ತಾರೆ. ಅಪರಾಧಿಯಾದರೇನು? ವಿರೋಧಿಯಾದರೇನು? ಶತ್ರುವೂ ತಲೆಬಾಗುವಂತಹ ಮೇರು ವ್ಯಕ್ತಿತ್ವ ಗಾಂಧೀಜಿಯವರದ್ದು.

ಅದೇಕೋ ಬ್ರಿಟಿಷರನ್ನು , ಪಾಕಿಸ್ಥಾನಿ , ಚೀನಿ ನಾಯಕರನ್ನು ಸಂಬೋಧಿಸುವಾಗ ಏಕವಚನವಿಲ್ಲದೆ ಮಾತಾಡಲು ಆಗುತ್ತಿರಲಿಲ್ಲ. ಬ್ರಿಟಿಷರ ರಾಬರ್ಟ್ ಕ್ಲೈವನಿಂದ ಹಿಡಿದು ಮೌಂಟ್ ಬ್ಯಾಟನ್ ವರೆಗೆ ಎಲ್ಲರನ್ನೂ ಸಂಬೋಧಿಸಿದ್ದು ಏಕವಚನದಲ್ಲೇ. ಇತ್ತೀಚೆಗೆ ಲಾರ್ಡ್ ಕರ್ಜನ್ ಕುರಿತು ಈ ಲೇಖನ ಬರೆಯುವಾಗ ಅವರಿಗೆ ಏಕವಚನ ಸಲ್ಲದು ಅನ್ನಿಸಿತು. ಇಡೀ ಲೇಖನ ತಿದ್ದಿ ಬಹುವಚನಕ್ಕೆ ಬದಲಿಸಿದೆ.

೦೮-೦೮-೧೯೦೨ ರ ಆ ದಿನ ನಾಲ್ವಡಿ ಕೃಷ್ಣರಾಜ ಒಡೆಯರು ಸಿಂಹಾಸನಾರೋಹಣ ಮಾಡಿದ ದಿನ. ದೇಶ ವಿದೇಶಗಳಿಂದ ರಾಜರು , ಗಣ್ಯಾತಿಗಣ್ಯರು ಮೈಸೂರಿಗೆ ಆಗಮಿಸಿದ್ದರು. ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ದೊಡ್ಡ ಸಮಾವೇಶ. ಪಟ್ಟಾಭಿಷೇಕ ಸ್ಥಳದ ವೇದಿಕೆಯನ್ನು ರಾಜವೈಭವಕ್ಕೆ ಅನುಗುಣವಾಗಿ ಅಲಂಕರಿಸಲಾಗಿತ್ತು. ಮಹಾರಾಜರಿಗೆ ಅಧಿಕಾರ ಹಸ್ತಾಂತರಿಸಲು ಭಾರತದ ಗವರ್ನರ್ ಜನರಲ್ ಲಾರ್ಡ್ ಕರ್ಜನ್ ಶಿಮ್ಲಾದಿಂದ ಸ್ವತಃ ಆಗಮಿಸಿದ್ದರು. ಅವರನ್ನು ೩೧ ಕುಶಾಲು ತೋಪುಗಳ ಗೌರವದೊಡನೆ ವೈಭವದಿಂದ ಬರಮಾಡಿಕೊಳ್ಳಲಾಯಿತು.

ಮುಹೂರ್ತದ ಸಮಯದಲ್ಲಿ ವೈಸರಾಯರು ಯುವ ಮಹಾರಾಜರನ್ನು ಕುರಿತು ಆಡಿದ ಮಾತುಗಳು ಮನೋಜ್ಞವಾಗಿದ್ದವು. ಹಿರೀಕರೊಬ್ಬರ ವಾತ್ಸಲ್ಯ ಅದರಲ್ಲಿತ್ತು. ಆ ಭಾಷಣದಲ್ಲಿ ಲಾರ್ಡ್ ಕರ್ಜನ್ ಮೈಸೂರು ಸಂಸ್ಥಾನದ ಪೂರ್ವ ಚರಿತ್ರೆಯನ್ನೆಲ್ಲಾ ಕ್ರೋಢೀಕರಿಸಿ ಹೇಳಿದ್ದಲ್ಲದೆ , ತಾವು ಇಂಡಿಯಾಕ್ಕೆ ಬಂದಮೇಲೆ ಇಂತಹ ರಾಜರೊಬ್ಬರ ಪ್ರತಿಷ್ಠಾಪನೆ ಮಾಡುವ ಉತ್ಸವದಲ್ಲಿ ಭಾಗಿಯಾಗುತ್ತಿರುವ ಸಂತಸ ಹಂಚಿಕೊಂಡರು.



" ಯುವಕ ಮಹಾರಾಜರ ದೈನಂದಿನ ಚಟುವಟಿಕೆಗಳನ್ನು ಕೇಳಿ ತಿಳಿದುಕೊಂಡ ಮೇಲೆಯೇ ನಾನಿಲ್ಲಿಗೆ ಬಂದದ್ದು. ಸಾಮಾನ್ಯ ಜನಗಳ ಜೊತೆಗೆ ಸುಲಭವಾಗಿ ಬೆರೆಯುತ್ತಾರೆ. ಅವರ ಕಷ್ಟಸುಖಗಳನ್ನು ವಿಚಾರಿಸಿ ಅರ್ಥ ಮಾಡಿಕೊಳ್ಳುತ್ತಾರೆ. ಹೀಗಾಗಿ ಅವರ ಸಮಸ್ಯೆಗಳೇನೇನಿವೆ ಎಂಬ ನೇರ ತಿಳುವಳಿಕೆ ಅವರಿಗಿದೆ. ಒಬ್ಬ ರಾಜನಾಗಿ ತಾನು ಹೇಗೆ ಬಗೆಹರಿಸಬಹುದು ಎಂಬುದೂ ಗೊತ್ತಿದೆ. ತಮಗಿರುವ ತಿಳುವಳಿಕೆ , ವ್ಯವಹಾರಿಕ ಕುಶಲತೆ ಮತ್ತು ಅವರದೇ ಚಿಂತನೆಗಳಿಂದ ಸೂಕ್ತ ಕ್ರಮ ಜರುಗಿಸಬಲ್ಲರು. ಅವರಿಗೆ ನೆರವಾಗಲು ಅಪಾರ ಅನುಭವವಿರುವ ದಿವಾನರು , ಕೌನ್ಸಿಲರ್ ಗಳಿದ್ದಾರೆ. ಸ್ವಯಂ ಶಕ್ತರೂ ಆಗಿರುವ ಮಹಾರಾಜರು ಇನ್ನುಮುಂದೆ ಬ್ರಿಟಿಷ್ ರೆಸಿಡೆಂಟರ ಮುಂದೆ ಶಾಲಾ ಬಾಲಕನಂತೆ ನಿಲ್ಲಬೇಕಿಲ್ಲ. ರೆಸಿಡೆಂಟರನ್ನು ನಿಮ್ಮ ರಕ್ಷಕ ಮತ್ತು ಸ್ನೇಹಿತರೆಂದು ಭಾವಿಸಿ ಸಲಹೆ ಪಡೆಯಿರಿ. ಇಷ್ಟು ಚಿಕ್ಕವಯಸ್ಸಿನಲ್ಲೇ ಈ ದಿನ ಅವರು ತಮ್ಮ ಹಿರಿಯರ ವೈಭವದ ಪರಂಪರೆಗೆ ಸೇರಲಿದ್ದಾರೆ. ಆರೋಗ್ಯಕರ ಯೌವನದ ಉತ್ಸಾಹವೇ ಅವರ ಶಕ್ತಿ. ಅವರ ಜವಾಬ್ದಾರಿಗಳನ್ನು ನಿರ್ವಹಿಸಲು ಇನ್ನಷ್ಟು ಶಕ್ತಿಯನ್ನು ದೇವರು ಅನುಗ್ರಹಿಸಲಿ ಎಂದು ಹಾರೈಸುತ್ತೇನೆ." ಎಂದು ಭಾಷಣ ಮಾಡುತ್ತಿದ್ದವರು , ನಾಲ್ವಡಿಯವರತ್ತ ತಿರುಗಿ , " ಮಹಾರಾಜರೇ ಈಗ

ನಿಮ್ಮತ್ತ ಬರುತ್ತೇನೆ. ನಿಮಗಾಗಿ ಕೆಲವು ಮಾತುಗಳನ್ನು ಹೇಳಬೇಕಿದೆ. ನಿಮಗೊಂದು ದೊಡ್ಡ ಉಪನ್ಯಾಸ ನೀಡುತ್ತಿದ್ದೇನೆ ಎಂದೇನೂ ಭಾವಿಸಬೇಡಿ. ಆಳ್ವಿಕೆ ನಡೆಸುವವರನ್ನು ಅವರ ವಂಶದ ಬಳುವಳಿಯಾಗಿ ರೂಪಿಸಲಾಗದು. ಪಟ್ಟದಲ್ಲಿ ಮೇಲೆ ಕೂರಿಸಬಹುದಷ್ಟೇ. ದಕ್ಷ ಆಡಳಿತಗಾರ ತನ್ನ ಸ್ವಭಾವಜನ್ಯ ಗುಣಗಳಿಂದಾಗಿ ಆಳ್ವಿಕೆ ನಡೆಸಬಲ್ಲ. ತನಗೆ ಸಿಕ್ಕ ತರಬೇತಿಯ ಜೊತೆಗೆ ಇತರರ ಅನುಭವ ಮತ್ತು ವಿವೇಕವನ್ನು ಬಳಸಿಕೊಂಡು ಆಡಳಿತ ನೀಡಬೇಕಾಗುತ್ತದೆ. ಹದಿನಾಲ್ಕನೇ ಲೂಯಿಯ ಮೊಮ್ಮಗನಿಗೆ ಆಡಳಿತ ಕಲೆಯನ್ನು ಬೋಧಿಸಲು ಫೆನೆಲೋನ್ ಎಂಬ ಶ್ರೇಷ್ಠ ಗುರುವನ್ನು ನೇಮಕ ಮಾಡಿದರು. ದುರದೃಷ್ಟವೆಂದರೆ ಲೂಯಿಯ ಆ ಮೊಮ್ಮಗ ಕಲಿಕೆಗೆ ಮೊದಲು ಸೇರಿದಾಗ ಹೇಗಿದ್ದನೋ ಕೊನೆಯವರೆಗೂ ಹಾಗೇ ಉಳಿದಿದ್ದ. ಏನೇನೂ ಬದಲಾವಣೆಯಾಗಿರಲಿಲ್ಲ. ಹಾಗೇ ನಾವು ನೋಡಿದಂತೆ, ಅತ್ಯಂತ ವಿವೇಕಿ ಮತ್ತು ಮೇಧಾವಿಯಾಗಿದ್ದ ರಾಜ ಸಾಲೋಮನ್ ತನ್ನ ಸ್ವಂತ ಮಗನ ಮೇಲೆ ಯಾವ ಸತ್ಪರಿಣಾಮವನ್ನೂ ಬೀರಲಾಗಲಿಲ್ಲ. ಇದು ಅನೇಕ ಸರ್ವಶ್ರೇಷ್ಠರ ಮಕ್ಕಳ ಸ್ಥಿತಿ. ಆದ್ದರಿಂದ ನಾನು ಪಠ್ಯಗಳಲ್ಲಿರುವ ಯಾವ ನೀತಿಬೋಧೆಯನ್ನೂ ಮಾಡಲಾರೆ. ಆದರೆ ಈ ಪ್ರಸಂಗಗಳು ನಿಮ್ಮ ನೆನಪಿನಲ್ಲಿರಲಿ ಎಂದು ಮಾತ್ರ ಹೇಳುತ್ತಿದ್ದೇನೆ. ಓರ್ವ ಹದಿನೆಂಟು ವರ್ಷದ ಯುವಕ ರಾಜನಿಗೆ ಪ್ರಜಾಸೇವೆಯ ಅತ್ಯಂತ ಅಪರೂಪದ ಶ್ರೇಷ್ಠ ಅವಕಾಶ ಸಿಕ್ಕಿದೆ ಎಂಬುದು ಹೆಮ್ಮೆಯ ಸಂಗತಿ. ಆದರೆ ಅದು ಅಷ್ಟೇ ಜವಾಬ್ದಾರಿಯುತ ಕಾರ್ಯವೂ ಹೌದು. ನಿಮ್ಮನ್ನು ನೋಡಿ ಲಕ್ಷಾಂತರ ಜನರು ಆದರ್ಶವಾಗಿ ತೆಗೆದುಕೊಂಡಿರುತ್ತಾರೆ. ನಿಮ್ಮ ಬಗ್ಗೆ ನಿರೀಕ್ಷೆಗಳನ್ನಿಟ್ಟುಕೊಂಡಿರುವ ಅವರು ಈಗಾಗಲೇ ಪೂಜ್ಯತೆಯಿಂದ ನೋಡುತ್ತಿರುತ್ತಾರೆ ಎಂಬುದು ಗೊತ್ತಿರಲಿ. ನೀವು ಅತ್ಯುತ್ತಮ ಆಡಳಿತ ನೀಡಿದರೆ ನಿಷ್ಠೆಯಿಂದ ಆರಾಧಿಸುತ್ತಾರೆ. ಊಹಿಸುವಂತಿಲ್ಲ.

ನಿಮಗೆ ಸಿಕ್ಕಿರುವ ಈ ಉನ್ನತ ಸ್ಥಾನದ ಸದುಪಯೋಗವಾಗದಿದ್ದರೆ ಅದಕ್ಕಿಂತ ದೊಡ್ಡ ದುರಂತ ಮತ್ತೊಂದಿಲ್ಲ. ನಿಮ್ಮ ಯಾವದೇ ತಪ್ಪು ನಡೆಯ ದುಷ್ಫಲ ನಿಮ್ಮನ್ನು ನಂಬಿರುವವರ ಮೇಲಾಗುತ್ತದೆ.

ನಿಮ್ಮನ್ನಿಂದು ಈ ಸ್ಥಾನದಲ್ಲಿರಿಸಿರುವುದು ನಿಮಗಾಗಿಯಲ್ಲ. ನಿಮ್ಮನ್ನು ಅನುಸರಿಸಿ ಆರಾಧಿಸುವ ಜನರಿಗಾಗಿ. ನಿಮ್ಮ ಕರ್ತವ್ಯ ಪರಾಙ್ಮುಖತೆಯ ದುಷ್ಪರಿಣಾಮ ಅವರ ಮೇಲಾಗುತ್ತದೆ ಎಂಬುದು ಸದಾ ನೆನಪಿರಲಿ. ನೀವು ಕರ್ತವ್ಯ ನಿಷ್ಠೆಯಿಂದ ಆತ್ಮಸಾಕ್ಷಿಯಾಗಿ ಕರ್ತವ್ಯ ನಿರ್ವಹಿಸಿದರೆ ನಿಮ್ಮ ಹೆಸರು ಮುಂದಿನ ತಲೆಮಾರಿನ ಜನಗಳ ಮನಸ್ಸಿನಲ್ಲಿ ಆಳವಾಗಿ ಬೇರೂರುತ್ತದೆ. ನಿಮಗೆ ಸಿಕ್ಕಿರುವ ಈ ಅಪೂರ್ವ ಅವಕಾಶವನ್ನು ಗಾಳಿಗೆ ತೂರಿ ಸೋಮಾರಿಯಾಗಿ ಕಾಲ ಕಳೆದರೆ ನಿಮ್ಮ ಹೆಸರು ನೀರಿನಲ್ಲಿ ಬರೆಯಲ್ಪಡುತ್ತದೆ. ನಿಮ್ಮನ್ನು ನಂಬಿದವರ ಮನಸ್ಸಿನಲ್ಲಿ ನಿಮ್ಮ ನೆನಪು ಒಂದು ಹೊಗೆಯಂತೆ ಅದೃಶ್ಯವಾಗುತ್ತದೆ ! ಹಾಗಾಗಿ ನಿಮ್ಮಲ್ಲಿ ನನ್ನ ವಿನಂತಿ ಇಷ್ಟೇ. ನಿಮ್ಮ ಜೀವನದ ಈ ಮಹತ್ವದ ತಿರುವಿನಲ್ಲಿ ನನ್ನ ಮಾತುಗಳನ್ನು ದಯವಿಟ್ಟು ನೆನಪಿಟ್ಟುಕೊಳ್ಳಿ . ಮಾಡುವ ಕೆಲಸದಲ್ಲಿ ಚಿತ್ತವಿಟ್ಟು ಅಚ್ಚುಕಟ್ಟಾಗಿ ಕೆಲಸಮಾಡಿ. ನಿಮ್ಮ ಪ್ರತಿ ನಡೆಯೂ ಧೈರ್ಯದಿಂದ ಕೂಡಿ , ನ್ಯಾಯಯುತವಾಗಿರಲಿ. ಸಹೃದಯ ಕರುಣೆಯಿಂದ ಕೂಡಿರಲಿ. ಎಲ್ಲರಿಗೂ ಸಮಾನ ಗಮನ ಕೊಡಿ. ಆಡಳಿತದಲ್ಲಿ ಯಾವ ಸಂಗತಿಯೂ ನಿಷ್ಕೃಷ್ಟವಲ್ಲ. ಎಲ್ಲಾ ಆಗುಹೋಗುಗಳ ಮೇಲೆ ನಿಗಾ ಇರಲಿ. ಐವತ್ತು ವರ್ಷ ಬದುಕಬಲ್ಲೆ ಎಂದು ನೀವು ಕೆಲಸ ಮಾಡಬೇಡಿ. ಮುಂದೆ ಬದುಕುವುದೇ ಐದು ವರ್ಷ ಎಂದು ತಿಳಿದು ಕರ್ತವ್ಯ ಮಾಡಿ. ನನ್ನ ಮಾತನ್ನು ನಂಬಿ. ಒಬ್ಬ ರಾಜನ ದಿನಚರಿಯಲ್ಲಿ ಸೋಮಾರಿಯಗಿ ಕಾಲಹರಣಮಾಡಿದ ಖಾಲಿ ಜಾಗಗಳಿರಕೂಡದು.

ನಿಮ್ಮನ್ನು ಸಿಂಹಾಸನದಲ್ಲಿ ಪ್ರತಿಷ್ಠಾಪಿಸಿದ ಈ ದಿನವನ್ನು ಯಾವಾಗ ನೆನೆದರೂ ನನಗೆ ಆನಂದ , ಅಭಿಮಾನ ನೀಡುವಂತಿರಬೇಕು. ನನ್ನ ಆಡಳಿತಾವಧಿಯಲ್ಲಿ ನಡೆದ ಈ ನೆನಪು ಸದಾ ಅಹ್ಲಾದಕಾರಿಯಾಗಿರಲಿ ಎಂದು ಹಾರೈಸುತ್ತೇನೆ. ನಿಮ್ಮ ಬೆಂಬಲಕ್ಕೆ ಸದಾ ಒದಗುತ್ತೇನೆ ಎಂಬ ವಿಶ್ವಾಸ ನಿಮಗಿರಲಿ.

ನನಗೊಂದು ಆಸೆಯಿದೆ. ನಾನೀ ದೇಶದಿಂದ ಹೋದ ಮೇಲೆ ಮೈಸೂರಿಗೆ ಬರುವ ಮುಂದಿನ ವೈಸರಾಯ್ ಗಳು ನಿಮ್ಮ ಕಾರ್ಯವೈಖರಿಯನ್ನು ಮುಕ್ತ ಕಂಠದಿಂದ ಪ್ರಶಂಸಿಸುವಂತಿರಬೇಕು. ನಿಮ್ಮಲ್ಲಿ ನಾನಿಟ್ಟಿರುವ ಅತುಳ ವಿಶ್ವಾಸ ಭರವಸೆಗಳಿಗೆ ತಕ್ಕಂತೆ ನೀವು ಆಡಳಿತ ನಡೆಸುತ್ತಿದ್ದೀರೆಂದು ಅವರು ಹೇಳುವಂತಿರಬೇಕು. ಆ ಉಜ್ವಲ ದಿನಗಳಿಗಾಗಿ ನಾನು ಎದುರು ನೋಡುವೆ. ನಿಮ್ಮಲ್ಲಿ ನಾನಿಟ್ಟಿರುವ ಅಪಾರ ನಂಬಿಕೆ ಮತ್ತು ಭರವಸೆಯನ್ನು ಸುಳ್ಳುಮಾಡಬೇಡಿ.ವರ್ಷದಿಂದ ವರ್ಷಕ್ಕೆ ನಿಮ್ಮ ನಿಮ್ಮ ಶಕ್ತಿ ಸಾಮರ್ಥ್ಯ ದಕ್ಷತೆಗಳು ಬೆಳೆಯುತ್ತಾ ಹೋಗಲಿ ಎಂದು ಆಶಿಸುತ್ತೇನೆ.

ಲಾರ್ಡ್ ಕರ್ಜನರ ಭಾಷಣ ಮುಗಿದೊಡನೆ ಅವರ ಕನ್ನಡ ತರ್ಜುಮೆಯನ್ನು ಸಭೆಗೆ ತಿಳಿಸಲಾಯಿತು. ಆನಂತರ ಕರ್ಜನರು ನಾಲ್ವಡಿಯವರ ಕೈಗಳನ್ನು ಹಿಡಿದುಕೊಂಡು ವೇದಿಕೆಗೆ ಕರೆದೊಯ್ದರು. ಅಲ್ಲಿ ಎರಡು ಬೆಳ್ಳಿಯ ಪೀಠಗಳು. ಒಂದು ಮಹಾರಾಜರಿಗೆ. ಮತ್ತೊಂದು masnad ( ಮಸ್ನಾದ್ - ರಾಜ ಪ್ರತಿನಿಧಿ) ಅವರಿಗೆ.

ಸಿಂಹಾಸನದಲ್ಲಿ ನಾಲ್ವಡಿಯವರನ್ನು ಕುಳ್ಳಿರಿಸಿದ ಲಾರ್ಡ್ ಕರ್ಜನ್ ಉಚ್ಚಕಂಠದಲ್ಲಿ " ನಿಮಗಿಂದು ಮೈಸೂರು ಸಂಸ್ಥಾನದ ಸಂಪೂರ್ಣಾಧಿಕಾರವನ್ನು ನೀಡುತ್ತಿದ್ದೇನೆ " ಎಂದು ಘೋಷಿಸಿ ಅಧಿಕಾರ ಪತ್ರವನ್ನು ಹಸ್ತಾಂತರಿಸಿದರು. ಅಧೀನ ಕಾರ್ಯದರ್ಶಿ ನೂತನ ಮಹಾರಾಜರ ಬಿರುದು ಬಾವಲಿಗಳ ಪರಾಕು ಹೇಳಿದರು. ಅದರಲ್ಲೊಂದು :

" ಸೂರ್ಯ ಚಂದ್ರ, ಶಂಖ ಚಕ್ರಾಂಕುಶ ಕುಠಾರ ,

ಮಕರ ಮತ್ಸ್ಯ ಹನುಮದ್ ಗರುಡ

ಕಂಠೀರವಾದ್ಯಾನೇಕ ಬಿರುದಾಂಕಿತ,

ರಾಜಾಧಿರಾಜ , ಶ್ರೀಮನ್ಮಹಾರಾಜ . . . . .

( ಜೋರಾಗಿ ಓದಿಕೊಂಡರೆ ಸ್ವಾರಸ್ಯ ಅರಿವಾದೀತು)

*

ಶ್ರೀಮನ್ಮಹಾರಾಜರು ತಮ್ಮ ಕೃತಜ್ಞತೆಯನ್ನು ಸ್ಫುಟವಾದ ಇಂಗ್ಲೀಷಿನಲ್ಲಿ ತಿಳಿಸಿದ್ದು ಹೀಗೆ.

" ಸನ್ಮಾನ್ಯರೇ , ನನ್ನ ಮೇಲಿರುವ ಜವಾಬ್ದಾರಿ ಎಷ್ಟು ಗುರುತರವಾದದ್ದು ಎಂಬುದನ್ನು ಬಲ್ಲೆ. ಇದನ್ನು ಮಾತಿನಿಂದಲ್ಲ. ಕಾರ್ಯರೂಪದಲ್ಲಿ ತೋರಿಸಬೇಕೆಂದು ಸಂಕಲ್ಪಿಸಿದ್ದೇನೆ. ನಮ್ಮ ಪ್ರಜೆಗಳ ಸುಖ ಸಂತೋಷಕ್ಕೆ ಕೊರತೆಯಾಗದಂತೆ ಪ್ರಯತ್ನಪಡುವುದು ನಮ್ಮ ಆದ್ಯ ಕರ್ತವ್ಯವೆಂದು ಭಾವಿಸಿದ್ದೇವೆ. ವೈಸರಾಯರು ಹೇಳಿದ ಬುದ್ಧಿಮಾತುಗಳು ನಮ್ಮ ಹೃದಯದಲ್ಲಿ ಬೇರೂರಿವೆ. ಅದರಂತೆ ನಡೆಯುವ ಸಂಕಲ್ಪ ನಮ್ಮದು. ನಮಗೆ ಲಭಿಸಿರುವ ಈ ಉನ್ನತ ಪದವಿಯಲ್ಲಿ ಸತ್ಕೀರ್ತಿ ಪಡೆಯಲು ಅಸಾಧಾರಣ ಅವಕಾಶಗಳಿವೆ. ಅವುಗಳನ್ನು ವಿವೇಕದಿಂದ ಬಳಸಿಕೊಳ್ಳುವುದು ಮುಖ್ಯ. ಯಾರ ಭಯವಾಗಲೀ ,ದಾಕ್ಷಿಣ್ಯವಾಗಲೀ ಇಲ್ಲದೆ , ಯಾರ ತಂತ್ರಕ್ಕೂ ಹಿಂಜರಿಯದೆ , ಯಾವ ಮಂತ್ರಕ್ಕೂ ಒಳಗಾಗದೆ ನಮ್ಮ ಪ್ರಜೆಗಳಿಗೆ ಸುಖ ಶಾಂತಿ ನೆಮ್ಮದಿ ದೊರಕಿಸಿಕೊಡಲು , ತಕ್ಕ ಸಾಮರ್ಥ್ಯವನ್ನು ಭಗವಂತ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ " ಎಂದು ಮಾತು ಮುಗಿಸಿದರು.

* * *

" ಭಗವದ್ಗೀತೆಯನ್ನು ಬೋಧಿಸಲೇನು ಬೇಕಾದಷ್ಟು ಕೃಷ್ಣರಿರುತ್ತಾರೆ. ಆದರೆ ಅದನ್ನು ಪಾಲಿಸಬಲ್ಲ ಅರ್ಜುನರು? ಕರ್ಜನರಿಗೆ ಕೊಟ್ಟ ವಾಗ್ದಾನ ಬರಿಯ ಭಾಷಣವಾಗಿರಲಿಲ್ಲ. ಮಹಾರಾಜರು ಮರೆಯದೆ ಅಕ್ಷರಶಃ ಪಾಲಿಸಿದರು.

೧೯೦೫ರಲ್ಲಿ ನಿವೃತ್ತರಾಗಿ ಇಂಗ್ಲೆಂಡಿನಲ್ಲಿದ್ದ ಕರ್ಜನರಿಗೆ ನಾಲ್ವಡಿಯವರ ಕಾರ್ಯ ವೈಖರಿ ತಿಳಿಯುತ್ತಿತ್ತು. ತಾವು ಪ್ರತಿಷ್ಠಾಪಿಸಿದ್ದ ಆ ಯುವಕ ಈಗ ಇಂತಿಂಥ ಸಾಧನೆಗೈಯ್ಯುತ್ತಿದ್ದಾನೆ ಎಂಬ ಹೆಮ್ಮೆ ಅವರದಾಗಿತ್ತು.
*
*ಜೆ.ಬಿ.ರಂಗಸ್ವಾಮಿ, ವಿಶ್ರಾಂತ ಪೊಲೀಸ್ ಅಧಿಕಾರಿ , ಮೈಸೂರು*

# ವೈದರ್ಭಿಯ ವ್ಯಾಕುಲತೆ



**ವಿನಯ್ ಕುಮಾರ್ ಜಾನಕಿರಾಮ್**, *ಮೈಸೂರು*

"ಮಹಾರಾಜ ಹೆಣ್ಣು ಮಗು" ವಿದರ್ಭ ದೇಶದ ಮಹಾರಾಜ ಭೀಷ್ಮಕನಿಗೆ ಎಲ್ಲಿಲ್ಲದ ಆನಂದ. ಬರಿಯೇ ಗಂಡು ಮಕ್ಕಳು ಆಡುತ್ತಿದ್ದ ಮನೆಗೆ ಗೆಜ್ಜೆಯ ದನಿಯ ಆಗಮನ. ವೈದರ್ಭಿ, ಭೈಷ್ಮಿ, ಶ್ರೀ, ರುಕ್ಮಿಣಿ ಎಂದು ಹಲವಾರು ನಾಮಗಳಿಂದ ಅಲಂಕೃತ ವಾಯಿತು ಈ ಮಗು. ರುಕ್ಮ ಕೇಶ, ರುಕ್ಮಿ ಬಾಹು, ರುಕ್ಮಿ ಮಾಲ, ರುಕ್ಮ ರಥ ಇವರ ಮಧ್ಯದಲ್ಲಿ ಒಬ್ಬಳೇ ಹೆಣ್ಣು ಮಗಳು ರುಕ್ಮಿಣಿ. ರುಕ್ಮಿಣಿಯನ್ನು ಕಂಡರೆ ಸಹೋದರರಿಗೆ ಎಲ್ಲಿಲ್ಲದ ಪ್ರೇಮ. ಅವರಲೆಲ್ಲಾ ಅತ್ಯಂತ ಪ್ರೀತಿ ತೋರುತಿದ್ದವ ಸಹೋದರ ರುಕ್ಮಿ! ರುಕ್ಮಿ ಎಲ್ಲೇ ಹೋದರು ಅವನ ಹಿಂದೆ ಈ ರುಕ್ಮಿಣಿ. ರುಕ್ಮಿಗೆ ಯಾವುದೇ ಇರಸುಮುರುಸಿಲ್ಲ. ತನ್ನ ಸಂಗಡವೇ ಎಲ್ಲಾ ಕಡೆಗೂ ಕರೆದುಹೋಗುತ್ತಿದ್ದ. ರುಕ್ಮಿಯ ಸ್ನೇಹಿತರೆ ರುಕ್ಮಿಣಿಯ ಸ್ನೇಹಿತರು.

ಭೀಷ್ಮಕ ರುಕ್ಮಿಣಿಗೆ ಯುದ್ಧ ವಿದ್ಯೆಗಳು, ಕತ್ತಿವರಸೆ, ಕುಸ್ತಿ, ಕುದುರೆ ಸವಾರಿ, ರಥ ಚೇಲಾಯಿಸುವ ವಿಧಾನ, ಬಿಲ್ಲು ಬಾಣದ ವರಸೆಗಳು, ಹೀಗೆ ಹತ್ತು ಹಲವು ವಿದ್ಯೆಗಳನ್ನು ಓದಿನ ಜೊತೆಯಲ್ಲಿಯೇ ಕಳಿಸಿದ್ದ. ರುಕ್ಮಿಣಿಗೆ ವೇದ ಪಾಠಗಳ ತಾತ್ಪರ್ಯವೂ ಸ್ತೋತ್ರಪಾಠವಾಗಿ ಮಾಡಿಸಿಯೂ ಇದ್ದ. ಇದೆಲ್ಲದರ ಜೊತೆಗೆ, ರುಕ್ಮಿಣಿಗೆ ಸಾಮಾನ್ಯ ಜನರ ಜೊತೆ ಸಂಪರ್ಕ ವಿರಲೆಂದು ಗೋಸೇವೆ, ದೀನರ ಸೇವೆಗಳಲ್ಲಿ ಭಾಗವಹಿಸುವಂತೆ ಅಣಿವುಮಾಡಿಕೊಟ್ಟಿದ್ದ. ರುಕ್ಮಿಣಿ ಬುದ್ಧಿವಂತೆ ಹಾಗು ಎಲ್ಲರನ್ನೂ ಪ್ರೀತಿಸುವ ಮನೋಭಾವ. ವಿದರ್ಭದ ಮಣ್ಣಿನ ಗುಣವೂ ಹೌದು. ಪ್ರಭು ಶ್ರೀರಾಮನ ಅಜ್ಜಿ, ಮಹಾರಾಜ ದಶರಥನ ತಾಯಿ, ಅಜ ಮಹಾರಾಜನ ಹೆಂಡತಿ ಇಂದುಮತಿಯ ತವರುಮನೆಯೂ ವಿದರ್ಭವೆ, ಹಾಗೆಯೇ ನಳ



ಮಹಾರಾಜನ ಹೆಂಡತಿ ದಮಯಂತಿ ಇದೇ ವಿದರ್ಭ ದೇಶದ ರಾಜಕುಮಾರಿ. ದಮಯಂತಿಯ ತಾಳ್ಮೆ, ಮಣ್ಣಿನ ಗರಿಮೆ ಎಲ್ಲವನ್ನೂ ಒಗ್ಗೂಡಿಸಿಕೊಂಡು ಬೆಳೆದವಳು ರುಕ್ಮಿಣಿ. ರುಕ್ಮಿಣಿಯ ತಾಯಿ ಶುದ್ಧಮತಿ, ಹೆಸರಿಗೆ ತಕ್ಕಂತಹ ನಡವಳಿಕೆ. ಬಾಲ್ಯದಲ್ಲಿ ಒಮ್ಮೆ ರುಕ್ಮಿಣಿ, ತನ್ನ ತಾಯಿಯನ್ನು "ಅಸೂಯೆ ಅಂದ್ರೆ ಏನು?" ಎಂದು ಪ್ರಶ್ನಿಸುತ್ತಾಳೆ. ಆಗ ತಾಯಿ ಶುದ್ಧಮತಿ ಉತ್ತರ ಕೊಡಲಾಗದೆ ಹೆಣಗಾಡುತ್ತಾಳೆ, ಕಾರಣ? ಗೊತ್ತಿಲ್ಲದೇ ಇರುವುದನ್ನು ಹೇಗೆ ಹೇಳಿಕೊಡುವುದು? ಕಡೆಗೆ "ಅಸೂಯೆ ಅಂದ್ರೆ, ಇದು ನಮಗೆ ಮಾತ್ರ ಸೇರಬೇಕು, ನಾವು ಇನ್ನೊಬರ ಜೊತೆ ಹಂಚಿಕೊಳ್ಳಲಾಗದ ಸ್ಥಿತಿ" ಎಂದು ಉತ್ತರ ನೀಡಿ ಜಾರಿಕೊಳ್ಳುತ್ತಾಳೆ. ರುಕ್ಮಿಣಿಗೆ ಈ ಉತ್ತರದಿಂದ ತೃಪ್ತಿಯಾಗುವುದಿಲ್ಲ.

ರುಕ್ಮಿಣಿ ಬೆಳೆದು ದೊಡ್ಡವಳಾದ ಮೇಲೆ, ತಕ್ಕಂತಹ ವರನ ಹುಡುಕಾಟದಲ್ಲಿ ತೊಡಗಿದರು. ಸಹೋದರ ರುಕ್ಮಿ ಗೆ, ಮಹಾರಾಜಾ ಶಿಶುಪಾಲನಿಗೆ ಕೊಟ್ಟು ಮದುವೆ ಮಾಡಲು ಇಷ್ಟ, ಆದರೆ ರುಕ್ಮಿಣಿಗೆ ಶ್ರೀ ಕೃಷ್ಣನ ಮೇಲೆ ಎಲ್ಲಿಲ್ಲದ ಪ್ರೀತಿ ಆದರೆ. ಮೊದಲಿಂದಲೂ ರುಕ್ಮಿಣಿಗೆ ಸಹೋದರ ರುಕ್ಮಿಯ ನಿರ್ಧಾರವೇ ವೇದವಾಕ್ಯ, ಆದರೆ ಈಗ ಜಿಜ್ಞಾಸೆ. ಒಬ್ಬ ಬ್ರಾಹ್ಮಣನ ಮೂಲಕ ಮಾಧವನಿಗೆ ತನ್ನ ಮನಸ್ಸಿನ ತೊಳಲಾಟವನ್ನು  ವೈದರ್ಭಿ ಹೇಳಿಕಳಿಸುತ್ತಾಳೆ. ಸಕಲವನ್ನೂ ತಿಳಿದಿರುವ ಭಗವಂತನಿಗೆ, ಇದೊಂದು ಆಟ. ಆತನಿಗೂ ಗೊತ್ತು, ತನ್ನ ಪಟ್ಟದರಸಿ ಶ್ರೀ ಲಕ್ಷ್ಮಿ ಯ ಅವತಾರವೇ ರುಕ್ಮಿಣಿ ಎಂದು. ಆದರೂ ಏನನ್ನೂ ಹೇಳದೆ, ಆ ಬ್ರಾಹ್ಮಣನಿಗೆ ತಾಂಬೂಲ ಕೊಟ್ಟು ಬೀಳ್ಕೊಡುತ್ತಾನೆ, ಮುಗುಳು ನಗೆ ಬೀರುತ್ತಾನೆ.

ವಿದರ್ಭ ದೇಶದಲ್ಲಿ ಮದುವೆಯ ಸಂಭ್ರಮ, ಗೌರಿ ಪೂಜೆಗೆಂದು ಸುಮಂಗಲಿಯರ ಜೊತೆ ಭೈಷ್ಮಿ ಊರಾಚೆಯ ಗುಡಿಗೆ ಹೊರಟಿದ್ದಾಳೆ. ವೇಗವಾಗಿ ಬಂದಂತಹ ರಥ, ಧೂಳೆಬ್ಬಿಸಿ ಹೋಗಿದೆ, ಧೂಳಿನ ಪರದೆ ಹರಿದಮೇಲೆ ಗೊತ್ತಾಯ್ತು ರುಕ್ಮಿಣಿ ಕಾಣುತ್ತಿಲ್ಲಾ ಎಂದು! ವೇಗವಾಗಿ ಬಂದಂತಹ ರಥದ ರಥಿಕ, ವೈದರ್ಭಿಯ ಸೊಂಟಕ್ಕೆ ಕೈ ಹಾಕಿ ಎತ್ತಿಕೊಂಡು ರಥದಲ್ಲಿ ಕೂರಿಸಿಕೊಂಡಿದ್ದಾನೆ, ಆ ಸ್ಪರ್ಶದಿಂದಲೇ ರುಕ್ಮಿಣಿಗೆ ಅರಿವಾಗಿದೆ, ಇವನು ನನ್ನ ಮನದರಸ ಗೋಪಾಲಾ ಎಂದು. ಆತನ ಎಡಭಾಗದಲ್ಲಿ ನಿಂತು ನಾಲ್ಕು ಅಶ್ವಗಳ ರಥದ ಲಗಾಮು ಹಿಡಿದಿದ್ದಾಳೆ ಶ್ರೀ! ಅಲ್ಲವೇ ಮತ್ತೆ, ಭಗವಾನ್ ವಿಷ್ಣುವಿನ ವಕ್ಷಸ್ಥಳಕ್ಕೆ ಸಮೀಪವಾಗಿಯೇ ಇರಬೇಕು ಲಕ್ಷ್ಮಿ!
ರುಕ್ಮಿಣಿ ಕೃಷ್ಣರ ವಿವಾಹ ವಿಜೃಂಭಣೆಯಿಂದ ನಡೆಯಿತು. ರುಕ್ಮಿಣಿ, ಶ್ರೀ ಕೃಷ್ಣನ ಪಟ್ಟದರಸಿ ಆದ್ಲು.

ಎಷ್ಟೋ ವರ್ಷಗಳ ನಂತರ…....
ಶಯನಗೃಹದಲ್ಲಿ ರುಕ್ಮಿಣಿ ಮಗ್ಗುಲು ಬದಲಿಸುತ್ತಿದ್ದಾಳೆ, ನಿದ್ರೆ ಬರುತ್ತಿಲ್ಲ, ಎದ್ದು ಕೂರುತ್ತಾಳೆ, ನೀರು ಕುಡಿಯುತ್ತಾಳೆ, ಮತ್ತೆ ನಿದ್ರೆಗೆ ಜಾರಲು ಪ್ರಯತ್ನಿಸುತ್ತಾಳೆ, ನಕ್ಷತ್ರಗಳನ್ನು ಎಣಿಸುತ್ತಾಳೆ, 'ರಾಮಸ್ಕಂದಂ ಹನುಮಂತಂ, ವೈನತೇಯಂ ವೃಕೋದರಮ್ ಶಯನೇಯಃ ಸ್ಮರೇ ನಿತ್ಯಂ, ದುಃಸ್ವಪ್ನಂ ತಸ್ಯ ನಶ್ಯತಿ' ಮಂತ್ರ ಪಠಣೆಯೂ ಆಯ್ತು, ಆದರೂ ಏನೋ ವ್ಯಾಕುಲತೆ!

ತಾನು ಯಾರು?  ವೈದರ್ಭಿ, ಶ್ರೀ ಕೃಷ್ಣನ ಪಟ್ಟಮಹಿಷಿ, ನನಗೆ ಎಲ್ಲವೂ ಇದೆ, ಏನೂ ಕೊರತೆ ಇಲ್ಲ. ನಾವೆಷ್ಟು ಜನ ಸವತಿಯರು? ಸತ್ಯಭಾಮೆ, ಜಾಂಬವತಿ, ಕಾಳಿಂದಿ, ಭದ್ರ, ಮಿತ್ರವಿಂದಾ, ಸತ್ಯ  ಇನ್ನೂ ಹಲವರು. ನಾನು ನನ್ನ ಸ್ವಾಮಿಯನ್ನು ಬೇರೆ ರಾಣಿಯರ ಜೊತೆ ಕಳುಹಿಸಿಕೊಡಲು ಯಾವುದೇ ಕಸಿವಿಸಿ ಇಲ್ಲ! ಈಗ ಯಾವುದೋ ಒಬ್ಬ ನರಪೇತಲ ಬ್ರಾಹ್ಮಣ ಬಂದಿದ್ದಾನೆ, ನನ್ನ ಗಂಡನ ಬಾಲ್ಯ ಸ್ನೇಹಿತನಂತೆ, ಅದೇನೋ ಸೊಂಟದಲ್ಲಿದ್ದ ಗಂಟಿನಿಂದ ನಾಲ್ಕು ಕಾಳು ಅವಲಕ್ಕಿ ತೆಗೆದು ಕೊಟ್ಟ , ಅದನ್ನು ನನ್ನ ಮಹಾರಾಜ ಅದೇನೋ ಅಮೃತಾ ಎನ್ನುವಂತೆ ಸ್ವೀಕರಿಸಿದ, ನೀನೂ ತಿನ್ನು ಎಂದು ಕಾಟಾಚಾರಕ್ಕೆ ಹೇಳಿ, ಅವನೇ ಪೂರ್ತೀ ತಿಂದು,  ನನಗೆ ನೋಡು ಯಾರು ಬಂದಿದ್ದಾರೆ ನೋಡು ಎಂದ. ಒಬ್ಬ ಮಹಾರಾಜ ಬಂದರೆ, ಆತನನ್ನು ಆದರಿಸಲು ಪರಿಚಾರಿಕೆಯರನ್ನು ಕರೆಯುವುದು ವಾಡಿಕೆ, ಇಲ್ಲವೇ ಯಾರೋ ಋಷಿಗಳು ಬಂದರೆ, ಇತರ ರಾಣಿಯರನ್ನು ಕರೆಯುವ ಸಂಪ್ರದಾಯ, ರಾಜ ಪುರೋಹಿತರು, ರಾಜ ಗುರುಗಳು ಬಂದರೆ ಮಾತ್ರವೇ ಪಟ್ಟ ಮಹಿಷಿಗೆ ಜವಾಬ್ದಾರಿ! ನನ್ನ ಗಂಡ ಈ ಬ್ರಾಹ್ಮಣನ್ನು ಈ ರೀತಿ ಬಿಗಿದಪ್ಪಿದ್ದು, ಮುದ್ದಿಸಿದ್ದು, ಅವನನ್ನು ಕರೆದುಕೊಂಡು ಹೋಗಿ ಸಿಂಹಾಸನದ ಮೇಲೆ ಕೂರಿಸಿದ್ದು, ಅವನ ಪಾದಗಳನ್ನು ಒಂದು ಚಿನ್ನದ ತಟ್ಟೆಯಮೇಲಿಟ್ಟು, ತೊಳೆದದ್ದು, ನನ್ನ ಕೈಲೂ ತೊಳೆಸಿದ್ದು, ನನ್ನ ಸೀರೆಯ ಅಂಚಿನಿಂದ ಆ ಪಾದಗಳನ್ನು ಒರೆಸಿದ್ದು, ಆ ನೀರನ್ನು ತಲೆಮೇಲೆ ಪ್ರೋಕ್ಷಿಸಿ ಕೊಂಡದ್ದು! ಅವನನ್ನು ತಬ್ಬಿ ಕರೆದುಕೊಂಡು ಒಳಕೋಣೆಗೆ ಹೋದದ್ದು, ಒಮ್ಮೆಯೂ ನನ್ನ ಕಡೆ ತಿರುಗಿ ನೋಡದೆ ಹೋದದ್ದು!  ಯಾರೋ ಸುಧಾಮನಂತೆ, ಸ್ನೇಹಿತನಂತೆ, ಸ್ನೇಹಿತರನ್ನು ಕಂಡರೆ ಇಷ್ಟು ಪ್ರೀತಿಯೇ?? ನನ್ನ ಮಾಧವನನ್ನು ತನ್ನಿಂದ ಯಾರೋ ಕಿತ್ತುಕೊಂಡಿದ್ದಾರೆ, ನಾನು ಒಂಟಿ ಯಾಗಿದ್ದೇನೆ ಎನ್ನುವ ಭಾವ ತುಂಬಿ ಬಂತು!

ಆಗ ದೂರದಲ್ಲೊಂದು ಅಶರೀರವಾಣಿ ಕೇಳಿತು "ಅಸೂಯೆ ಅಂದ್ರೆ ಗೊತ್ತಾಯ್ತೆ ರುಕ್ಮಿಣಿ?"!! ರುಕ್ಮಿಣಿಗೆ ಒಮ್ಮೆಲೇ ದುಃಖವಾಯ್ತು, ತನ್ನ ಮನಸ್ಥಿತಿಯನ್ನು ಕಂಡು ತಾನೇ ದೂಷಿಸಿಕೊಂಡಳು!

"ರುಕ್ಮಿಣಿ" ಎಂದು ಕರೆದ ಹಾಗಾಯ್ತು!! ನೋಡಿದರೆ ಮಾಧವ. "ಬೆಳಗ್ಗೆ ನಿನ್ನನ್ನು ಮಾತನಾಡಿಸಲೂ ಆಗಲಿಲ್ಲ ನೋಡು. ನನ್ನ ಪ್ರಾಣ ಸ್ನೇಹಿತ ಸುಧಾಮ ಬಂದಿದ್ದಾನೆ. ಈಗ ಸುಧಾಮ ನಿದ್ರೆಗೆ ಜಾರಿದ. ಪಾಪ ಬಹಳದೂರದಿಂದ ನಡೆದು ಬಂದಿದ್ದಾನೆ. ಪಾದಗಳೆಲ್ಲ ಬಾತು ಹೋಗಿವೆ. ಅದಕ್ಕೆ ಔಷದೋಪಚಾರಗಳ ಅಗತ್ಯವಿದೆ, ಹಾಗಾಗಿ ನಾನೇ ನೋಡಿಕೊಳ್ಳುತ್ತಿದ್ದೆ, ರುಕ್ಮಿಣಿ ನವರಾತ್ರಿ ಆಚರಿಸಲು ಸಿದ್ಧತೆ ಮಾಡಿಕೊಳ್ಳಬೇಕು, ಸುಧಾಮನ ಆಗಮನವೇ ನಮಗೆ ಹಬ್ಬ!" ತನ್ನ ಹಾಗು ಸುಧಾಮನ ಬಾಲ್ಯದ ಬಗ್ಗೆ ಮಾಧವ ವಿವರಿಸಿದ, ಅವರ ಒಡನಾಟದ ಬಗ್ಗೆ ಹತ್ತು ಹಲವು ಘಟನೆಗಳನ್ನು ಹೇಳುತ್ತಾಹೋದ. ಬೆಳಗಿನ ಜಾವದ ಹಕ್ಕಿಯ ಕಲರವ ಕೇಳಿದಾಗಲೇ, ಇಬ್ಬರಿಗೂ ಅರಿವಾಗಿದ್ದು ಮೂಡಣದಲ್ಲಿ ಬೆಳಕು ಮೂಡುತ್ತಿದೆ ಎಂದು, ಇದು ರುಕ್ಮಿಣಿಯ ಮನಸಿನಲ್ಲಿ ಕವಿದಿದ್ದ ಕತ್ತಲೆಯನ್ನು ದೂರಪಡಿಸಿದ ಬೆಳಕೂ ಹೌದು!

ಮಾಧವ ಮತ್ತೇನು ಹೇಳಲಿಲ್ಲ, ಸುಧಾಮ ಇರುವಷ್ಟು ದಿನವೂ ರುಕ್ಮಿಣಿಯೇ ಸುಧಾಮನ ಸಹಾಯಕಳಾಗಿ ನಿಂತಳು. ಬೆಳಗಿನಿಂದ ರಾತ್ರಿ ಸುಧಾಮ ಮಲಗುವವರೆಗೂ, ರುಕ್ಮಿಣಿಯದೇ ಮುಂದಾಳತ್ವ, ಅವಳೇ ಅಡುಗೆ ಮಾಡುತ್ತಾಳೆ, ಸ್ನಾನಕ್ಕೆ, ಪೂಜೋಪಚಾರಕ್ಕೆ ಅವಳೇ ಅಣಿವು ಮಾಡಿಕೊಡುತ್ತಾಳೆ, ಸುಧಾಮನ ಕಾಲು ಒತ್ತುತ್ತಾಳೆ, ಸ್ನೇಹಿತರ ಸಂಭಾಷಣೆಯಲ್ಲಿ ಅವಳೂ ಭಾಗಿಯಾಗುತ್ತಾಳೆ.
ವೈದರ್ಭಿಗೆ ಅವರಿಬ್ಬರ ಬಾಂಧವ್ಯದ ಒಳಗಣ್ಣಿನ ಅರಿವಾಯ್ತು.

ವಾರವೋ, ಹತ್ತು ದಿನವೋ, ತಿಂಗಳೋ ಕಳೆದುಹೋಯ್ತು. ಸುಧಾಮ ಹೊರಡಲು ಅನುವಾದ. ಕೃಷ್ಣನಿಗಿಂತ ರುಕ್ಮಿಣಿಗೆಯೇ ತಡೆಯಾಲಾರದ ದುಃಖ. ರುಕ್ಮಿಣಿಗೆ ತನ್ನ ದೇಹದ ಒಂದು ಭಾಗವೇ ತೊರೆದು ಹೊರಟುಬಿಟ್ಟದೆ ಅನ್ನುವಷ್ಟು ನೋವು, ಸಂಕಟ. ರುಕ್ಮಿಣಿಗೆ ಸ್ನೇಹದ ಘಾಢತೆ, ಅದಕ್ಕಿರುವ ತೀಕ್ಷ್ಣತೆಯ ಪರಿಚಯವಾಯ್ತು!
ಸುಧಾಮ ಹೊರಟ. ರುಕ್ಮಿಣಿ ಮಾಧವರು ಮೌನಕ್ಕೆ ಜಾರಿದರು! ಅದೇನೋ ನಿರ್ವಾತ!

**ಚಿನ್ನಿ-ಕೋಲು:** ಶ್ರೀ ಮಾಸ್ತಿ ವೆಂಕಟೇಶ ಐಯ್ಯಂಗಾರ್ ಅವರು 100 ಸಣ್ಣ ಕಥೆಗಳನ್ನು ಬರೆದಿದ್ದಾರೆ. ಅದರಲ್ಲಿ ಒಂದು "ಸುಧಾಮನ ಮೊಮ್ಮಗ" ಓದಿ ನೋಡಿ, ಬಹಳಾ ಚೆನ್ನಾಗಿದೆ.

ನಮ್ಮಲ್ಲಿ ಸ್ನೇಹವೇ ಕಡಿಮೆ ಯಾಗುತ್ತಿದೆ. ಶಾಲೆಯಲ್ಲಿ, ಮನೆಯ ವಠಾರದಲ್ಲಿ ಒಡನಾಟ ಇರಿಸಿಕೊಂಡಿದ್ದ ಸ್ನೇಹಿತರ ಸಂಪರ್ಕ ಇಲ್ಲದಂತಾಗಿದೆ.

ಈ ಸ್ನೇಹವೇ ಜೀವನದ ಒಡನಾಡಿ. ಇವರೇ ನಿಮ್ಮ ಒಳಮನಸ್ಸನ್ನು ಅರ್ಥೈಸಿಕೊಂಡವರು!

ಹೌದು ನೀವು Markscard ನಲ್ಲಿ 3 ಅನ್ನು 9 ಆಗಿ ತಿದ್ದಿ ಮನೆಯವರ ಮುಂದೆ ಹೀರೋಗಳಾದಾಗ, ಇವರೇ ನಿಮ್ಮ ಬೆನ್ನು ಹಿಂದೆ ನಿಂತವರು! ನಿಮ್ಮ ಸೈಕಲ್ ಕಲಿಯುವ ಚಪಲಕ್ಕೆ, ಕೃಷ್ಣಮೂರ್ತಿಪುರದ ಆಚರಿಗಳ ಸೈಕಲ್ ಕದ್ದು, ನೀವು ಸೈಕಲ್ ಸಹಿತಾ ಮೋರಿಗೆ ಬಿದ್ದಾಗ, ಎತ್ತಿದವರು ಇವರೇ, ಮನುವನ ಉದ್ಯಾನವನದಲ್ಲಿ ಮೀನು ಹಿಡಿಯಲು ಹೋಗಿ, ಮಾಲಿ ಬಂದಾಗಾ ನಿಮ್ಮನ್ನು ಅವನಿಂದ ತಪ್ಪಿಸಿಕೊಳ್ಳುವಂತೆ ಮಾಡಿ ಕಾಪಾಡಿದ್ದು ಇವರೇ, ಚಾಮರಾಜ ಪುರಂ ಮೂರನೇ ರಸ್ತೆಯ, ಮಧ್ಯದ ಮನೆಯ ಅವಳಿಗೆ ನಿಮ್ಮ ಪರವಾಗಿ ಪ್ರೇಮಪತ್ರ ಕೊಟ್ಟವರು, ಅವಳು ತಾಕತ್ ಇದ್ರೆ ಮದುವೆ ಮಾಡ್ಕೊಳ್ರೀ ಅಂದಾಗ, ಮೂರುವರ್ಷ ನಿಮ್ಮ ಜೊತೆ ತಲೆಮರೆಸಿಕೊಂಡು ತಿರುಗಾಡಿದವರು ಇವರೇ! ಮೊದಲ ಬಾರಿಗೆ ಪೆಲಿಕನ್ ನಲ್ಲಿ ಪಿಕ್ಚರ್ ಆರ್ಡರ್ ಮಾಡಿಕೊಂಡು ನೀವು ಕಕ್ಕಿಕೊಂಡಾಗ ಜ್ಞಾನ ಇಲ್ಲದೆ ಮಲಗಿದ್ದಾಗ, ಬಿಲ್ ಕಟ್ಟಿ, ಮನೆಗೆ ಕರೆತಂದು ಬಿಟ್ಟವರು ಇವರೇ! ನೀವು ಮನೆ ಮನೆ ಗಣಪತಿ ನೋಡಲು ಹೊರಟರೂ ಸೈ, ಚಾಮುಂಡಿ ಬೆಟ್ಟಕ್ಕೆ ಹೊರಟರೂ ಸೈ, ಬಲಮುರಿಗೆ ಹೊರಟರೂ ಸೈ, ಊಟಿಗೆ ಹೊರಟರೂ ಸೈ! ಪರೀಕ್ಷೆ ಹಿಂದಿನ ದಿನ ರಾತ್ರಿ ಎಲ್ಲಾ ಎದ್ದಿದ್ದು, ನಿಮ್ಮ ತಲೆಗೆ ನಾಲ್ಕು ಅಕ್ಷರ ತುಂಬಿ ನಿಮ್ಮನ್ನು ದಡ ಸೇರಿಸಿದ್ದು ಇವರೇ!

ನಿಮ್ಮ ನಿಜ ಜಾತಕ ಇರೋದೇ ಈ ಸ್ನೇಹಿತರ ಬಳಿ! ಅವರನ್ನು ಬಿಟ್ಟು ನಿಮಗೆ ಬದುಕಿಲ್ಲ, ಯೋಚಿಸಿ!

# ಪ್ರವಾಸ ಕಥನ





# ನ್ಯೂ ಫೌಂಡ್ ಲ್ಯಾಂಡ್ & ಲ್ಯಾಬ್ರಡಾರ್ ೪೫೦೦ ಮೈಲಿ ರಸ್ತೆ ಪ್ರವಾಸ ಕಥನ

**ಮಲ್ಲಿಕ್ ಪ್ರಸಾದ್,** *ನ್ಯೂಜೆರ್ಸಿ*

## ಭಾಗ ೨

ನೋ ಇಂಗ್ಲಿಷ್ ಅಂದ ಚೀನೀ ಅಜ್ಜನ ಜೊತೆ ಮಾತು ಮುಂದುವರೆಸುವುದು ಹೇಗೆಂದು ಆಲೋಚಿಸುತ್ತಿದ್ದೆ... ತಾತ ಜೇಬಿನಿಂದ ಐಫೋನ್ ತೆಗೆದು ಸಿರಿ - ಭಾಷೆ ಭಾಷಾಂತರ App ತೆಗೆದು ನನ್ನ ಮುಂದಿಟ್ಟ ! ಅದರೊಂದಿಗೆ ಸಂವಾದ ಶುರು ಮಾಡಿದೆವು... ಹೌದು ನಮ್ಮ ಮನೆ ರೂಮ್ ಗಳನ್ನ ಕೊಡ್ತೇವೆ ಅಂತ ಒಳಗೆ ಕರೆದು ಕೊಂಡು ಹೋಗಿ ಕೆಳಗೆ ಎರೆಡು, ಮೇಲೆ ಎರೆಡು ಕೊಠಡಿ ತೋರಿಸಿದ, ಕೆಳಗೆ ಅಡಿಗೆ ಮನೆಯ ಹತ್ತಿರದ ಕೋಣೆಗಳ ಮೀನಿನ ವಾಸನೆ ಜಾಸ್ತಿ ಇದೆ ಅಂತ ಮೇಲಿನ ರೂಮಿಗೆ 100 ಡಾಲರ್ ಕ್ಯಾಶ್ ಕೊಟ್ಟು ತಂಗಿದೆವು. ರಾತ್ರಿ ಗುಡುಗು ಸಹಿತ ಮಳೆ ಬಿದ್ದರೂ ಒಳ್ಳೆ ನಿದ್ದೆ ಮಾಡಿ ಮಾರನೇ ದಿನ PEI ಸುಂದರ ಕಡಲ ತೀರ, ಹಳೆ ಲೈಟ್ ಹೌಸ್ಗಳನ್ನ  ನೋಡಿ ಸಬ್ ವೇ ಸ್ಯಾಂಡ್ವಿಚ್ ತಿಂದು ನೋವೋ ಸ್ಕೋಟಿಯಾ ರಾಜ್ಯದ ರಾಜಧಾನಿ ಹ್ಯಾಲಿಫ್ಯಾಕ್ಸ್ ಕಡೆಗೆ ಹೊರಟೆವು.





1. ಸಮುದ್ರಕ್ಕೆ ಹಾಕಿರುವ ಬೋರ್ಡ್ ವಾಕ್

2,3,4ರಮಣೀಯ PEI ದೃಶ್ಯಾವಳಿ

5. PEIನಲ್ಲಿ ಆಶ್ರಯದಾತರಾದ ಚೀನೀ ದಂಪತಿಗಳು

ಹ್ಯಾಲಿಫ್ಯಾಕ್ಸ್'ನಲ್ಲಿ ನನ್ನ ಕಂಪನಿ ಕಾಗ್ನಿಜೆಂಟ್'ನ ದೊಡ್ಡ ಆಫೀಸ್ ಇದೆ, ನನ್ನ ಮಿತ್ರ ಹಾಗೂ ಸಹೋದ್ಯೋಗಿ ಇರ್ಫಾನ್ ರಸೂಲ್ ಕೆಲವೇ ತಿಂಗಳ ಹಿಂದೆ ನೋವ ಸ್ಕೋಟಿಯಾ, ಕೆನಡಾಗೆ ವರ್ಗವಾಗಿದ್ದ. ಸಂಜೆ ಹ್ಯಾಲಿಫ್ಯಾಕ್ಸ್ ಸುತ್ತ ಮುತ್ತ ಓಡಾಡಿ ಇರ್ಫಾನ್ ಜೊತೆ 'ರಸ' ಇಂಡಿಯನ್ ರೆಸ್ಟೋರೆಂಟ್'ಲ್ಲಿ ಊಟ ಮಾಡಿ, ಹ್ಯಾಲಿಫ್ಯಾಕ್ಸ್ ಡೌನ್ ಟೌನ್ ಬೋರ್ಡ್ ವಾಕ್' ಸುತ್ತಾಡಿ, ರಾತ್ರಿ ಮ್ಯಾರಿಯೆಟ್'ನಲ್ಲಿ ಒಳ್ಳೆ ವಿಶ್ರಾಮ ಮಾಡಿದೆವು. ಬೆಳಗ್ಗೆ ಮತ್ತೊಬ್ಬಳು ಸಹೋದ್ಯೋಗಿ ಭವ್ಯಳನ್ನು ಭೇಟಿ ಮಾಡಿ ಮತ್ತು ಅವಳ ಮಗನ ಜೊತೆ ಸ್ವಲ್ಪ ಹೊತ್ತು ಆಟವಾಡಿ 'ಕೇಪ್ ಬ್ರೆಂಟನ್' ಕಡೆ ಹೊರೆಟವು.




ಹ್ಯಾಲಿಫ್ಯಾಕ್ಸ್ ನಲ್ಲಿ ಮಿತ್ರರ ಭೇಟಿ

ನೋವ ಸ್ಕೋಟಿಯಾದ "ವಿಶ್ವವಿ ಖ್ಯಾತ ಕ್ಯಾಬಾಟ್ ಟ್ರೈಲ್ - World Famous Cabot Trail" ನಿಸರ್ಗ ಸೌಂದರ್ಯ ನಮ್ಮನ್ನ ಕೈ ಬೀಸಿ ಕರಿದಿತ್ತು , 186 ಮೈಲಿಗಳ ಕ್ಯಾಬಾಟ್ ಟ್ರೈಲ್ ಕೆನಡಾ ಭೂಮಿಯ ಈಶಾನ್ಯ ದಿಕ್ಕಿನ ತುತ್ತ ತುದಿಯಲ್ಲಿ ಕೇಪ್ ಬ್ರೆಟನ್ ನ್ಯಾಷನಲ್ ಪಾರ್ಕಿನಲ್ಲಿ ಇದೆ. ಸುಂದರ ಸಮುದ್ರ ತೀರದಲ್ಲೇ ಹಸಿರಿನ ರಾಶಿ ಹೊತ್ತಿರುವ ಮನಮೋಹಕ ಬೃಹತ್ ಪರ್ವತಗಳ ಸರಣಿ, ಪರ್ವತಗಳ ಸರಣಿಗಳನ್ನು ಸರ್ಪದ ತರಹ ಬೆಸೆಯುವ ಸುಂದರ ರಸ್ತೆಗಳು., ಅಲ್ಲಲ್ಲಿ ಸುಂದರ ಟ್ರೆಕಿಂಗ್ ಟ್ರೈಲ್'ಗಳು! ಅದರಲ್ಲಿ ಒಂದು "ಸ್ಕೈಲೈನ್ ಟ್ರೈಲ್ - Skyline Trial" 2 - 3 ಮೈಲಿ ನಡೆದರೆ ಎತ್ತರದ ಬೆಟ್ಟದ ತುದಿಯಲ್ಲಿ ನಿಂತ ನಮಗೆ ಆಕಾಶ ಕೈಗೆ ಎಟುಕಬಹುದೇನೋ ಅನುಭವ. ಕೆಳಗೆ ಪ್ರಪಾತದಲ್ಲಿ ಅಘಾದ ಅಟ್ಲಾಂಟಿಕ್ ಮಹಾಸಾಗರ, ಹತ್ತಾರು ಮೈಲಿಗಳು, ಸಮುದ್ರದ ನೀರು ಸೂರ್ಯನ ಬೆಳಕಿನಲ್ಲಿ ಮುತ್ತಿನಂತೆ ಮುತ್ತುಗಳಂತೆ ಮಿಂಚುತ್ತಿತ್ತು; ಅಮೋಘ ನೈಸರ್ಗಿಕ ಸೌಂದರ್ಯ ಸವೆಯುತ್ತಾ ಸಮಯ ಹೋಗಿದ್ದೆ ಗೊತ್ತಾಗಲಿಲ್ಲ. ಫೋರ್ಟ್ ಹುಡ್, ಮಾರ್ಗರಿ, ಇನ್ವರ್ನೆಸ್, ಚೆಟ್ಟಿಕ್ಯಾಂಪ್, ಕ್ಯಾಬಾಟ್ ಟ್ರೈಲ್ ಹತ್ತಾರು ಸಣ್ಣ ಪುಟ್ಟ ಟ್ರೆಕ್ ಟ್ರಯಲ್ ನಡೆದು, ಸೂರ್ಯಾಸ್ತದ ಸೌಂದರ್ಯ ಸವಿಯುತ್ತಾ ಸ್ವಲ್ಪ ಹೊತ್ತು ಕಳೆದೆವು. ಅಷ್ಟು ಹೊತ್ತಿಗೆ ಕಾತ್ತಲಾಗುತಿತ್ತು , ಅರಿವಾಗುವಷ್ಟರಲ್ಲಿ ಮಂಜು ಮುಸುಕು ಆವರಿಸಿತ್ತು. ರಾತ್ರಿ ಕಳೆಯಲು ರಿಸರ್ವ್ ಮಾಡಿದ್ದ ಟ್ರಾವೆಲ್ಸ್ ಇನ್ನ್ - ವಿಕ್ಟೋರಿಯಾ ತಲುಪಲು ಇನ್ನೂ ಎರೆಡು ಘಂಟೆ ರಸ್ತೆ. ಕತ್ತಲಿನಲ್ಲಿ ಕಾರು ಓಡಿಸುತ್ತಿದ್ದಾಗ ತಣ್ಣಗಿನ ವಾತಾವರಣದಲ್ಲೂ ಬೆವರು ಸುರಿದಿತ್ತು, ಹೋಟೆಲ್ ಬಂದು ಸೇರಿದ ಮೇಲೆ ನಿಟ್ಟುಸಿರು ಬಿಟ್ಟೆವು! ಇನ್ನು ಮುಂದೆ ಕತ್ತಲಾಗುವಷ್ಟರಲ್ಲಿ ಉಳಿಯುವ ಜಾಗ ಸೇರಬೇಕೆಂಬ ಪಾಠ ಕಲಿತೆ; ಹೊಟ್ಟೆ ಚುರ್ ಎನ್ನುತ್ತಿದೆ ಹಸಿವಾಗಿದೆ ಅಂತಾ ಗೊತ್ತಾಯಿತು; ಕಾರಲ್ಲಿದ್ದ ಕುರುಕು, ಹಣ್ಣುಗಳು ಮುಗಿದಿತ್ತು.



1. ಮೂಸ್ ಪಳೆಯುಳಿಕೆ ( ದೊಡ್ಡ ಜಿಂಕೆಯಂತ ಪ್ರಾಣಿ) 2,3,4,6 - ಕ್ಯಾಬಾಟ್ ಟ್ರೈಲ್ ನ ರಮಣೀಯ ನೋಟ 5 - ಅಮೋಘ ಸ್ಕೈ ಲೈನ್ ಟ್ರೈಲ್

ಏನಪ್ಪಾ ಮಾಡೋದು ಅಂತ ಹೋಟೆಲಿನ ಮ್ಯಾನೇಜರ್ ಜೊತೆ ಮಾತಾಡುತ್ತಾ, ಚೆಕ್ ಇನ್ ಆಗಬೇಕು ರೆಸೆರ್ವಶನ್ ಇದೆ ಎಂದಾಗ;  ಬಂದ್ರಾ ಹ್ಯಾಲಿಫ್ಯಾಕ್ಸ್ ಸುತ್ತ ಭಾರೀ ಮಳೆ ಬಿದ್ದು ತುಂಬಾ ಜನ  ಬರಲಿಲ್ಲಾ, ತಡವಾಗಿರುವುದರಿಂದ ನೀವು ಬರ್ತಿರೋ ಇಲ್ವೋ ಅನ್ಕೋತಿದ್ವಿ. ರಾತ್ರಿ ಊಟಕ್ಕೆ ಹತ್ತಿರ ರೆಸ್ಟೋರೆಂಟ್ ಇದೆಯಾ ? ಏನ್ ಸಿಗಬಹುದು ಅಂತ ಕೇಳಿದಾಗ… ರಾತ್ರಿ 10 ಆಗಿದೆ ಹೋಟೆಲ್'ಗಳು 20-30 ಕಿಲೋಮೀಟರ್ ದೂರ, ಅದೆಲ್ಲಾ ಮುಚ್ಚಿರುತ್ತದೆ ಎಂದಾಗ ಸಂಜೇನೇ ಊಟ ಪ್ಯಾಕ್ ಮಾಡ್ಕೋಬೇಕಿತ್ತು, ಬೇಕೆಂದಾಗ ಸಿಗೋದಿಲ್ಲಾ ಎಂದು  ಮಾತಾಡಿಕೊಳ್ಳುವಾಗ..  ನಮ್ಮ ಹ್ಯಾಪೆ ಮೊರೆ ನೋಡಿ, ಇರಿ ಬ್ರೇಕ್ ಫಾಸ್ಟ್ 'ಗೆ ಅಂತ ಅವನ ಹತ್ತಿರ ಇದ್ದ ಸ್ಯಾಂಡ್ ವಿಚ್, ಹಣ್ಣುಗಳನ್ನು ನೀಡಿದ. ಕೃತಜ್ಞತೆಯಿಂದ ತಿನ್ನುತ್ತಾ, ಹೋಟೆಲ್ ಮ್ಯಾನೇಜರ್ ಹೇಗಾದೆ ಅಂತ ಕೇಳಿದೆ? ಇದು ನನ್ನದೇ ಹೋಟೆಲ್ ಎಂದಾಗ ಅಚ್ಚರಿ ಮೂಡಿತು, ನನ್ನ ಹೆಸರು ಹುಸೈನ್; ಪಾಕಿಸ್ತಾನದಿಂದ ಕೆನಡಾಗೆ ೨೫ ವರುಷದ ಹಿಂದೆ ವಲಸೆ ಬಂದು ಟೊರೊಂಟೊ ಹತ್ತಿರ ನೆಲೆಸಿದ್ದೀವಿ ೧೦ ವರುಷದ ಹಿಂದೆ ಈ ಹೋಟೆಲ್ ಇನ್ವೆಸ್ಟ್ಮೆಂಟ್ ಮಾಡಿದೆ, ಬೇಸಿಗೆಯಲ್ಲಿ ಬಂದು ನಾನೂ ನೋಡ್ಕೋತೀನಿ, ಒಬ್ಬ ಹುಡುಗ ಪಾಕಿಸ್ತಾನದಿಂದ ಬಂದಿದ್ದಾನೆ ಅವನು ವರುಷ ಪೂರಾ ಮ್ಯಾನೇಜರ್ ಆಗಿ ಇಲ್ಲೇ ಇರ್ತಾನೆ.  ಒಳ್ಳೆ ರೂಮ್ ಕೊಟ್ಟಿದ್ದೇನೆ, ಮಲ್ಕೊಳ್ಳಿ ತುಂಬಾ ಹೊತ್ತಾಗಿದೆ… ಹುಸೈನ್'ಗೆ ತುಂಬು ಹೃದಯದ ಧನ್ಯವಾದ ತಿಳಿಸಿ, ಬೆಳಗ್ಗೆ ಸಿಗುವ ಎಂದು ರೂಮಿಗೆ ಬಂದು ಮಲಗಿದೆವು !

ಬೆಳಕು ಹರಿದಂತೆ ಬೆಟ್ಟದ ಮೇಲೆ ಇರುವುದು ಅರಿವಾಯಿತು; ಮುಂದೆ ಸುಂದರವಾಗಿ ಬೆಳ್ಳಿ ಮಂಜಿನ ಮುಸುಕು ಏರುತಿತ್ತು ಬ್ರಾಸ್ ಡಿ'ಆರ್ ಸಮುದ್ರದಂತೆ ಇರುವ ಬೃಹತ್ ಕೆರೆ ಕಂಗೊಳಿಸಿತು; ಎದುರು ಮತ್ತೊಂದ್ ಹಸಿರು ಬೆಟ್ಟದ ಸಾಲು! ಹುಸೈನ್'ನ ಮೋಟೆಲ್ ಎಂತಹ ಸೊಗಸಾದ ಜಾಗದಲ್ಲಿ ಇದೆ. ಕಾಪಿ ತಿಂಡಿಯ ಜೊತೆ ನಿಸರ್ಗ ಸವಿದೆವು, ಕ್ಯಾಬಾಟ್ ಟ್ರೈಲ್ ಮತ್ತು ಟ್ರಾವೆಲ್ಸ್ ಇನ್ನ್ - ವಿಕ್ಟೋರಿಯಾ ಅಮೋಘವಾದ ಜಾಗಗಳು !

ಕ್ಯಾಬಾಟ್ ವಿಸ್ತಾರ ಮತ್ತು ಸೌಂದರ್ಯ ಅಕೆಡಿಯಾ'ಗಿಂತಾ ಹತ್ತು ಪಟ್ಟು ಹೆಚ್ಚು ಎಂದರೆ ಅತಿಶಯೋಕ್ತಿಯಾಗದು… ಒಮ್ಮೆ ಬೆಟ್ಟಿ ಕೊಡುವ ಜಾಗವೇ ಸರಿ ! ಹುಸೈನ್'ಗೆ ಮತ್ತೊಮ್ಮೆ ಧನ್ಯವಾದ ತಿಳಿಸಿ; ನಾರ್ತ್ ಸಿಡ್ನಿ ಪೋರ್ಟ್ ಕಡೆ ಹೊರಟೆವು.
















1, 2,3,4,5 - ಕ್ಯಾಬಾಟ್ ಟ್ರೈಲ್ ನ ರಮಣೀಯ ನೋಟ

5, 6 - ಸುಂದರ ಟ್ರಾವೆಲ್ಸ್ ಇನ್ನ್ - ವಿಕ್ಟೋರಿಯಾ, ಮಾಲೀಕ ಹುಸೇನ್ ಜೊತೆ

ನ್ಯೂ ಫೌಂಡ್ ಲ್ಯಾಂಡ್ & ಲ್ಯಾಬ್ರಡಾರ್ - NFL ಮುಟ್ಟಲು 96 ನಾಟಿಕಲ್ ಮೈಲ್ಸ್ ದೂರ 7 ಗಂಟೆಗಳ ಕಾಲದ ಸಮುದ್ರ ಪ್ರಯಾಣಕ್ಕೆ ನಾರ್ತ್ ಸಿಡ್ನಿ ಪೋರ್ಟ್'ಲ್ಲಿ ನಮ್ಮ ಕಾರನ್ನು ಹಡಗಿಗೆ ಹತ್ತಿಸಿದೆವು, ಊಟ ಮುಗಿಸಿ ಹಡಗಿನ ಸಹಚರರು ಕೊಟ್ಟ ಹೊದಿಕೆ ಹೊದ್ದು ಆರಾಮ ಕುರ್ಚಿಯಲ್ಲೇ ನಿದ್ದೆ ಮಾಡಿದೆವು. ಬೆಳಗ್ಗೆ ೮ಕ್ಕೆ "ಪೋರ್ಟ್ ಆಕ್ಸ್ ಬಾಸ್ಕ್ಸ್" ತಲುಪಿದೆವು. ನನ್ನ ಮೊದಲ ಉದ್ಗಾರ - ಆಹಾ Land, Found Land - New Found Land ! 2,500 ಮೈಲಿ ಪ್ರಯಾಣ ಮಾಡಿ ಗುರಿ ಮುಟ್ಟಿದಾಗ ಬೃಹತ್ ಸಾಧನೆಯ ಅಮೋಘ ಅನುಭವ !




1. ಕೆನಡಾ ಮೇನ್ ಲ್ಯಾಂಡ್ ಇಂದ ಹಡಗಿನಿಂದ ಕಾಣುವ ಪೋರ್ಟ್ ಆಕ್ಸ್ ಬಾಸ್ಕ್ಸ್ ನಗರ

2. NFL ಮುಟ್ಟಿದ ಸಂಭ್ರಮದ ಫ್ಲೈಯರ್

3. NFLಗೆ ಹೋಗುತ್ತಿರುವ ಹಡಗಿನ ಮೇಲೆ ಬೆಳಗಿನ ಜಾವ ಸಮುದ್ರದ ಮಂಜು ಎಳುಭುತ್ತಿರುವ ದೃಶ್ಯ

4. ಪೋರ್ಟ್ ಆಕ್ಸ್ ಬಾಸ್ಕ್ಸ್ ಸೂರ್ಯ ಮುಳುಗುತ್ತಿರುವ ತೀರಗಳ ಝಲಕ್

NFL ಬಗ್ಗೆ ಮಾಹಿತಿ. NFL ಕೆನಡಾದ ದ್ವೀಪ ರಾಜ್ಯ, ಇಡೀ ರಾಜ್ಯದಲ್ಲಿ ಕೇವಲ 0.5 ಮಿಲಿಯನ್ (5 ಲಕ್ಷ ) ಜನರಿದ್ದಾರೆ.

ಜನ ಬೇಸಿಗೆ ಕಾಲದಲ್ಲಿ ಬೆಳೆಗಳನ್ನು ಬೆಳೆಯುತ್ತಾರೆ, ಸಮುದ್ರ ಬಹುತೇಕ ಆಹಾರದ ಬೇಡಿಕೆಗಳನ್ನು ಈಡೇರಿಸುತ್ತದೆ, ಮಿಕ್ಕೆಲ್ಲಾ ಸಾಮಗ್ರಿಗಳು ಹಡಗಿನ ಮುಖಾಂತರ ಕೆನಡಾ ಮೇನ್ ಲ್ಯಾಂಡ್ ಇಂದ ಸಾಗಣೆ ಆಗಬೇಕು ಹಾಗಾಗಿ ಹಡಗು ತುಂಬಾ ಟ್ರೆಕ್ಕುಗಳು ತುಂಬಿತ್ತು.

ಏಪ್ರಿಲ್ 1912 ಚಳಿಗಾಲದಲ್ಲಿ ಬೃಹತ್ "ಟೈಟಾನಿಕ್ ಹಡಗು" NFL'ನಿಂದ ಸ್ವಲ್ಪ ದೂರದಲ್ಲೇ ಅಟ್ಲಾಂಟಿಕ್ ಮಹಾಸಾಗರದಲ್ಲಿ ಮುಳುಗಿದ್ದು !!! ಇಂದಿಗೂ ಬೇಸಿಗೆಯಲ್ಲಿ ಜನರು shipwreck ಹುಡುಕಲು, ನೋಡಲು , ಡೈವ್ ಮಾಡಲು ಇಲ್ಲಿಗೆ ಬರುತ್ತಾರೆ.

ಲ್ಯಾಬ್ರಡಾರ್ ಹೆಸರಿನ ನಾಯಿ ಬಗ್ಗೆ ಕೇಳಿರುತ್ತೀರಿ, ಈ ಜಾತಿಯ ನಾಯಿಗಳು NFLಗೆ ಮೂಲ.

ಪೂರಾ ದಿವಸ ಜೋನ್ಸ್ ನ್ಯಾಷನಲ್ ಪಾರ್ಕ್, ಕಾಡ್ರಾಯ್ ವ್ಯಾಲಿ ನ್ಯಾಷನಲ್ ಪಾರ್ಕ್, ಕೇಪ್ ಅಂಗಿಲ್ ಲೈಟ್ ಹೌಸ್ , ರೊಸೆ ಬ್ಲ್ಯಾಂಚೆ ಹಾರ್ಬರ್, ಪೋರ್ಟ್ ಆಕ್ಸ್ ಬಾಸ್ಕ್ಸ್ ಪಟ್ಟಣ ಸುತ್ತಾಡಿದ ನಂತರ ಊಟ ಮಾಡಿ ರಾತ್ರಿ ಕಾರನ್ನು ಹಡಗಿಗೆ ಹತ್ತಿಸಿ ನಾರ್ತ್ ಸಿಡ್ನಿ ಪೋರ್ಟ್ಗೆ ತಲುಪಲು ಸಿದ್ದರಾದೆವು. NFL ಯುರೇಷಿಯನ್ ಟೆಕ್ಟಾನಿಕ್ ಪ್ಲೇಟ್'ಗಳು ಸಹಸ್ರಾರು ವರುಷಗಳ ಘರ್ಷಣೆಯಿಂದ ನಿರ್ಮಿತವಾದ ಬೃಹತ್ ಪರ್ವತಗಳ ಶ್ರೇಣಿಗಳು, ಕಂದಕಗಳು, ಡ್ರಾಮಾಟಿಕ್ ಕಡಲ ತೀರಗಳನ್ನು ಅನುಭವಿಸಲು ವಾರವಾದರೂ ಬೇಕಿತ್ತು ಎಂಬ ಭಾವನೆ ಕಾಡಿತು; ನಿದ್ರೆಗೆ ಜಾರಿ ಬೆಳಗ್ಗೆ ನೋವಾ ಸ್ಕೋಟಿಯಾ ತಲುಪಿದೆವು.



ಸುಪ್ರಸಿದ್ಧ “ಅಕೆಡಿಯಾ ನ್ಯಾಷನಲ್ ಪಾರ್ಕ್” ನಮ್ಮ ಮುಂದಿನ ನಿಲ್ದಾಣ ತಲುಪಲು ಯಾರ್ಮೌಥ್, ಡಿಗ್ಬಿ , ಸಂತ ಜಾನ್ಸ್ ನಗರ, ನ್ಯೂ ಬ್ರುನ್ಸ್ವಿಕ್ ರಾಜ್ಯದ ಮುಖೇನ ಅಮೆರಿಕಾ ಪ್ರವೇಶಿಸಿದೆವು. ಅಕಾಡಿಯ ಅಮೆರಿಕಾದ ನಿಸರ್ಗ ಸೌಂದರ್ಯದ ಮಡಿಲು, ಅಕಾಡಿಯ ಪಾರ್ಕಿನ 27 ಮೈಲಿಗಳ ರಮಣೀಯ ರಸ್ತೆ ಲೂಪ್ ಒಳಗೆ ಹೋಗಲು 35 ಡಾಲರ್ ಟಿಕೆಟ್ ಪಡೆದು ಆಕರ್ಷಣೆ ಜಾಗಗಳಾದ ಜೋರ್ಡನ್ ಪಾಂಡ್, ಥಂಡರ್ ಹೋಲ್, ಆಟರ್ ಕ್ಲಿಫ್, ಸ್ಯಾಂಡ್ ಬೀಚ್ ಮತ್ತು ಹಲವಾರು ಜಾಗಗಳಿಗೆ ಭೇಟಿ ಕೊಟ್ಟೆವು. ದಾರಿಯಲ್ಲೇ ಕಾರ್ ಪಾರ್ಕ್ ಮಾಡಿ ವಾಕ್ ಟ್ರೈಲ್'ಗಳನ್ನು ಹತ್ತಿ ಸುಂದರ ಸಮುದ್ರಕ್ಕೆ, ಬೆಟ್ಟದ ಕಡೆ ನಡೆದು ಹೋದೆವು ಪ್ರತಿಯೊಂದು ಜಾಗವೂ ಮನಸ್ಸಿಗೆ ಮುದ ತುಂಬುವ ಅನುಭವ. ಸಂಜೆ ಮೌಂಟ್ ಡೆಸರ್ಟ್ ಐಲ್ಯಾಂಡ್, ಸುಂದರ ವಿಲೇಜ್ ಸೆಂಟರ್ ಕಡೆ ಅಡ್ಡಾಡಿ ಊಟ ಮುಗಿಸಿ ಮಲಗಿದೆವು.

ಬೆಳಿಗ್ಗೆ ಅಕಾಡಿಯದ ಸುಪ್ರಸಿದ್ಧ 1530 ಅಡಿ ಎತ್ತರದ ಕ್ಯಾಡಿಲಾಕ್ ಬೆಟ್ಟ ಟ್ರೆಕ್ ಹತ್ತಲು ಶುರು ಮಾಡಿದೆ, ಕ್ಯಾಡಿಲಾಕ್ ಹತ್ತುವುದಕ್ಕೆ ಕಠಿಣವಾದರೂ ಹತ್ತಿದ ಮೇಲೆ ಕಣ್ಣಿಗೆ ಸಿಗುವ ಸುಂದರ ನೋಟ, ಅಲ್ಲಿನ ಪರಿಸರ ಮತ್ತು ಸಮುದ್ರದ ಮೇಲೆ ಸೂರ್ಯೋದಯದ ಪಕ್ಷಿ ನೋಟ ಅವಿಸ್ಮರಣೀಯ, ದಣಿವು ಕ್ಷಣ ಮಾತ್ರದಲ್ಲಿ ಮಾಯಾವಾಯಿತು.

ಪ್ರವಾಸಗಳ ಪ್ರಮುಖ ಉದ್ದೇಶ ಸ್ಥಳ ವೀಕ್ಷಣೆ, ಜೊತೆಗೆ ಲೋಕಲ್
ತಿನುಸುಗಳನ್ನೂ ಸವಿಯುವ ಒಂದು ಅವಕಾಶ ಕೂಡ ! ಅಮೆರಿಕ ಪ್ರವಾಸದಲ್ಲಿ
ಸಹವಾಸದಿಂದ ಯೋಗಿ ಕೂಡ ಬಹುತೇಕ ಸಸ್ಯಾಹಾರಿಯಾಗಿ ಹೋಗಿದ್ದಾ. ಅ
೧೭ ದಿನದ ಪ್ರವಾಸದಲ್ಲಿ ನಾನು ಹೆಚ್ಚಾಗಿ ಸಬ್ ವೇ ವೆಜ್ ಸ್ಯಾಂಡ್ ವಿಚ್
ತಿನಿಸಿದ್ದೇ ಹೆಚ್ಚು ! ಒಳಗೊಳಗೇ ಅಮೆರಿಕಾ ಅಟ್ಲಾಂಟಿಕ್ ಮಹಾಸಾಗರದ “
ಲಾಬ್ಸ್ಟರ್” ತಿನ್ನಬೇಕೆಂಬ ಬಯಕೆ ಇತ್ತು... ಅಕೆಡಿಯಾದಲ್ಲಿ ನಮ್ಮ ಪಕ್ಕದ
ಹೋಟೆಲ್ “ಬಾರ್ ಹಾರ್ಬರ್ - ಲಾಬ್ಸ್ಟರ್ ಪೌಂಡ್” ಯೋಗಿಯನ್ನು ಕೈ
ಕರೆದಿತ್ತು. ಒಂದು ದಿನ ಮಧ್ಯಾಹ್ನ ನಾನು ಕೆಲಸದಲ್ಲಿ ನಿರತವಾಗಿದ್ದಾಗ ಒಬ
ಪಕ್ಕದ ಹೋಟೆಲ್'ಗೆ ಲಗ್ಗೆ ಇಟ್ಟು ರಸವತ್ತಾದ ಲಾಬ್ಸ್ಟರ್ ಭೋಜನ ಹೊ
ಬಂದು, ಅನುಭವ ಹಂಚಿಕೊಂಡ ! ಯೋಗಿಯ ಆನಂದದ ಅನುಭವ ಪದಗಳಲಿ
ಹೇಳತೀರದು, ಅದಕ್ಕಾಗಿ ಈ ಚಿತ್ರ ನಿಮ್ಮ ಮುಂದೆ...






ಯೋಗಿಯ ಲಾಬ್ಸ್ಟರ್ ಖಯಾಲಿ !



ರಮಣೀಯ ಮೈನ್ ನಂತರ ಬಾಸ್ಟನ್ ಮಹಾ ನಗರ ತಲುಪಿದೆವು; ಹಾರ್ವರ್ಡ್, ಕ್ಯಾಂಬ್ರಿಡ್ಜ್ ವಿಶ್ವ ವಿದ್ಯಾಲಯ, ಎಂ. ಐ. ಟಿ ಮತ್ತು ಇತರೆ ಡೌನ್ ಟೌನ್ ಜಾಗಗಳನ್ನು ನೋಡಿ ಯೋಗಿ ಬಹಳ ಸಂತೋಷ ಪಟ್ಟ. ಹತ್ತಿರದ ಹಾಪ್ ಕಿಂಟನ್'ನಲ್ಲಿ ನೆಲಸಿರುವ ನನ್ನ ಮಿತ್ರ ರಾಜೀವ್ ಮಹಾಲಿಂಗ ಮತ್ತು ಸೌಮ್ಯ 'ರ ಮನೆಗೆ ತೆರಳಿದೆವು, ಪುಟಾಣಿ ಸಾಂಚಿತಾ ಜೊತೆ ಆಟವಾಡಿ, ಹರಟೆ ಹೊಡೆದು ಮಸಾಲೆ ದೋಸೆ ತಿನ್ನುವಷ್ಟರಲ್ಲಿ, ಸಮಯ ಕಳೆದಿದ್ದೇ ಗೊತ್ತಾಗಲಿಲ್ಲಾ. ಬಾಸ್ಟನ್ ಇಂದ ೪ ಗಂಟೆ ಪ್ರಯಾಣ ಮಾಡಿ "ನ್ಯೂ ಜೆರ್ಸಿ'ಯ ನಮ್ಮ ಮನೆ ನಂದನ ವನಕ್ಕೆ" ಬಂದು ತಲುಪಿದೆವು.

**17 ದಿನಗಳಲ್ಲಿ 7,240 kilometers ಕ್ರಮಿಸಿದೆವು!** ನಮ್ಮ ಈ 4,500 ಮೈಲಿಗಳ ಸಾಹಸದ ಪಯಣಕ್ಕೆ ಜೊಟ್ಟೆ ಕೊಟ್ಟ "ನಿಸ್ಸಾನ್ ಕಿಕ್ಸ್ ಕಾರು" ಉತ್ತಮ ಮಿತ್ರನಾಗಿ, ಜೊತೆಗಾರನಾಗಿ ಅದ್ಭುತ ರಸ್ತೆ ಪ್ರವಾಸದ ಅನುಭವ ತಂದು ಕೊಟ್ಟಿತ್ತು ! **ಪ್ರವಾಸ ಮುಗಿಸಿ 'ಕಿಕ್ಸ್ ಕಾರಿ'ಗೆ ಧನ್ಯವಾದ ತಿಳಿಸಿ ಹರ್ಟ್ಜ್ ಕಾರ್ ರೆಂಟಲ್'ಗೆ ಹಿಂದುರಿಗಿಸಿ ಬಂದೆವು.**



"ಮಲ್ಲಿಕ್ - ಯೋಗಿ - ನಿಸ್ಸಾನ್ ಕಿಕ್ಸ್" 17 ದಿನದ 4,500 ಮೈಲಿಗಳ (7,240 ಕಿಲೋ ಮೀಟರ್) ಅವಿಸ್ಮರಣೀಯ ರಸ್ತೆ ಪ್ರವಾಸದ ಅನುಭವ ಹೀಗೆ ಮುಗಿಯಿತು, ಬೆಂಗಳೂರಿಗೆ ಹೊರಡಲು ಯೋಗಿ ಶಾಪಿಂಗ್ ಕಡೆ ಮನಸ್ಸು ತಿರುಗಿಸಿದ.

ಉತ್ತರ ಅಮೇರಿಕ ಖಂಡದ ಉತ್ತರ ಧ್ರುವದಿಂ ದಕ್ಷಿಣ ಧ್ರುವಕೂ… ಅಮೇರಿಕಾದ ಉತ್ತರ ಧ್ರುವದಿಂ ದಕ್ಷಿಣ ಧ್ರುವಕೂ !


ಅಮೆರಿಕಾದ ಮೈನ್ ರಾಜ್ಯದ ಈಶಾನ್ಯ ತುದಿಯಿಂದ ಈಸ್ಟ್ ಕೋಸ್ಟ್ ರೌಟ್ 1 ರಸ್ತೆ ಶುರುವಾಗುತ್ತದೆ; ಈ ರೌಟ್ 1 ಮೇನ್ ರಾಜ್ಯದಿಂದ ಶುರುವಾಗಿ ಪೂರ್ಣ ಈಸ್ಟ್ ಕೋಸ್ಟ್ ರಾಜ್ಯಗಳು ಪಾತ್ರವಾಗಿಸುತ್ತಾ ಹಲವಾರು ಪಟ್ಟಣಗಳು, ನಗರಗಳು, ಮಹಾನಗರಗಳನ್ನ ಪೋಣಿಸಿತ್ತಾ ಅಮೆರಿಕಾದ ದಕ್ಷಿಣದ ತುತ್ತ ತುದಿ ಫ್ಲೋರಿಡಾದ ಕೀ ವೆಸ್ಟ್ ವರೆಗೂ 2,000+ ಮೈಲಿಗಳ ಉದ್ದ ವಿಸ್ತರಿಸುತ್ತದೆ.

ಚೀನಾ ವೈರಸ್ ಪಾಂಡೆಮಿಕ್ ಸಂದರ್ಭದಲ್ಲಿ ನ್ಯೂ ಜೆರ್ಸಿಯಿಂದ ಫ್ಲೋರಿಡಾದ ಕೀ-ವೆಸ್ಟ್ ವರೆಗೂ 3,200 ಮೈಲಿಗಳ ಟೆಸ್ಲಾ ರಸ್ತೆ ಪ್ರವಾಸ ಕುಟುಂಬದವರ ಜೊತೆ ಕೈ ಗೊಂಡಿದ್ದ ! ಅಂದು ಡಿಸೆಂಬರ್ 2020ರಲ್ಲಿ ನ್ಯೂ ಜೆರ್ಸಿಗೆ ಹಿಂದಿರುಗುವಾಗ ಅಮೆರಿಕಾದ ಈಶಾನ್ಯ ತುತ್ತ ತುದಿಗೆ ರಸ್ತೆ ಪ್ರವಾಸ ಹೋಗೋಣ ಎಂಬ ಆಶೆ ಚಿಗುರಿತ್ತು ಜೂಲೈ 2023ಲ್ಲಿ 4,500 ಮೈಲಿಗಳ NFL ರಸ್ತೆ ಪ್ರವಾಸದೊಂದಿಗೆ ಈ ಕನಸು ಗೆಳೆಯ ಯೋಗಿಯ ಜೊತೆ ನನಸಾಯಿತು... ಧನ್ಯವಾದ ಯೋಗಿ

ಉತ್ತರ ಅಮೇರಿಕಾ ಖಂಡದ ಈಸ್ಟ್-ಕೋಸ್ಟ್ ಉದ್ದಕ್ಕೂ ೨ ಭಾಗಗಳಲ್ಲಿ 2,600 ಮೈಲಿಗಳ (4,200 ಕಿಲೋ ಮೀಟರ್) ರಸ್ತೆ ಪ್ರವಾಸ ಸುರಕ್ಷಿತವಾಗಿ ಕೈಗೊಂಡ ಸುವರ್ಣ ಅವಕಾಶಕ್ಕೆ ಕೃತಜ್ಞ 🙏












1. ಅಮೆರಿಕಾದ ಮೈನ್ ರಾಜ್ಯದ ಈಶಾನ್ಯ ತುದಿಯಲ್ಲಿ ರೌಟ್ 1 ಆರಂಭ 2. ಅಮೇರಿಕ , ಕೆನಡಾ ನಕ್ಷೆ ಯಲ್ಲಿ ಈಸ್ಟ್-ಕೋಸ್ಟ್ ಉದ್ದಕ್ಕೂ ರಸ್ತೆ ಪ್ರವಾಸದ ಪೂರ್ಣ ಚಿತ್ರಣ 3. ಉತ್ತರ ಅಮೆರಿಕಾ ಖಂಡದ ಈಶಾನ್ಯ ತುದಿಯ ಭೂ ಭಾಗ NFL ಪೋರ್ಟ್ ಆಕ್ಸ್ ಬಾಸ್ಕ್ಸ್ ನಿಸ್ಸಾನ್ ಕಿಕ್ಸ್ ಕಾರಿನಲ್ಲಿ ರಸ್ತೆ ಪ್ರವಾಸ ಮುಟ್ಟಿದ ಸಂಭ್ರಮ - ಜೂಲೈ 2023 4. ಫ್ಲೋರಿಡಾದ ಕೀ ವೆಸ್ಟ್ ನಗರದ ಅಮೇರಿಕಾದ ದಕ್ಷಿಣದ ತುತ್ತ ತುದಿಯ ಭೂ ಬಾಗ ಅಲ್ಲಿ ರೌಟ್ 1 ಅಂತ್ಯ; ನಮ್ಮ ಟೆಸ್ಲಾ ಕಾರಿನ 3,200 ಮೈಲಿಗಳ ರಸ್ತೆ ಪ್ರವಾಸದದಲ್ಲಿ ಇಲ್ಲಿ ಮುಟ್ಟಿದ ಸಂದರ್ಭ ಡಿಸೆಂಬರ್ 2020 5. ಉತ್ತರ ಅಮೇರಿಕಾ ಖಂಡದ ಈಸ್ಟ್-ಕೋಸ್ಟ್ ಉದ್ದಕ್ಕೂ ೨ ಭಾಗಗಳ ರಸ್ತೆ ಪ್ರವಾಸ ಕೈಗೊಂಡ ಅವಕಾಶ; ಕ್ಯೂಬಾ ದೇಶ ಇಲ್ಲಿಂದ 90 ಮೈಲಿ ದೂರವಷ್ಟೇ...

# ಕವನಗಳು







# ನಾ ನನ್ನ ಹಾದಿಯಲಿ

**ಕಲ್ಪನಾ ಕೆ.ಎಸ್.,** *ಮಳಗಲೆ ಗ್ರಾಮ, ಹಾಸನ*

## ಮರುಳೇ

ಎಲೇ ಮರುಳೇ
ಹೀಗೇಕೆ ನಿಂದಿರುವೆ
ಕಳೆದುಹೋದ ಭಾವದಲ್ಲಿ
ಮರೆಯಾಗದಿರಲಿ ಮಂದಹಾಸ
ಎಂದಿಗೂ ಮೊಗದಲಿ
ನಾಳೆಯ ಚಿಂತೆಯಲಿ
ಕರಗದಿರಲಿ ಇಂದಿನ
ರಸಘಳಿಗೆಗಳು
ನಿನ್ನ ನಡೆನುಡಿಗಳು
ಬೆಳಕಾಗಲಿ ಪರರ ಬದುಕಲಿ
ಸ್ವಾವಲಂಬಿಯ ಬದುಕು
ಸಿಗಲೋಲ್ಲದು ಪರರ ಹಂಗಲಿ
ಕಹಿನೆನಪುಗಳ ಮರೆಯುತ
ಸಿಹಿ ನೆನಪುಗಳ ಮೆಲಕುತ
ಸಾಗಲಿ ನಿನ್ನ ಪಯಣ
ಉನ್ನತಿಯ ಪಥದಲಿ.






## ಬದುಕು ಜಟಕಾ ಬಂಡಿ

ಇರಬೇಕು ಉತ್ತಮವಾದ ಸ್ನೇಹಿತರು
ಜೀವನದ ಪುಟಗಳಲಿ.
ಇರಬೇಕು ಹಾಸ್ಯದ ಹೊನಲು
ಸಂಸಾರ ಸಾಗರದಲ್ಲಿ.
ಇರಬೇಕು ಸರಸ ಸಲ್ಲಾಪಗಳು
ದಾಂಪತ್ಯ ಜೀವನದಲ್ಲಿ.
ಬದುಕು ಹಸನಾಗಿಸಲು ಇರಬೇಕು
ಯೋಗ್ಯವಂತ ಮಕ್ಕಳು.
ಇರಬೇಕು ಒಳಿತಾದ ಆಲೋಚನೆ ಗಳು
ಉತ್ತಮವಾದ ಆರೋಗ್ಯಕ್ಕೆ.
ಭಗವಂತನ ಅನುಗ್ರಹವು ಇರಬೇಕು
ನೆಮ್ಮದಿಯ ಜೀವನಕ್ಕೆ.
ಸಾಗಲಿ ಜೀವನದ ಜಟಕಾ ಬಂಡಿ
ಏಳುಬೀಳುಗಳ ಕಷ್ಟಸುಖಗಳ ಜೊತೆಯಲಿ
ನಿರಂತರ ನಿರಂತರ.

## ಮರೆಯಾಗುತ್ತಿರುವ ಮೌಲ್ಯಗಳು

ಮರೆಯಾಗುತ್ತಿವೆ ಜೀವನದಲ್ಲಿ
ಮೌಲ್ಯಗಳಿಂದು
ಮುರಿದು ಬೀಳುತಿವೆ ನವವಿವಾಹಿತರ
ಸಂಬಂಧಗಳಿಂದು
ಹೆಣ್ಣು ತೋರಿಸುವಲ್ಲಿ ಕೇಳುವರು
ಅಪ್ಪ ಅಮ್ಮಂದಿರು ಜೊತೆ ಇರಬಾರದೆಂದು
ಗಂಡು ಹೆತ್ತವರು ಕೇಳುವರು
ಒಬ್ಬಳೇ ಮಗಳ ಎಂದು
ಎಲ್ಲಿ ಎಡುವುತಿಹರು

ತಂದೆತಾಯೀಗಳಿಂದು
ಬಾಳುತಿಹರು ಎಲ್ಲರೂ ಸ್ವಾರ್ಥದ ಬದುಕು.
ಮರೆತಿಹರು ಹೆತ್ತವರು ಮಕ್ಕಳಿಗೆ
ಮೌಲ್ಯಗಳನ್ನು ಕಲಿಸಲಿಂದು
ಇಂದಿನ ಮಕ್ಕಳಲಿ ನನ್ನ ನಮ್ರತೆಯ ವಿನಂತಿ.
ಪ್ರೀತಿಸಿರಿ ಪರಸ್ಪರ ಗೌರವಿಸಿರಿ ನಿಮ್ಮ ಕುಟುಂಬದವರನ್ನು.
ಕೈಜೋಡಿಸಿರಿ ಪರಸ್ಪರ ಕಷ್ಟಸುಖಗಳಲ್ಲಿ
ತೊರೆಯಿರಿ ಅಹಂ ದರ್ಪ ಎಂಬ
ಎರೆಡು ಪದಗಳನ್ನು
ಜೇನುಗೂಡಾಗಿಸಿರಿ ನಿಮ್ಮ ಪ್ರೀತಿಯ ಸಂಸಾರ ನೌಕೆಯನ್ನು.



**ಡಾ. ಹರಿಕುಮಾರ್**, *ನ್ಯೂಜೆರ್ಸಿ*

# ನಾ ನನ್ನ ಹಾದಿಯಲಿ

ನಿರ್ಗಮಿತ ಕರ್ತೃವೂ ನಾನೆ
ನನ್ನೊಳಗಿನ ನನ್ನ ಶತ್ರುವು ನಾನೆ
ಮುಷ್ಕರನಿರತ ಸದ್ಗುಣಗಳೆಲ್ಲಾ
ಸರಹದ್ದಿನ ಆಚೆ ಹೊರಟು ಹೋಗಿವೆ
ಹುಡುಕುವ ನಾನೇ ಚಿತ್ರ-ವಿಚಿತ್ರ....!

ಬರೆದು ಬರೆಯದ . ಮರೆತೂ
ಮರೆಯದ ಹಲವು ಸಿಹಿಕಹಿ
ಅನುಭವಗಳ ಮಾಲೆ ಮನಕೊರಳ
ಅಲಂಕರಿಸಿದೆ. ಸುಪ್ತ ಭಾವಗಳ ಸುತ್ತೋಲೆಯೊಂದು
ಆಹ್ಲಾದತೆಯತರುವುದೆ..

ಎಲ್ಲ ಭಾಷೆಗಳ ಮೀರಿ ಬೆಳೆದ
ಭಾವ ಭಾಷೆಯೊಂದು ಸುಲಿಲತವಾಗಿ
ಮಾನವ ನೀ ಹಾಡಲು ಆರಂಭಿಸು
ಅದುವೆ ನಿನ್ನ ಭಾವಬಂಧನವ
ಬಿಗಿಗೊಳಿಸಲಿ ಹಚ್ಚಹಸಿರಾಗಿರಲಿ

ಎಲ್ಲ ಪೂರ್ವ ನಿಯೋಜಿತವಲ್ಲ
ಸಲ್ಲದ ಭಾವಗಳ ಆಯೋಜನೆ
ಮಾಡಿದ ಮಾಂತ್ರಿಕನಿವನು
ಜಗದೊಡೆಯ ನಗುತ ನಗುತ ಆನಂದ ಭಾಷ್ಪಕೆ ಕಾರಣನಾದನೆ....!

# ಚಿತ್ರಕಲೆ





# ಚಿತ್ರ ಕಲೆ

**ಪವಿತ್ರ ರಾಜೀವ್** , ನ್ಯೂಜೆರ್ಸಿ





PAVI...

# ಚಿನ್ನರ ಮುತ್ತುಗಳು



ಇಶಾ, ನ್ಯೂಜೆರ್ಸಿ









**ದಿಯಾ ರಜನೀಶ**, ನ್ಯೂಜೆರ್ಸಿ





# ಕ್ಯಾಮೆರಾ ಕಣ್ಣು



# ಮೋಡದೋಕುಳಿ

ಶ್ರೀನಿವಾಸ್ ಭಟ್










# ಪ್ರಕೃತಿ ಸೌಂದರ್ಯ ರಾಶಿ


ಉಮಾ ಕರಣಮ್













# ಧನ್ಯವಾದಗಳು

8

75ನೇ ಗಣರಾಜ್ಯೋತ್ಸವದ ಶುಭಾಶಯಗಳು